ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 1 ಶನಿವಾರ 2025

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 311 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಕೆ; ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ಇಲ್ಲ

ಇಂಧನ ಸಚಿವ ಕೆ.ಜೆ.ಜಾರ್ಜ್ ಅಭಯ



ಬೆಂಗಳೂರು, ಫೆ.28– ಬೇಸಿಗೆಯಲ್ಲಿ 19,000 ಮೆಗಾ ವ್ಯಾಟ್‌ನಷ್ಟು ವಿದ್ಯುತ್ ಬೇಡಿಕೆಯನ್ನು ಪೂರೈಸಲು ಇಂಧನ ಇಲಾಖೆ ಸಿದ್ಧವಾಗಿದ್ದು, ಯಾವುದೇ ಸಂದರ್ಭದಲ್ಲೂ ಲೋಡ್ ಶೆಡ್ಡಿಂಗ್ ಮಾಡುವುದಿಲ್ಲ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಸ್ಪಷ್ಟಪಡಿಸಿದ್ದಾರೆ.

ಬೇಸಿಗೆಯಲ್ಲಿ ವಿದ್ಯುತ್ ಪೂರೈಕೆಗೆ ಸಂಬಂಧಿಸಿದಂತೆ ಎಸ್ಕಾಂಗಳ ಅಧ್ಯಕ್ಷರು ಸೇರಿದಂತೆ ಇಂಧನ ಇಲಾಖೆ ಹಿರಿಯ ಅಧಿಕಾರಿಗಳೊಂದಿಗಿನ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೇಸಿಗೆಯಲ್ಲಿ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ದಿನದ 7 ಗಂಟೆ ಮತ್ತು ಇತರ ಉದ್ದೇಶಗಳಿಗೆ ದಿನದ 24 ಗಂಟೆ ವಿದ್ಯುತ್ ಪೂರೈಸುವ ವಾಗ್ದಾನವನ್ನು ಈಡೇರಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ರಾಜ್ಯದಲ್ಲಿ ಬೇಡಿಕೆ ಇರುವಷ್ಟು ವಿದ್ಯುತ್ ಲಭ್ಯವಿದೆ. ಸ್ಥಳೀಯವಾಗಿ ತಾಂತ್ರಿಕ ಕಾರಣಗಳಿಂದ ವಿದ್ಯುತ್ ಪೂರೈಕೆ ಸ್ಥಗಿತಗೊಳ್ಳಬಹುದೇ ಹೊರತು ಲೋಡ್‌ಶೆಡ್ಡಿಂಗ್ ಮಾಡುವ ಸಂದರ್ಭ ಉದ್ಭವವಾಗುವುದಿಲ್ಲ. ವಿದ್ಯುತ್ ಬೇಡಿಕೆ ಹೆಚ್ಚುತ್ತಿದೆ ಎಂದರೆ ರಾಜ್ಯವು ಅಭಿವೃದ್ಧಿ ಪಥದಲ್ಲಿ ಮುಂದುವರಿಯುತ್ತಿದೆ. ಹೆಚ್ಚಿನ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ ಎಂದು ಅರ್ಥ ಎಂದು ತಿಳಿಸಿದರು.



ಕೆ.ಜೆ.ಜಾರ್ಜ್

ಪಂಪ್ಡ್ ಸ್ಟೋರೇಜ್, ಬ್ಯಾಟರಿ ಸ್ಟೋರೇಜ್: ರಾಜ್ಯದಲ್ಲಿ ಬೇಡಿಕೆಗಿಂತ ಹೆಚ್ಚು ವಿದ್ಯುತ್ ಉತ್ಪಾದನೆ ಆದರೂ ಸಂಗ್ರಹಣೆಗೆ ಅವಕಾಶ ಇಲ್ಲ. ಹೀಗಾಗಿ, ಶರಾವತಿ ಪಂಪ್ಡ್ ಸ್ಟೋರೇಜ್ ಮೂಲಕ 2000 ಮೆ.ವ್ಯಾ. ವಾರಾಹಿ ಪಂಪ್ಡ್ ಸ್ಟೋರೇಜ್ ಮೂಲಕ 1600 ಮೆ.ವ್ಯಾ. ಪಾವಗಡದಲ್ಲಿ 1000 ಮೆ.ವ್ಯಾ. ಸಾಮರ್ಥ್ಯದ ಬ್ಯಾಟರಿ ಸ್ಟೋರೇಜ್ ಯೋಜನೆಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಿದೆ. ಇದರಿಂದ ರಾಜ್ಯದಲ್ಲಿ ವಿದ್ಯುತ್ ಕೊರತೆಯಾಗದಂತೆ ನೋಡಿಕೊಳ್ಳಬಹುದು ಎಂದರು.

ವಿದ್ಯುತ್ ಉತ್ಪಾದನೆ ವಿವರ: ಫೆಬ್ರವರಿ 27ರ ಮಾಹಿತಿ ಪ್ರಕಾರ, ಕೆಪಿಸಿಎಲ್‌ನ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ 3,300 ಮೆ.ವ್ಯಾ., ಜಲ ವಿದ್ಯುತ್ ಘಟಕಗಳಲ್ಲಿ 2000 ಮೆ.ವ್ಯಾ. ವಿದ್ಯುತ್ ಉತ್ಪಾದನೆಯಾಗಿದೆ. ಅದೇ ರೀತಿ ಯುಪಿಸಿಎಲ್‌ನಿಂದ 1,26 ಮೆ.ವ್ಯಾ., ಸೋಲಾರ್ ಮೂಲಕ 6,655 ಮೆ.ವ್ಯಾ., ಪವನ ಮೂಲಕ 1940 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡಲಾಗಿದೆ. ಇದಲ್ಲದೆ, ಸಿಜಿಎಸ್ (ಸೆಂಟ್ರಲ್ ಜೆನರೇಟಿಂಗ್ ಸ್ಟೇಷನ್ಸ್) ನಿಂದ 6,183 ಮೆ.ವ್ಯಾ. ವಿದ್ಯುತ್ ಬಂದಿದ್ದರೆ, ಕೇಂದ್ರ ಗ್ರಿಡ್‌ನಿಂದ 600 ಮೆಗಾವ್ಯಾಟ್ ವಿದ್ಯುತ್ ಖರೀದಿಸಲಾಗಿದೆ. ಪಂಜಾಬ್ ಮತ್ತು ಉತ್ತರ ಪ್ರದೇಶದಿಂದ ವಿನಿಮಯ ಆಧಾರದ ಮೇಲೆ 700 ಮೆಗಾವ್ಯಾಟ್ ವಿದ್ಯುತ್ ಪಡೆಯಲಾಗಿದೆ ಎಂದು ತಿಳಿಸಿದರು. ಇದಲ್ಲದೆ ವಿದ್ಯುತ್ ಬೇಡಿಕೆ ಪೂರೈಸಲು ಶನಿವಾರ (ಮಾ.1) ಕೂಡ್ಲಿಯಿಂದ ಹೆಚ್ಚುವರಿಯಾಗಿ 310 ಮೆಗಾವ್ಯಾಟ್ ವಿದ್ಯುತ್ ಪಡೆಯಲಾಗುತ್ತದೆ. ಜತೆಗೆ ಬೇಡಿಕೆ ಆಧರಿಸಿ ವಿನಿಮಯ ಆಧಾರದ ಮೇಲೆ ಉತ್ತರ ಪ್ರದೇಶದಿಂದ ದಿನಕ್ಕೆ 100ರಿಂದ 1,275 ಮೆ.ವ್ಯಾ. ಮತ್ತು ಪಂಜಾಬ್‌ನಿಂದ 300 ಮೆ.ವ್ಯಾ. ವಿದ್ಯುತ್ ತೆಗೆದುಕೊಳ್ಳಲಾಗುವುದು. ಜೂನ್ ಮೊದಲ ವಾರದವರೆಗೆ ಪ್ರತಿನಿತ್ಯ 1000 ಮೆ.ವ್ಯಾ. ವಿದ್ಯುತ್ ಖರೀದಿಸಲಾಗುವುದು ಎಂದು ಮಾಹಿತಿ ನೀಡಿದರು.

ಲಿಂಕ್‌ಲೈನ್ ಮೂಲಕ ಬೇಡಿಕೆ ಈಡೇರಿಸಲು ಕ್ರಮ: ರಾಜ್ಯದ ಕೆಲವು ಸಬ್ ಸ್ಟೇಷನ್‌ಗಳ ವ್ಯಾಪ್ತಿಯಲ್ಲಿ ವಿದ್ಯುತ್ ■ 6ನೇ ಪುಟಕ್ಕೆ

ಮಕ್ಕಳ ಶಾಲಾ ದಾಖಲಾತಿಗೆ ಕನಿಷ್ಠ ವಯಸ್ಸು 6 ವರ್ಷ

ರಾಜ್ಯದ ಮಿತಿಗಿಂತ 6 ತಿಂಗಳು ಹೆಚ್ಚಿಸಿದ ಕೇಂದ್ರ ಸರ್ಕಾರ



ಬೆಂಗಳೂರು, ಫೆ.28– ಕರ್ನಾಟಕದಲ್ಲಿ ಮಕ್ಕಳನ್ನು ಒಂದನೇ ತರಗತಿಗೆ ಸೇರಿಸುವ ವಯೋಮಿತಿಯನ್ನು 5.5 ವರ್ಷಗಳಿಗೆ ನಿಗದಿಗೊಳಿಸಿ ಇತ್ತೀಚಿಗೆ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಆದರೀಗ ಕೇಂದ್ರ ಶಿಕ್ಷಣ ಇಲಾಖೆ ಹೊಸದಾಗಿ ಸುತ್ತೋಲೆಯೊಂದನ್ನು ಹೊರಡಿಸಿದ್ದು, ಅದರ ಪ್ರಕಾರ ದೇಶದ ಯಾವುದೇ ರಾಜ್ಯದಲ್ಲಿ ಮಕ್ಕಳನ್ನು ಒಂದನೇ ತರಗತಿಗೆ ದಾಖಲು ಮಾಡಿಸಲು ಆ ಮಗುವಿಗೆ ಕನಿಷ್ಠ 6 ವರ್ಷ ವಯಸ್ಸಾಗಿರಬೇಕು ■ 6ನೇ ಪುಟಕ್ಕೆ

ರಾಜ್ಯದ ಹಲವೆಡೆ ಹಕ್ಕಿಜ್ವರ ಭೀತಿ; ಕಟ್ಟೆಚ್ಚರಕ್ಕೆ ಸರ್ಕಾರ ಆದೇಶ

- ಸತ್ತ ಕೋಳಿಗಳ ಸ್ಯಾಂಪಲ್ ಭೂಪಾಲ್ ಸಂಶೋಧನಾಲಯಕ್ಕೆ ರವಾನೆ
- ಹಲವೆಡೆ ಕೋಳಿಗಳ ನಾಶ; ರೋಗ ಪರೀಕ್ಷೆಗೆ ತ್ವರಿತ ಕ್ರಮ



ಬೆಂಗಳೂರು, ಫೆ. 28(ಕೆಎಂಶಿ)– ಕೋಳಿಗಳಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ತೀವ್ರ ಕಟ್ಟೆಚ್ಚರ ವಹಿಸುವಂತೆ ಸರ್ಕಾರ ಆದೇಶ ಮಾಡಿದೆ.

ಚಿಕ್ಕಬಳ್ಳಾಪುರ, ಬಳ್ಳಾರಿ, ರಾಯಚೂರು, ಕೊಪ್ಪಳ, ತುಮಕೂರಿನ ಕೆಲವು ಪ್ರದೇಶ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಈ ಸಾಂಕ್ರಾಮಿಕ ರೋಗ ಕಂಡು ಬಂದಿದೆ. ಸಾಮೂಹಿಕವಾಗಿ ಕೋಳಿಗಳು ಸಾಯುತ್ತಿರುವ ಹಿನ್ನೆಲೆಯಲ್ಲಿ ರೋಗ ಪತ್ತೆಗೆ ಭೂಪಾಲ್‌ನ ಸಂಶೋಧನಾ ಕೇಂದ್ರಕ್ಕೆ ಮೃತ ಕೋಳಿಗಳ ಸ್ಯಾಂಪಲ್ ಕಳುಹಿಸಲಾಗಿದೆ. ರಾಜ್ಯದಲ್ಲಿ ಹಕ್ಕಿ ಜ್ವರ ಕಾಣಿಸಿಕೊಳ್ಳುತ್ತಿದ್ದಂತೆ ಕುಕ್ಕುಟ ಉದ್ಯಮ ನೆಲ ಕಚ್ಚಿದೆ. ಮುಂದಿನ ದಿನಗಳಲ್ಲಿ ಕೋಳಿ ಸಾಕಾಣಿಕೆದಾರರಿಗೆ ನಷ್ಟ ಉಂಟಾಗುವ ಸಾಧ್ಯತೆಗಳು ಕಂಡುಬರುತ್ತಿವೆ. ರೋಗ ಕಂಡು ಬಂದ ಕಡೆಗಳ ಪ್ರದೇಶದ ಮೂರು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಪಶುಸಂಗೋಪನಾ ಮತ್ತು ಆರೋಗ್ಯ ಇಲಾಖೆ ಜಂಟಿಯಾಗಿ ಎಲ್ಲಾ ಕೋಳಿಗಳನ್ನು ಸಾಯಿಸುತ್ತಿದೆ.

ಪ್ರಾಥಮಿಕ ವರದಿ ಪ್ರಕಾರ ಮೃತ ಕೋಳಿಗಳಲ್ಲಿ ಎಚ್5ಎನ್ ಏವಿಯನ್ ಇನ್ಫ್ಲೂಯೆನ್ಸಾ ರೋಗಾಣು ಇರುವುದು ಪತ್ತೆಯಾಗಿದೆ. ಇದು ವ್ಯಾಪಕವಾಗಿ ಹರಡುವುದನ್ನು ತಡೆಗಟ್ಟಲು ಎರಡೂ ಇಲಾಖೆಗಳು ಕೆಲವು ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವುದಲ್ಲದೆ, ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಎಚ್ಚರಿಕೆ ವಹಿಸಲು ಸೂಚಿಸಲಾಗಿದೆ.

ಈ ರೋಗ ಪಕ್ಷಿಗಳಿಂದ ಕೋಳಿಗೆ ಹರಡಿರಬಹುದು ಎಂಬ ಸಂಶಯವಿದೆ, ಆದರೆ, ಇದುವರೆಗೂ ಈ ರೋಗ ಮನುಷ್ಯರಿಗೆ ತಗುಲಿರುವ ವರದಿ ಇಲ್ಲ. ಮೊದಲು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಾಣಿಸಿಕೊಂಡ ಹಕ್ಕಿ ಜ್ವರ ಎರಡು–ಮೂರು ದಿನಗಳಲ್ಲೇ ರಾಜ್ಯದ ಇತರೆ ಭಾಗಗಳಿಗೆ ಹರಡಿರುವುದರಿಮದ ಆರೋಗ್ಯ ಇಲಾಖೆ ಆತಂಕ ವ್ಯಕ್ತಪಡಿಸಿದೆ. ಈ ಹಿನ್ನೆಲೆಯಲ್ಲೇ ಕಟ್ಟೆಚ್ಚರ ವಹಿಸುವ ಜೊತೆಗೆ ವಿವಿಧ ಭಾಗಗಳ ಕೋಳಿಗಳ ರೋಗ ಪರೀಕ್ಷೆಗೆ ಮುಂದಾಗಿದೆ. ಬೇಸಿಗೆ ಸಂದರ್ಭದಲ್ಲಿ ಕೋಳಿಗಳಿಗೆ ಹಕ್ಕಿ ಜ್ವರ ತಗಲುವುದು ಸಾಮಾನ್ಯ. ರೋಗಕ್ಕೆ ತುತ್ತಾದ ಕೋಳಿ ಮಾಂಸ ಸೇವನೆ ಮಾಡಿದರೆ ಮನುಷ್ಯನಿಗೂ ಸಾಂಕ್ರಾಮಿಕ ರೋಗ ತಗಲುವ ಸಾಧ್ಯತೆ ಇದೆ.

ಹಾಸಿಗೆ ಮೀಸಲಿಡಲು ಸೂಚನೆ: ಕೋಳಿ ಮಾಂಸ ತಿನ್ನುವ ಮೊದಲು ಹೆಚ್ಚಿನ ಉಷ್ಣತೆಯಲ್ಲಿ ಬೇಯಿಸಿ ಬಳಸಿದರೆ ದುಷ್ಪರಿಣಾಮ ಉಂಟಾಗದು ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಹಕ್ಕಿ ಜ್ವರ ಕಾಣಿಸಿಕೊಂಡಿರುವ ಪ್ರದೇಶಕ್ಕೆ ಹತ್ತಿರದ ಆಸ್ಪತ್ರೆಗಳಲ್ಲಿ ಪ್ರತ್ಯೇಕ ಹಾಸಿಗೆಗಳನ್ನು ಮೀಸಲಿಡುವಂತೆ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಇಲಾಖೆ ಸೂಚಿಸಿದೆ. ಅಲ್ಲದೆ, ರೋಗ ಕಾಣಿಸಿಕೊಂಡ ವ್ಯಕ್ತಿಗಳಿಗೆ ಅಗತ್ಯ ಔಷಧ ನೀಡಲು ಸಿದ್ಧತೆ ಮಾಡಿಕೊಳ್ಳುವಂತೆಯೂ ತಿಳಿಸಲಾಗಿದೆ.

ಟ್ಯಾಟೂನಿಂದ ಹೆಚ್‌ಐವಿ, ಚರ್ಮದ ಕ್ಯಾನ್ಸರ್ ಬರುತ್ತೆ...!

- ಕಾನೂನು ವ್ಯಾಪ್ತಿಗೆ ಟ್ಯಾಟೂ ಪಾರ್ಲರ್‌ಗಳನ್ನು ತರಲು ಕ್ರಮ; ಆರೋಗ್ಯ ಸಚಿವ ದಿನೇಶ್ ಗುಂಡೂರಾವ್
- ಟ್ಯಾಟೂ ಇಂಕ್‌ನಲ್ಲಿ ಅಪಾಯಕಾರಿ ಮೆಟಲ್ ಬಳಕೆ; ಇದು ತುಂಬಾ ಹಾನಿಕಾರಕ
- ಲಿಪ್‌ಸ್ಟಿಕ್‌ನಲ್ಲೂ ಅಪಾಯಕರ ರಾಸಾಯನಿಕ ಪತ್ತೆ



ಬೆಂಗಳೂರು: ಇಡ್ಲಿ ಬೇಯಿಸಲು ಪ್ಲಾಸ್ಟಿಕ್ ಹಾಳೆ ಬಳಕೆ ಆರೋಗ್ಯಕ್ಕೆ ಹಾನಿಕರ ಎನ್ನುವುದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ನಡೆಸಿದ ಪರೀಕ್ಷೆಯಿಂದ ದೃಢಪಟ್ಟಿದೆ. ಇದರ ಬೆನ್ನಲ್ಲೇ ಟ್ಯಾಟೂನಿಂದ ಎಚ್‌ಐವಿ ಹಾಗೂ ಚರ್ಮದ ಕ್ಯಾನ್ಸರ್ ಬರುವ ಸಾಧ್ಯತೆ ಇದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಶುಕ್ರವಾರ ಮಾಹಿತಿ ನೀಡಿದ್ದಾರೆ. ಇಂದು ಬೆಂಗಳೂರಿನಲ್ಲಿ ಆಹಾರ ಸುರಕ್ಷತೆ ಹಾಗೂ ಔಷಧ ನಿಯಂತ್ರಣ ಇಲಾಖೆಯ ಆಯುಕ್ತ ಶ್ರೀನಿವಾಸ್ ಅವರೊಂದಿಗೆ ಸುದ್ದಿಗೋಷ್ಠಿ ನಡೆಸಿದ ಆರೋಗ್ಯ ಸಚಿವರು, ಟ್ಯಾಟೂನಿಂದ ಆರೋಗ್ಯ ಸಮಸ್ಯೆಗಳ ಸಾಧ್ಯತೆ ವಿಚಾರವಾಗಿ ಕೇಂದ್ರ ಸರ್ಕಾರ ನಿಯಮ ರೂಪಿಸಲು ಅಗತ್ಯತೆ ಇದೆ. ಟ್ಯಾಟೂ ಇಂಕ್ ಅನ್ನು ಸೌಂದರ್ಯವರ್ಧಕಗಳ ಅಡಿಯಲ್ಲಿ ತರಲು ಕೇಂದ್ರ ■ 6ನೇ ಪುಟಕ್ಕೆ



ದಿನೇಶ್ ಗುಂಡೂರಾವ್

ಮಾ.22 ಕರ್ನಾಟಕ ಬಂದ್

ಮಾ.3ರಿಂದಲೇ ವಿವಿಧೆಡೆ ಮುತ್ತಿಗೆ, ಗಡಿಗಳ ಬಂದ್‌ಗೆ ನಿರ್ಧಾರ



ಬೆಂಗಳೂರು, ಫೆ.28– ಬೆಳಗಾವಿಯಲ್ಲಿ ಕನ್ನಡದ ಕಂಡಕ್ಟರ್ ಮೇಲೆ ಮರಾಠಿಗರ ಹಲ್ಲೆ, ಕನ್ನಡಿಗರ ಮೇಲೆ ಎಂಇಎಸ್ ಪುಂಡಾಟ, ಶಿವಸೇನೆ ನಾಯಕರು ಹಾಗೂ ಕಾರ್ಯಕರ್ತರು ಕರ್ನಾಟಕಕ್ಕೆ ಕಾಲಿಡದಂತೆ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿ ಮಾ.22ರಂದು ಕರ್ನಾಟಕ ಬಂದ್ ಘೋಷಣೆ ಮಾಡಲಾಗಿದೆ. ಇದರ ಜೊತೆಗೆ ಮಾ.3ರಿಂದಲೇ ರಾಜಭವನ ಮುತ್ತಿಗೆ, ಮಾ.7 ಬೆಳಗಾವಿ ಚಲೋ ಸೇರಿ ಹಂತ ಹಂತವಾಗಿ ರಾಷ್ಟ್ರೀಯ ಹೆದ್ದಾರಿಗಳನ್ನು ಬಂದ್ ಮಾಡಲಾಗುವುದು ಎಂದು ಕನ್ನಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ಹೇಳಿದ್ದಾರೆ.

ಈ ಕುರಿತು ಬೆಂಗಳೂರಿನಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿ ಎಂಇಎಸ್ ಸಂಘಟನೆ ನಿಷೇಧ ಮಾಡಬೇಕು. ಶಿವಸೇನೆ ಗಡಿಪಾರು ಮಾಡಬೇಕು. ಸಂಭಾಜಿ ಪ್ರತಿಮೆ ತೆರವುಗೊಳಿಸಬೇಕು. ಕಂಡಕ್ಟರ್ ಮೇಲಿನ ಹಲ್ಲೆಗೆ ಉನ್ನತ ಮಟ್ಟದ ತನಿಖೆ ಯಾಗಬೇಕು. ಕೊಪ್ಪಳ ಕಾರ್ಖಾನೆಗಳಿಂದ ಪರಿಸರ ಹಾಳಾಗುತ್ತಿದ್ದು, ಇದಕ್ಕೆ ತಡೆ ನೀಡಬೇಕು. ಪರ ಭಾಷೆಯವರು ತಮ್ಮದೇ ಭಾಷಾ ವ್ಯಾಮೋಹ ಹೊಂದಿದ್ದರೆ ನಮ್ಮ ರಾಜ್ಯದಿಂದ ಹೊರಗಡೆ ■ 6ನೇ ಪುಟಕ್ಕೆ



ವಾಟಾಳ್

ಕಲ್ಲಂಗಡಿ ಹಣ್ಣು, ಹಸಿ ಬಟಾಣಿಗೆ ಅಪಾಯಕಾರಿ ಕೃತಕ ಬಣ್ಣಗಳ ಬಳಕೆ

ಇಂತವುಗಳನ್ನು ತಡೆಯಲು ಶೀಘ್ರವೇ ಹೊಸ ಕಾಯ್ದೆ ತರಲು ಮುಂದಾಗಿರುವ ಆರೋಗ್ಯ ಇಲಾಖೆ



ಬೆಂಗಳೂರು, ಫೆ.28– ತರಕಾರಿ ಅಂಗಡಿಗಳಲ್ಲಿ ಮಾರಾಟ ಮಾಡುವ ಹಸಿ ಬಟಾಣಿ ಕಾಳು, ರಸ್ತೆ ಬದಿಗಳಲ್ಲಿ ಮಾರಾಟ ಮಾಡುವ ಕಲ್ಲಂಗಡಿ ಹಣ್ಣುಗಳಲ್ಲಿ ರಾಸಾಯನಿಕ ಮಿಶ್ರಿತ ಕೃತಕ ಬಣ್ಣಗಳನ್ನು ಬಳಸುತ್ತಿರುವುದು ಪತ್ತೆಯಾಗಿದೆ.

ಇದರಿಂದಾಗಿ ಕಿಡ್ನಿ ಮತ್ತು ಲಿವರ್ ಸಮಸ್ಯೆ ಉಂಟಾಗುವ ಅಪಾಯವಿದ್ದು, ಇಂತಹವುಗಳನ್ನು ತಡೆಯಲು ಸರ್ಕಾರ ಕಠಿಣ ಕಾನೂನು ತರುವ ಬಗ್ಗೆ ಚಿಂತನೆ ನಡೆಸಿದೆ. ಆಹಾರ ಪದಾರ್ಥಗಳಲ್ಲಿ ಕಲಬೆರಕೆ ಮಾಡಿದರೆ ಶಿಕ್ಷೆ ವಿಧಿಸುವ ಕಾನೂನು ಹಾಲಿ ಜಾರಿಯಲ್ಲಿದ್ದರೂ ಅಷ್ಟೇನೂ ಪರಿಣಾಮಕಾರಿಯಾಗಿಲ್ಲದ ಕಾರಣ ಕಠಿಣ ಕಾನೂನಿಗೆ ಸರ್ಕಾರ ಮುಂದಾಗಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.



ಕಲ್ಲಂಗಡಿಗಳ ಬಣ್ಣ: ಬೀದಿ ಬದಿಗಳಲ್ಲಿ, ಅಂಗಡಿಗಳಲ್ಲಿ, ಮಾಲ್‌ಗಳಲ್ಲಿ ಮಾರಾಟ ಮಾಡುವ ಕಲ್ಲಂಗಡಿ ಹಣ್ಣುಗಳನ್ನು ವಿವಿಧ ಮಧ್ಯವರ್ತಿಗಳು ಹೊಲಗಳಿಂದ ಖರೀದಿ ಮಾಡಿ ಈ ಮಾರಾಟ ಕೇಂದ್ರಗಳಿಗೆ ■ 6ನೇ ಪುಟಕ್ಕೆ

ಇಂದಿನಿಂದ ದ್ವಿತೀಯ ಪಿಯು ಪರೀಕ್ಷೆ

- ಮೈಸೂರು ಜಿಲ್ಲೆಯಲ್ಲಿ 35,000 ವಿದ್ಯಾರ್ಥಿಗಳು ನೋಂದಣಿ
- 50 ಪರೀಕ್ಷಾ ಕೇಂದ್ರಗಳು, ಸಿಸಿ ಟಿವಿ ಕ್ಯಾಮರಾ ಕಣ್ಗಾವಲು
- ಮಾ.1ರಿಂದ 20ರವರೆಗೆ ಪರೀಕ್ಷಾ ದಿನಗಳಂದು ವಿದ್ಯಾರ್ಥಿಗಳಿಗೆ ಸಾರಿಗೆ ಬಸ್ಸಲ್ಲಿ ಉಚಿತ ಪ್ರಯಾಣ




ಮೈಸೂರು, ಫೆ.28(ಆರ್‌ಕೆ)– ರಾಜ್ಯಾದ್ಯಂತ 2024–25ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಗಳು ನಾಳೆ (ಮಾ.1)ಯಿಂದ ಆರಂಭವಾಗಲಿದೆ.

ಮೈಸೂರು ನಗರದ 27 ಸೇರಿ ಜಿಲ್ಲೆಯಾದ್ಯಂತ 50 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ ಅಧಿಕಾರಿಗಳು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಸಕಲ ಸಿದ್ಧತೆ ಮಾಡಿಕೊಂಡಿದ್ದಾರೆ.

ಪರೀಕ್ಷೆಗೆ ಕಲೆ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳ 35,000 ವಿದ್ಯಾರ್ಥಿಗಳು ಜಿಲ್ಲೆಯಾದ್ಯಂತ ನೋಂದಣಿ ಮಾಡಿಕೊಂಡಿದ್ದು, ಆ ಪೈಕಿ 32,684 ಮಂದಿ ಹೊಸಬರು, 1,650 ಪುನರಾವರ್ತಿತ ಹಾಗೂ 1,028 ವಿದ್ಯಾರ್ಥಿಗಳು ಖಾಸಗಿಯಾಗಿ ಪರೀಕ್ಷೆ ಬರೆಯಲಿದ್ದಾರೆ. 14,050 ಕಲಾ, 11,292 ವಾಣಿಜ್ಯ ಹಾಗೂ 7,342 ವಿದ್ಯಾರ್ಥಿಗಳು ವಿಜ್ಞಾನ ವಿಭಾಗದಲ್ಲಿ ಪರೀಕ್ಷೆ ಬರೆಯಲಿದ್ದಾರೆ. ನಾಳೆ(ಮಾ.1) ಕನ್ನಡ ಮತ್ತು ಅರೇಬಿಕ್ ಭಾಷೆಗಳಿಂದ ಆರಂಭವಾಗುವ ಪರೀಕ್ಷೆಗಳು, ಮಾರ್ಚ್ 20ರಂದು ಹಿಂದಿ ಪತ್ರಿಕೆಯೊಂದಿಗೆ ಮುಕ್ತಾಯವಾಗಲಿದೆ.

> ನಿಯೋಜಿತ ಅಧಿಕಾರಿಗಳು, ಉಪನ್ಯಾಸಕರು ಹಾಗೂ ಸಿಬ್ಬಂದಿ ಸುಸೂತ್ರವಾಗಿ ಪರೀಕ್ಷೆ ನಡೆಸಲು ಕ್ರಮ ವಹಿಸಬೇಕು. ಪರೀಕ್ಷೆ ಪಾರದರ್ಶಕವಾಗಿ ನಡೆಯಬೇಕು. ಉತ್ತರ ನಕಲು ಮಾಡಲು ಅವಕಾಶ ನೀಡಬಾರದು. ಪರೀಕ್ಷೆ ಸಂಪೂರ್ಣ ವೆಬ್ ಕಾಸ್ಟಿಂಗ್ ಆಗುತ್ತದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ.
>
> –ಲಕ್ಷ್ಮಿಕಾಂತ ರೆಡ್ಡಿ, ಜಿಲ್ಲಾಧಿಕಾರಿ





ಶುಕ್ರವಾರ ಕಾಲೇಜು ಸಿಬ್ಬಂದಿ ನೋಂದಣಿ ಸಂಖ್ಯೆ ನಮೂದಿಸುತ್ತಿರುವುದು.

ಪ್ರತೀ ದಿನ ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆವರೆಗೆ ಪರೀಕ್ಷೆ ನಡೆಯಲಿದೆ.

ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲೂ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಜಿಲ್ಲಾಧಿಕಾರಿ ಕಚೇರಿಯಲ್ಲಿ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದು ಡಿಡಿಪಿಯು ಎಂ.ಮರಿಸ್ವಾಮಿ ತಿಳಿಸಿದ್ದಾರೆ. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆ ಸಾಗಣೆ ವಾಹನಗಳಿಗೆ ಜಿಪಿಎಸ್ ಅಳವಡಿಸಿ, ಪೊಲೀಸ್ ಬೆಂಗಾವಲು ವಾಹನಗಳನ್ನು ಕಲ್ಪಿಸಿ, ಕಟ್ಟೆಚ್ಚರ ವಹಿಸಲಾಗಿದೆ.

ನಿಷೇಧಾಜ್ಞೆ ಜಾರಿ: ಮಾ.1ರಿಂದ 20ರವರೆಗೆ ಜಿಲ್ಲೆಯ ಎಲ್ಲಾ 50 ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಅಲ್ಲದೆ ಜೆರಾಕ್ಸ್ ಅಂಗಡಿ ಮತ್ತು ಬ್ರೌಸಿಂಗ್ ಸೆಂಟರ್‌ಗಳನ್ನು ಬಂದ್ ಮಾಡಿಸಲಾಗಿದೆ.

ಡಿಸಿ ಸಭೆ: ಪರೀಕ್ಷೆ ಹಿನ್ನೆಲೆಯಲ್ಲಿ ಡಿಸಿ ಜಿ.ಲಕ್ಷ್ಮೀಕಾಂತ ರೆಡ್ಡಿ ■ 6ನೇ ಪುಟಕ್ಕೆ

ಉಚಿತ ಪ್ರಯಾಣ



ದ್ವಿತೀಯ ಪಿಯು ಪರೀಕ್ಷೆಗಳು ನಡೆಯುವ ದಿನಗಳಂದು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ ಹಿಂದಿರುಗಲು ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಉಚಿತ ಪ್ರಯಾಣದ ವ್ಯವಸ್ಥೆ ಮಾಡಲಾಗಿದೆ. ಪ್ರಯಾಣದ ವೇಳೆ ಪರೀಕ್ಷೆ ಪ್ರವೇಶ ಪತ್ರ ಹಾಜರುಪಡಿಸಬೇಕು.

ಮಾ.21ರಿಂದ SSLC ಪರೀಕ್ಷೆ

- ಪರೀಕ್ಷೆಗಳನ್ನು ವ್ಯವಸ್ಥಿತವಾಗಿ ನಡೆಸಲು ಕ್ರಮವಹಿಸಿ: ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚನೆ
- ಮೈಸೂರು ಜಿಲ್ಲೆಯಲ್ಲಿ 133 ಪರೀಕ್ಷಾ ಕೇಂದ್ರಗಳ ವ್ಯವಸ್ಥೆ



ಡಿಸಿ ಜಿ.ಲಕ್ಷ್ಮಿಕಾಂತರೆಡ್ಡಿ, ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಮೈಸೂರು,ಫೆ.28–ಮಾ.21ರಿಂದ ಆರಂಭವಾಗುವ ಎಸ್ಸೆಸ್ಸೆಲ್ಸಿ ಪರೀಕ್ಷೆಗಳನ್ನು ವ್ಯವಸ್ಥಿತ ಹಾಗೂ ನ್ಯಾಯಸಮ್ಮತ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಅವರು ಇಂದು ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಗಳ ಸಂಬಂಧ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಎಲ್ಲಾ ಪರೀಕ್ಷಾ ಕೇಂದ್ರಗಳ ಮೇಲೆ ತೀವ್ರ ನಿಗಾ ವಹಿಸಬೇಕು. ಯಾವುದೇ ರೀತಿಯಿಂದ ಲೋಪದೋಷ ಆಗದಂತೆ ಕಾರ್ಯನಿರ್ವಹಿಸಬೇಕು. ಜಿಲ್ಲೆಯ ವ್ಯಾಪ್ತಿಯ 133 ಪರೀಕ್ಷಾ ಕೇಂದ್ರಗಳಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗುತ್ತಿದ್ದು, ಪರೀಕ್ಷಾ ಕೇಂದ್ರದ 200 ಮೀ. ಸುತ್ತ ಸಾರ್ವಜನಿಕರು ಮತ್ತು ಪಾಲಕರ ಪ್ರವೇಶವನ್ನು ನಿಷೇಧಿಸಲಾಗಿದೆ. ಜೆರಾಕ್ಸ್ ಅಂಗಡಿಗಳನ್ನು ಕೂಡ ತೆರೆಯುವಂತಿಲ್ಲ ಎಂದರು.


ಮಾರ್ಚ್ 21 ರಿಂದ ಏಪ್ರಿಲ್ 04 ರವರೆಗೆ ಪರೀಕ್ಷೆಗಳು ನಡೆಯಲಿವೆ. ಈ ಬಾರಿ ಕಟ್ಟುನಿಟ್ಟಾಗಿ ಪರೀಕ್ಷೆ ನಡೆಯಲಿದ್ದು 133 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ. ಜಿಲ್ಲೆಯಲ್ಲಿ 19,114 ಬಾಲಕರು ಹಾಗೂ 18,790 ಬಾಲಕಿಯರು ಸೇರಿದಂತೆ ಒಟ್ಟು 37,904 ವಿದ್ಯಾರ್ಥಿಗಳು ■ 6ನೇ ಪುಟಕ್ಕೆ

ಮೈಸೂರು ಮಿತ್ರ ಶನಿವಾರ 1 ಮಾರ್ಚ್ 2025

ವಿದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತರ ಸಂಖ್ಯೆ ತೀರಾ ಕಮ್ಮಿ

ಹಿರಿಯ ವಿಜ್ಞಾನಿ ಡಾ.ತಿಪ್ಪೇಸ್ವಾಮಿ ಅಸಮಾಧಾನ

- 976 ಸಾಧಕರು, 28 ಸಂಸ್ಥೆಗಳು ಪ್ರಶಸ್ತಿಗೆ ಭಾಜನ
- ವಿಜ್ಞಾನ ಸಂಶೋಧನೆಗೆ ಮೀಸಲಿಟ್ಟ ಹಣ ಬಳಕೆಯಾಗುತ್ತಿಲ್ಲ
- ಮಕ್ಕಳಿಗೆ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸಬೇಕು
- ತರ್ಕ ಒಳ್ಳೆಯದು; ಪ್ರಶ್ನೆ ಮಾಡಿ ಅನುಮಾನ ಪರಿಹರಿಸಿಕೊಳ್ಳಬೇಕು




ಮೈಸೂರಿನ ವಸಂತ್ ಮಹಲ್‌ನಲ್ಲಿ ಶುಕ್ರವಾರ ನಡೆದ ಜಿಲ್ಲಾ ಮಟ್ಟದ ವಿಜ್ಞಾನ ಕಲಿಕೋಪಕರಣಗಳ ಮೇಳವನ್ನು ಸರ್ಕಾರಿ ಶಿಕ್ಷಕ ಶಿಕ್ಷಣ ವಿದ್ಯಾಲಯದ ಪ್ರಾಂಶುಪಾಲರಾದ ಹೆಚ್.ಎನ್.ಗೀತಾಂಬ ಉದ್ಘಾಟಿಸಿದರು. (ಬಲಚಿತ್ರ), ವಿಜ್ಞಾನ ಕಲಿಕೋಪಕರಣ ಮೇಳದಲ್ಲಿ ಮಕ್ಕಳು ಹಾಗೂ ಶಿಕ್ಷಕರು ವಿಜ್ಞಾನ ಪರಿಕಲ್ಪನೆಗಳನ್ನು ಪ್ರದರ್ಶಿಸಿದರು.

ಮೈಸೂರು, ಫೆ.28(ಐಎಲ್‌ಯು)– ವಿದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ನೊಬೆಲ್ ಪ್ರಶಸ್ತಿ ಪಡೆದಿರುವವರ ಸಂಖ್ಯೆ ಬಹಳ ಕಡಿಮೆ ಇದೆ ಎಂದು ಕೇಂದ್ರೀಯ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ.ತಿಪ್ಪೇಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರಿನ ನಜರ್‌ಬಾದ್‌ನ ವಸಂತ್ ಮಹಲ್‌ನಲ್ಲಿ ಇಂದು ನಡೆದ ಜಿಲ್ಲಾ ಮಟ್ಟದ ವಿಜ್ಞಾನ ಕಲಿಕೋಪಕರಣಗಳ ಮೇಳದಲ್ಲಿ ಪ್ರಧಾನ ಭಾಷಣಕಾರರಾಗಿ ಮಾತನಾಡಿದ ಅವರು, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 13 ಭಾರತೀಯರು ನೊಬೆಲ್ ಪ್ರಶಸ್ತಿ ಪಡೆದಿದ್ದು, ಇವರಲ್ಲಿ ಆರು ಮಂದಿ ಅನಿವಾಸಿ ಭಾರತೀಯರಾಗಿದ್ದಾರೆ ಎಂದರು. ಒಟ್ಟಾರೆ 976 ಸಾಧಕರು ಹಾಗೂ 28 ಸಂಸ್ಥೆಗಳು ಈ ತನಕ ನೊಬೆಲ್ ಪಾರಿತೋಷಕ ಪಡೆದಿದ್ದಾರೆ. ವಿಶ್ವದ ಹಲವು ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ನೊಬೆಲ್ ಪ್ರಶಸ್ತಿ ಪಡೆದವರ ಸಂಖ್ಯೆ ತೀರಾ ಕಡಿಮೆ ಇದೆ ಎಂದು ಬೇಸರ ವ್ಯಕ್ತಪಡಿಸಿದರು.

ವಿಜ್ಞಾನ ಕ್ಷೇತ್ರದ ಸಂಶೋಧನೆಗಾಗಿ ಕೇಂದ್ರ ಸರ್ಕಾರ ಪ್ರತಿ ವರ್ಷ ಕೋಟ್ಯಾಂತರ ರೂಪಾಯಿ ಪ್ರೋತ್ಸಾಹ ಧನ ನೀಡುತ್ತಿದೆ. ಆದರೆ ಇದರ ಬಳಕೆ ಮಾಡಿಕೊಳ್ಳುವವರ ಸಂಖ್ಯೆ ತೀರಾ ಕಡಿಮೆ ಇದೆ. ಸರ್ಕಾರ ನೀಡುವ ಹಣ ಸಮರ್ಪಕವಾಗಿ ಬಳಸಿಕೊಂಡು ವಿಜ್ಞಾನ ಕ್ಷೇತ್ರದಲ್ಲಿ ಆವಿಷ್ಕಾರ ಮಾಡಿದರೆ ಭಾರತ ವಿಶ್ವದಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಪೈಪೋಟಿ ನೀಡುವ ಸಾಲಿನಲ್ಲಿ ನಿಲ್ಲಬಹುದು ಎಂದು ಡಾ.ತಿಪ್ಪೇಸ್ವಾಮಿ ಅಭಿಪ್ರಾಯಪಟ್ಟರು.

ವಿಜ್ಞಾನದ ಸಂಶೋಧನೆಗೆ ಸೀಮಿತ ರೇಖೆಯಿಲ್ಲ. ಯಾವ ವಿಚಾರದಲ್ಲಿ ಆಸಕ್ತಿ ಇದೆಯೋ ಆ ವಿಚಾರದ ಬಗ್ಗೆ ಆವಿಷ್ಕಾರ ಮಾಡಬಹುದು. ಈ ನಿಟ್ಟಿನಲ್ಲಿ ಮಕ್ಕಳಿಗೆ ವಿದ್ಯಾರ್ಥಿ ದೆಸೆಯಲ್ಲಿ ಆಲಿಕೆ ಹಾಗೂ ಪ್ರಶ್ನೆ ಮಾಡುವ ಮನೋಭಾವ ಬೆಳೆಸಬೇಕು. ವಿಜ್ಞಾನದ ಬಗ್ಗೆ ಆರಂಭದಲ್ಲಿ ಆಸಕ್ತಿ ಮೂಡಿಸಿದರೆ ಭವಿಷ್ಯತ್ತಿನಲ್ಲಿ ಅವರು ದೊಡ್ಡ ವಿಜ್ಞಾನಿಯಾಗಲಿದ್ದಾರೆ ಎಂದು ಉತ್ತೇಜಿಸಿದರು. ವಿಜ್ಞಾನಿಗಳು ಸಂಶೋಧನೆ ಮಾಡುವ ಸಂದರ್ಭದಲ್ಲಿ ಯಾವ ವಿಚಾರದ ಬಗ್ಗೆ ಸಂಶೋಧನೆ ಮಾಡುತ್ತಿರುತ್ತಾರೋ ಅದು ಬಿಟ್ಟು ಆಕಸ್ಮಿಕವಾಗಿ ಬೇರೊಂದು ಆಶ್ಚರ್ಯಕರ ವಿಚಾರ ಬೆಳಕಿಗೆ ಬರುತ್ತದೆ. ಈ ಆವಿಷ್ಕಾರ ವಿಜ್ಞಾನಿಗೆ ಮತ್ತೊಂದು ರೀತಿಯ ಮೈಲಿಗಲ್ಲಾಗುತ್ತದೆ. ಜೊತೆಗೆ ಕುತೂಹಲಕಾರಿಯಾಗುವ ಫಲಿತಾಂಶಕ್ಕೆ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಪೋಷಕರು ಹಾಗೂ ಶಿಕ್ಷಕರು ಮಕ್ಕಳಲ್ಲಿ ವೈಜ್ಞಾನಿಕ ಹಾಗೂ ವೈಚಾರಿಕತೆ ಬಗ್ಗೆ ಆಸಕ್ತಿ ಮೂಡಿಸಬೇಕು ಎಂದು ಸಲಹೆ ನೀಡಿದರು.

ಒಂದು ದೇಶ ಬೆಳವಣಿಗೆ ಸಾಧಿಸಬೇಕಾದರೆ ವಿಜ್ಞಾನ ಮತ್ತು ಆವಿಷ್ಕಾರ ಪ್ರಮುಖ ಪಾತ್ರ ವಹಿಸುತ್ತದೆ. ಈ ನಿಟ್ಟಿನಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಪೈಪೋಟಿ ನೀಡಲು ಭಾರತ ಕೂಡ ಶಕ್ತಿಯುತವಾಗಿ ಬೆಳೆಯಬೇಕಿದೆ ಎಂದು ಡಾ.ತಿಪ್ಪೇಸ್ವಾಮಿ ತಿಳಿಸಿದರು.

ಈ ವೇಳೆ ಮಾತನಾಡಿದ ಸರ್ಕಾರಿ ಶಿಕ್ಷಕ ಶಿಕ್ಷಣ ವಿದ್ಯಾಲಯದ ಪ್ರಾಂಶುಪಾಲರಾದ ಹೆಚ್.ಎನ್.ಗೀತಾಂಬ ಮಾತನಾಡಿ, ವಿಜ್ಞಾನ ದಿನದ ಅಂಗವಾಗಿ ಸಂಶೋಧನೆಗೊಂಡ ವಿಜ್ಞಾನದ ಪರಿಕಲ್ಪನೆಗಳನ್ನು ಬಹಳ ಅಚ್ಚುಕಟ್ಟಾಗಿ ಇಲ್ಲಿ ಪ್ರದರ್ಶಿಸಲಾಗಿದೆ ಎಂದು ಪ್ರಶಂಸಿಸಿದರು. ಯಾವುದೇ ವಿಚಾರವಾದರೂ ತರ್ಕ ಇರಬೇಕು. ಪ್ರಶ್ನೆ ಮಾಡುವ ಮನೋಭಾವ ಇಲ್ಲದಿದ್ದರೆ ವಿಚಾರಗಳ ಮಂಥನವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಶಾಲೆಗಳಲ್ಲಿ ಮಕ್ಕಳಿಗೆ ಪ್ರಶ್ನೆ ಮಾಡುವ ಗುಣ ಮೈಗೂಡಿಸಿಕೊಳ್ಳುವಂತೆ ಮಾಡಬೇಕು ಎಂದರು. ಶಾಲೆಗಳಲ್ಲಿ ವಿಜ್ಞಾನವನ್ನು ಅರಿಯುವ ಆಸಕ್ತಿ ಇರುವ ಮಕ್ಕಳು ಇರುತ್ತಾರೆ. ಅಂತಹ ಮಕ್ಕಳ ಸೃಜನಶೀಲತೆಯನ್ನು ಶಿಕ್ಷಕರು ಹೆಕ್ಕಿ ತೆಗೆದು ಅವರಿಗೆ ಪ್ರೋತ್ಸಾಹ ನೀಡಬೇಕು ಎಂದು ಸಲಹೆ ನೀಡಿದರು. ಯಾವುದೇ ವಿಚಾರ ಹೇಳಿದಾಗ ಮಕ್ಕಳು ಕಣ್ಣುಚ್ಚಿ ಅದನ್ನು ಒಪ್ಪುವಂತಿರಬಾರದು. ಪ್ರಶ್ನೆ ಕೇಳಿ ಅನುಮಾನ ಬಗೆಹರಿಸಿಕೊಳ್ಳುವ ಗುಣ ಇರಬೇಕು ಎಂದು ಗೀತಾಂಬ ಹೇಳಿದರು.

ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಹಾಗೂ ಮಂತ್ರ ಫಾರ್ ಚೇಂಜ್ ಸಂಯುಕ್ತವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರಾದ ನಾಗರಾಜಯ್ಯ, ಡಯಟ್‌ನ ಪುಷ್ಪಲತಾ, ಶೋಭಾ, ಮೊಹಮ್ಮದ್ ರಫಿ, ಮಹದೇವ್, ಬಿಳಿಗಿರಿಸಿಂಗ್ ನಾಗೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರಲ್ಲಿ ನೀರಿನ ಶುದ್ಧೀಕರಣ ಘಟಕ ಸ್ಥಾಪನೆ



ಮೈಸೂರು, ಫೆ. 28– ಸಮಾಜಕ್ಕೆ ಒಳಿತು ಮಾಡಬೇಕು ಎಂಬ ಉದ್ದೇಶದಿಂದ ಹಲವಾರು ಸಮಾಜಾಭಿವೃದ್ಧಿ ಕಾರ್ಯಗಳನ್ನು ನಡೆಸುತ್ತಿರುವ ಟೊಯೋಟ ಕಿರ್ಲೋಸ್ಕರ್ ಮೋಟಾರ್ (ಟಿಕೆಎಂ) ಮೈಸೂರು ಜಿಲ್ಲೆಯಲ್ಲಿ ನೀರಿನ ಶುದ್ಧೀಕರಣ ಘಟಕಗಳನ್ನು ಉದ್ಘಾಟಿಸಿತು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರಾದ ಡಾ. ಯತೀಂದ್ರ ಸಿದ್ದರಾಮಯ್ಯ ನೀರಿನ ಶುದ್ಧೀಕರಣ ಘಟಕ ಉದ್ಘಾಟಿಸಿದರು. ಟಿಕೆಎಂನ ಮುಖ್ಯ ಸಂವಹನ ಅಧಿಕಾರಿ, ಹಿರಿಯ ಉಪಾಧ್ಯಕ್ಷ ಮತ್ತು ರಾಜ್ಯ ವ್ಯವಹಾರಗಳ ಮುಖ್ಯಸ್ಥ ಸುದೀಪ್ ದಳವಿ ಮತ್ತು ಇತರ ಗಣ್ಯರು ಉಪಸ್ಥಿತರಿದ್ದರು. ಬಳಿಕ ಮಾತನಾಡಿದ ಅವರು, ಸುರಕ್ಷಿತ ಮತ್ತು ಶುದ್ಧ ಕುಡಿಯುವ ನೀರನ್ನು ಒದಗಿಸುವ ಮೂಲಕ ಸಾರ್ವಜನಿಕರು ಉತ್ತಮ ಆರೋಗ್ಯವಂತೆ ಮಾಡುವ ಮತ್ತು ನೀರಿನಿಂದ ಹರಡುವ ರೋಗಗಳನ್ನು ತಡೆಗಟ್ಟುವ ಉದ್ದೇಶ ಹೊಂದಿರುವ ಟಿಕೆಎಂ, 2024–25ನೇ ಆರ್ಥಿಕ ವರ್ಷದಲ್ಲಿ ಮೈಸೂರು ಜಿಲ್ಲೆಯಲ್ಲಿ ಅತ್ಯಾಧುನಿಕ ನೀರಿನ ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಿದೆ. ಈ ಘಟಕಗಳಿಂದ 3,98,870ಕ್ಕೂ ಹೆಚ್ಚು ಜನರು ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಹೇಳಿದರು.

ಮಹಾನಗರ ಪಾಲಿಕೆಯ ನಿವೃತ್ತರಿಗೆ ಬೀಳ್ಕೊಡುಗೆ



ಮೈಸೂರು ಮಹಾನಗರ ಪಾಲಿಕೆ ವಲಯ–02 ರಲ್ಲಿ ಶುಕ್ರವಾರ 41 ವರ್ಷಗಳ ಸುದೀರ್ಘ ಕಾಲ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಾಲಿಕೆಯ ವಾಹನ ಚಾಲಕರಾದ ಶಂಕರ್ ಹಾಗೂ ಗ್ಯಾಂಗ್‌ಮ್ಯಾನ್ ಆಗಿ ಕಾರ್ಯನಿರ್ವಹಿಸುತ್ತಿದ್ದ ರಾಚ ಅವರನ್ನು ವಲಯ ಆಯುಕ್ತ ನಾಗರಾಜು ಗೌರವಿಸಿದರು. ಅಭಿವೃದ್ಧಿ ಅಧಿಕಾರಿ ಚೇತನ್‌ಬಾಬು, ವರ್ಕ್ ಇನ್ಸ್‌ಪೆಕ್ಟರ್ ಶಿವಸ್ವಾಮಿ, ಜಯರಾಮು, ವ್ಯವಸ್ಥಾಪಕರಾದ ಉಮೇಶ್, ಇಂಜಿನಿಯರ್ ದೀಪಕ್, ಶ್ರೀಮತಿ ಮಾರ್ಟಿನಾ, ಶ್ರೀಮತಿ ಮಹದೇವಮ್ಮ, ಕಛೇರಿ ಸಿಬ್ಬಂದಿ ಈ ವೇಳೆ ಹಾಜರಿದ್ದರು.

ಮಾ.2ರಂದು ರಂಗೋಲಿ ಸ್ಪರ್ಧೆ

ಮೈಸೂರು: ಮೈಸೂರಿನ ಗಣಪತಿ ಆಶ್ರಮದ ನಾದ ಮಂಟಪದಲ್ಲಿ ಮಾ.2ರಂದು ಬೆಳಗ್ಗೆ 7ರಿಂದ 9ರವರೆಗೆ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಜ್ಞಾನೋದಯ 36 ಅರಸ್ ಸಂಸ್ಥೆಯ ಡಾ.ವೆಂಕಟ ಸುಬ್ಬರಾವ್ ತಿಳಿಸಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಂಗೋಲಿ ಸ್ಪರ್ಧೆಯಲ್ಲಿ ಎಲ್ಲಾ ವಯೋಮಾನದವರು ಪಾಲ್ಗೊಳ್ಳಬಹುದಾಗಿದೆ (ದೂ.8330976741) ಎಂದು ತಿಳಿಸಿದರು.

ಯಡಿಯೂರಪ್ಪ ಹುಟ್ಟುಹಬ್ಬ ಆಚರಣೆ



ನಗರ ಪಾಲಿಕೆ ಮಾಜಿ ಸದಸ್ಯ ಜೆ.ಎಸ್.ಜಗದೀಶ್ ನೇತೃತ್ವದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಹುಟ್ಟುಹಬ್ಬ ಆಚರಿಸಲಾಯಿತು. ಶಾಸಕ ಟಿ ಎಸ್ ಶ್ರೀವತ್ಸ, ಬಿಜೆಪಿ ಮುಖಂಡರಾದ ಗೋಪಾಲ್ ರಾಜ ಅರಸ್, ಜೈರಾಮ್, ಅರ್ಜುನ್, ಪಾರ್ಥ, ವಿರೂಪಾಕ್ಷ, ಸೋಮಶೇಖರ್, ಸತ್ಯಾನಂದ ವಿಟ್ಟು, ಶಿವಣ್ಣ, ರಾಜಣ್ಣ, ಲೋಹಿತ್ ಶರ್ಮಾ, ಪ್ರಸನ್ನ ಕುಮಾರ್, ವಿಜಯ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ದಸರಾ ವಸ್ತು ಪ್ರದರ್ಶನ: ವಾರ್ತಾ ಇಲಾಖೆಗೆ ತೃತೀಯ ಬಹುಮಾನ




ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ತೃತೀಯ ಬಹುಮಾನ ದೊರೆತಿದೆ.

ಮೈಸೂರು, ಫೆ.28(ಎಸ್‌ಪಿಎನ್)– ದಸರಾ 2024ರ ವಸ್ತು ಪ್ರದರ್ಶನದಲ್ಲಿ ರಾಜ್ಯ ಸರ್ಕಾರದ ಇಲಾಖೆಗಳ ವಿಭಾಗದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ತೃತೀಯ ಬಹುಮಾನ ದೊರೆತಿದೆ.

ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಜನಸಾಮಾನ್ಯರ ಬದುಕಿನಲ್ಲಿ ಆಗುತ್ತಿರುವ ಗುಣಾತ್ಮಕ ಬದಲಾವಣೆಗಳು, ಮಹಿಳಾ ಸಬಲೀಕರಣಕ್ಕೆ ದೊರೆಯುತ್ತಿರುವ ಪ್ರೋತ್ಸಾಹ, ಯುವಜನರಿಗೆ ಸಿಗುತ್ತಿರುವ ಭರವಸೆ ಮೊದಲಾದ ಅಂಶಗಳನ್ನು ಪರಿಣಾಮಕಾರಿಯಾಗಿ ವಸ್ತು ಪ್ರದರ್ಶನದಲ್ಲಿ ಇಲಾಖೆ ನಿರ್ಮಿಸಿದ್ದ ಮಳಿಗೆಯಲ್ಲಿ ಆಕರ್ಷಕ ವಿನ್ಯಾಸಗಳನ್ನು ಅನಾವರಣಗೊಳಿಸಲಾಗಿತ್ತು.

ಇಂದು ಸಂಜೆ ಮೈಸೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ, ಕರ್ನಾಟಕ ರಾಜ್ಯ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಆಯೂಬ್ ಖಾನ್ ಅವರು ವಾರ್ತಾ ಇಲಾಖೆಯ ಜಂಟಿ ನಿರ್ದೇಶಕ ಸಿದ್ದೇಶ್ವರಪ್ಪ ಹಾಗೂ ಸಹಾಯಕ ನಿರ್ದೇಶಕರಾದ ಟಿ.ಕೆ. ಹರೀಶ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ನಗರ್ಲೆ ಶಿವಕುಮಾರ್‌ಗೆ ಡಾ.ನಾಗತಿಹಳ್ಳಿ ಚಂದ್ರಶೇಖರ್ ಸಾಹಿತ್ಯ ರಾಜ್ಯ ಪ್ರಶಸ್ತಿ



ಮೈಸೂರು, ಫೆ. 28–ನಗರ್ಲೆ ಶಿವಕುಮಾರ್ ಅವರ ಸಾಹಿತ್ಯ ಕ್ಷೇತ್ರದಲ್ಲಿನ ಸಾಧನೆಯನ್ನು ಪರಿಗಣಿಸಿ ಬೆಂಗಳೂರಿನ ಅನ್ವೇಷಣೆ ಸಾಂಸ್ಕೃತಿಕ ಅಕಾಡೆಮಿಯು ಡಾ. ನಾಗತಿಹಳ್ಳಿ ಚಂದ್ರಶೇಖರ್ ಸಾಹಿತ್ಯ ರಾಜ್ಯ ಪ್ರಶಸ್ತಿ ಘೋಷಿಸಿದೆ. ಮೈಸೂರು ಜಿಲ್ಲೆ ನಂಜನಗೂಡು ತಾಲೂಕು ನಗರ್ಲೆ ಗ್ರಾಮದವರಾದ ಇವರು ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯ, ಕಲೆ, ಸಂಸ್ಕೃತಿಗಳ ಬಗ್ಗೆ ಆಸಕ್ತಿಯುಳ್ಳವರಾಗಿ ಹಲವಾರು ಕೃತಿಗಳು ಹಾಗೂ ಚಿತ್ರಗಳನ್ನು ರಚಿಸಿದ್ದಾರೆ. ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹಲವು ಸಂಘ ಸಂಸ್ಥೆಗಳೊಂದಿಗೆ ಒಡನಾಟ ಹೊಂದಿರುವ ಇವರು, ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿ 14 ಕೃತಿಗಳನ್ನು ಹೊರತಂದಿದ್ದಾರೆ. ಇವರ ಹಲವಾರು ಲೇಖನಗಳು ಪತ್ರಿಕೆ ಹಾಗೂ ಸಂಚಿಕೆಗಳಲ್ಲಿ ಪ್ರಕಟಗೊಂಡಿವೆ. ವಿವಿಧ ಸಂಘ ಸಂಸ್ಥೆಗಳಲ್ಲಿ ಶರಣ ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ಉಪನ್ಯಾಸಗಳನ್ನು ನೀಡಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭವು ಮಾ.2ರಂದು ಬೆಂಗಳೂರಿನ ಶ್ರೀ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ.

ಸಿಎಂ, ಕಾಂಗ್ರೆಸ್ ಹೆದರಿಸಲು ಡಿಕೆಶಿ ಹಿಂದುತ್ವದ ವೇಷ



ಬೆಂಗಳೂರು, ಫೆ.28– ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಅನ್ನು ಹೆದರಿಸಲು ಹಿಂದುತ್ವದ ವೇಷ ಹಾಕಿದ್ದಾರೆ ಎಂದು ಆರ್.ಆರ್ ನಗರದ ಶಾಸಕ ಮುನಿರತ್ನ ವಾಗ್ದಾಳಿ ನಡೆಸಿದರು.

ಸಿಎಂ ಭೇಟಿ ಬಳಿಕ ಮಾಧ್ಯಮದ ಜೊತೆ ಮಾತನಾಡಿದ ಅವರು, ಡಿಕೆ ಶಿವಕುಮಾರ್ ಹಿಂದೂ ಅಲ್ಲ ಅಂತ ನಾವು ಯಾರು ಹೇಳಿಲ್ಲ. ಅವರು ಹಿಂದೂನೇ. ಹಿಂದು ಆಗಿಯೇ ಸಾಯಲಿ ಯಾರು ಬೇಡ ಅಂದರು. ಡಿಕೆಶಿ ಅವರು ಸಿದ್ದರಾಮಯ್ಯಗೆ ಬ್ಲಾಕ್‌ಮೇಲ್ ಮಾಡಲು ಹಿಂದುತ್ವದ ವೇಷ ಹಾಕಿದ್ದಾರೆ ಎಂದು ಕಿಡಿಕಾರಿದರು. ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಅನ್ನು ಬ್ಲ್ಯಾಕ್‌ಮೇಲ್ ಮಾಡಲು ಇವೆಲ್ಲಾ ತಂತ್ರ ಅಷ್ಟೇ. ಸದ್ಗುರು ಅವರು ಇವರನ್ನು ಆಹ್ವಾನ ಮಾಡಲು ಬಂದಿರುವುದಿಲ್ಲ. ಇವರೇ ಪ್ಲ್ಯಾನ್ ಮಾಡಿ ಅವರನ್ನು ಕರೆಸಿಕೊಂಡು ಆಹ್ವಾನ ಬಂದಿದೆ ಎಂದು ಪತ್ರಿಕೆ ಹಿಡಿದುಕೊಂಡು ಹೋಗಿದ್ದಾರೆ. ಡಿಕೆಶಿ ಬಿಜೆಪಿಗೆ ಬರುವ ಪ್ರಶ್ನೆಯೇ ಇಲ್ಲ. ಇವರು ಸಿಎಂ ಅನ್ನು ಹೆದರಿಸಲು ಬಿಜೆಪಿಯ ಕಥೆ ಹೇಳುತ್ತಿದ್ದಾರೆ ಎಂದು ತಿರುಗೇಟು ನೀಡಿದರು. ಡಿಕೆಶಿ ಬಿಜೆಪಿಗೆ ಬಂದರೆ ಕುಕ್ಕರ್‌ನಲ್ಲಿ ಬಾಂಬ್ ಇಟ್ಟ ಬ್ರದರ್ಸ್ ಅಂಡ್ ಸಿಸ್ಟರ್‌ಗೆ ಕೋಪ ಬರುವುದಿಲ್ವಾ? ಏಸು ಬೆಟ್ಟದವರು ಕೋಪ ಮಾಡಿಕೊಳ್ಳುತ್ತಾರೆ. ಇವರು ಹೀಗೆ ಮಾಡಿದರೆ ಏಕನಾಥ್ ಶಿಂಧೆ ಆಗುವುದಿಲ್ಲ ಎಂದರು.

ಬಿ.ಎಸ್.ಯಡಿಯೂರಪ್ಪ ಹುಟ್ಟುಹಬ್ಬದ ಅಂಗವಾಗಿ ಅಗತ್ಯವುಳ್ಳವರಿಗೆ ವಿವಿಧ ನೆರವು



ಮೈಸೂರು ಚಾಮುಂಡಿಪುರಂನ ಆರಾಧ್ಯ ಮಹಾಸಭಾದಲ್ಲಿ ವಾರ್ಡ್ 55ರ ನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್ ನೇತೃತ್ವದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಹುಟ್ಟು ಹಬ್ಬದ ಅಂಗವಾಗಿ ಮಹಿಳೆಯರಿಗೆ ಉಚಿತವಾಗಿ ಹೊಲಿಗೆ ಯಂತ್ರ, ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಉಚಿತ ಪುಸ್ತಕ ವಿತರಣೆ ಹಾಗೂ ವಿಶೇಷ ಚೇತನ ಮಕ್ಕಳಿಗೆ ಔಷಧಿಗಳನ್ನು ನೀಡಲಾಯಿತು. ಶಾಸಕ ಟಿ.ಎಸ್. ಶ್ರೀವತ್ಸ ಕಾರ್ಯಕ್ರಮ ಉದ್ಘಾಟಿಸಿದರು. ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ಗೋಪಾಲ ರಾಜ ಅರಸ್, ಪಾಲಿಕೆ ಮಾಜಿ ಸದಸ್ಯರಾದ ಮಾ.ವಿ.ರಾಮಪ್ರಸಾದ, ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಮಹೇಶ್, ಉಮಾಶಂಕರ್, ವಿದ್ಯಾಅರಸ್, ಪುರುಷೋತ್ತಮ್, ಮಂಜುನಾಥ್, ಸೋಮೇಶ್, ಮಂಜುಳಾ, ವಿಕ್ರಮ ಅಯ್ಯಂಗಾರ್, ಅರವಿಂದ್ ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

01.03.2025 ಶನಿವಾರ, ಮಳೆ ನಕ್ಷತ್ರ: ಶತಭಿಷ, 19.02.2025 ರಿಂದ 03.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಪೂಭಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಪರಮಹಂಸ ಯೋಗ ಮಹಾವಿದ್ಯಾಲಯ ಇಂಟರ್‌ನ್ಯಾಷನಲ್ ಯೋಗ ಸ್ಕೂಲ್, ಇಂಟರ್‌ನ್ಯಾಷನಲ್ ಯೋಗ ಆರ್ಗನೈಜೇಷನ್ :** ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ 190ನೇ ಜಯಂತಿ, ಟ್ರೈನಿಂಗ್ ಕೋರ್ಸ್‌ನ ಉದ್ಘಾಟನಾ ಸಮಾರಂಭ, ಯೋಗ ಸಾಧಕರಿಗೆ ಯೋಗ ರತ್ನ ಮತ್ತು ಯೋಗಚಾರ್ಯ ಪ್ರಶಸ್ತಿ ಪ್ರದಾನ ಸಮಾರಂಭ, ಉಪಸ್ಥಿತರು : ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಶಿವಪ್ರಕಾಶ್ ಗುರೂಜಿ, ಶ್ರೀಮತಿ ಕೆ.ಎಂ. ಚೇತನ, ಶ್ರೀಮತಿ ಗಾಯಿತ್ರಿ ಅರುಣ್, ಡಾ. ಆರ್. ಭಾವನಾ, ಬಿ.ಜಿ. ವಿಜಯ ಕುಮಾರ್, ಎನ್. ಪಶುಪತಿ, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ, ಸಂಜೆ 5ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ :** ಪಿಟೀಲು ಚೌಡಯ್ಯನವರ ಜಯಂತಿ, ಮುಖ್ಯ ಅತಿಥಿಗಳು : ಆದಿತ್ಯ ಆಸ್ಪತ್ರೆ ಮುಖ್ಯಸ್ಥ ಡಾ.ಎನ್. ಚಂದ್ರಶೇಖರ್, ಸನ್ಮಾನ : ಜೀವಮಾನ ಸಾಧನೆ ಪ್ರಶಸ್ತಿ ಪುರಸ್ಕತರಾದ ಎಚ್.ಕೆ. ನರಸಿಂಹಮೂರ್ತಿ, ಅಧ್ಯಕ್ಷತೆ : ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜ ಅರಸು, ವಿದ್ವಾನ್ ಭಾಸ್ಕರ್ ಮತ್ತು ವಿದುಷಿ ಪೃಥ್ವಿ ಭಾಸ್ಕರ್ ಅವರಿಂದ ದ್ವಂದ್ವ ವಯೋಲಿನ್ ವಾದನ, ವಿದ್ವಾನ್ ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6ಕ್ಕೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಮೈಸೂರು:** ತ್ರಿಮೂರ್ತಿ ಶಿವ ಜಯಂತಿ ಮಹೋತ್ಸವದ ಪ್ರಯುಕ್ತ ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ, ಸಂಜೆ 6.15 ರಿಂದ ವಿದ್ಯಾರಣ್ಯಪುರಂನ ಯತ್ನ ಅವರಿಂದ ಆತ್ಮವಿಚಾರ ಕುರಿತು ಚಿಂತನ ಕಾರ್ಯಕ್ರಮ, ಸಂಜೆ 6.45 ರಿಂದ ಬರಹಗಾರ್ತಿ ಶ್ರೀಮತಿ ಈರಮಂಡ ಹರಿಣಿ ವಿಜಯ್ ಅವರಿಂದ ಸಮಾಜದ ಉನ್ನತಿಗೆ ಮಹಿಳೆಯರ ಕೊಡುಗೆ ಕುರಿತು ಉಪನ್ಯಾಸ, ಸಂಜೆ 7.45 ರಿಂದ ಸಿರಿ ಸಂಗೀತ ಮತ್ತು ನೃತ್ಯ ಶಾಲೆಯವರಿಂದ ಭರತನಾಟ್ಯ, ಸ್ಥಳ: ಭಾರತೀಯ ವಿದ್ಯಾಭವನದ ಮುಂಭಾಗದ ನಿವೇಶನ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು.

■ **ಶ್ರೀ ಕ್ಷೇತ್ರ ದಂಡಿನ ಮಾರಮ್ಮ ದೇವಸ್ಥಾನ :** ಶ್ರೀ ಮನೆ ಮಂಚಮ್ಮ ಶ್ರೀ ದಂಡಿನ ಮಾರಮ್ಮ, ಬಿಸಿಲು ಮಾರಮ್ಮ ಜಾತ್ರಾ ಮಹೋತ್ಸವ, ರಾತ್ರಿ 12 ಗಂಟೆಗೆ ಮನೆ ಮಂಚಮ್ಮ ದೇವತಾ ಕಾರ್ಯ, ಸ್ಥಳ: ದೇವಸ್ಥಾನ, ಮೈಸೂರು–ಬೆಂಗಳೂರು ರಸ್ತೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಶ್ರೀ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಹಾಗೂ ವರ್ಧಂತಿ ಮಹೋತ್ಸವ, ಶ್ರೀ ವೇದವ್ಯಾಸ ಅಷ್ಟಾಕ್ಷರ ಮಂತ್ರ ಮಹಾಯಾಗ, ಬೆಳಗ್ಗೆ 7.30 ರಿಂದ ಗಣಪತಿ ಪೂಜೆ, ಪುಣ್ಯಾಹ, 108 ಕಳಶ ಸ್ಥಾಪನೆ, ಗಣಹೋಮ, ಶ್ರೀ ವೇದವ್ಯಾಸ ಅಷ್ಟಾಕ್ಷರ ಮಂತ್ರ ಮಹಾಯಾಗ ಪ್ರಾರಂಭ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ, ಜಯಲಕ್ಷ್ಮಿಪುರಂ.

■ **ಶ್ರೀ ರಾಮಕೃಷ್ಣ ಆಶ್ರಮ :** ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ 190ನೆಯ ಜನ್ಮ ದಿನೋತ್ಸವ, ಆಶ್ರಮದ ವಾರ್ಷಿಕೋತ್ಸವ, ಮುಂಜಾನೆ 5.15 ರಿಂದ ವೇದಮಂತ್ರಗಳ ಪಠಣ, ಮಂಗಳಾರತಿ, ಭಜನೆ, ವಿಶೇಷ ಪೂಜೆ, ವಿಷ್ಣು ಸಹಸ್ರನಾಮ ಪಾರಾಯಣ, ಭಜನೆ, ಗ್ರಂಥವಾಚನ, ಮಹಾಮಂಗಳಾರತಿ, ಹೋಮ, ಪ್ರಸಾದ ವಿನಿಯೋಗ, ಸಂಜೆ 4.30ಕ್ಕೆ ಶ್ರೀ ಶಾರದಾ ಸಂವಿತ್ ಭಜನಾ ಮಂಡಳಿ ಅವರಿಂದ ಭಜನೆ, ಸಂಜೆ 6ಕ್ಕೆ ಭಗವಾನ್ ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶ ಕುರಿತು ಕನ್ನಡದಲ್ಲಿ ಪ್ರವಚನ, ಸಂಜೆ 7ಕ್ಕೆ ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮ, ಯಾದವಗಿರಿ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ನಖ ಶಿಖಾಂತ–ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ: ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮನೆ ಮನೆಯ ಹಣತೆ– ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳ ಸರಣಿ, ಪ್ರಾಯೋಜಕರು –ನಿರ್ದೇಶಕರು, ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಬೆಂಗಳೂರು, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.05 ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು– Indian Cancer Society, Karnataka Chapter, 9.10 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಭತ್ತದ ಬೇಸಾಯದಲ್ಲಿ ಆಧುನಿಕ ತಾಂತ್ರಿಕತೆಗಳ ಬಳಕೆ ಕುರಿತು ಸಂವಾದ. ಭಾಗವಹಿಸುತ್ತಾರೆ–ನಂಜನಗೂಡು ತಾಲೂಕು ಸುತ್ತೂರಿನ ಜೆ.ಎಸ್.ಎಸ್ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಶಾಮರಾಜ್ ಹಾಗೂ ಹೆಚ್.ಡಿ.ಕೋಟೆ ತಾಲೂಕು ಅಂತರಸಂತೆ ಹೋಬಳಿ ಮಾಗುಡಿಲು ಗ್ರಾಮದ ಎಂ. ಕೆ. ನಾಗರಾಜು, ಪ್ರಸ್ತುತಿ :ಎನ್. ಕೇಶವಮೂರ್ತಿ, 8.00 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪಂಡಿತ್. ಅಭಿಜಿತ್ ಬಂಧೋಪಾಧ್ಯಾಯ್–ತಬಲಾ ವಾದನ

■ **ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೆಂಗಳೂರು, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಸರ್ಕಾರಿ ಶುಸ್ರೂಷ ಮಹಾವಿದ್ಯಾಲಯ :** ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ ಕಾರ್ಯಕ್ರಮ : ದೇವಲಾಪುರ ಎಸ್‌ಡಿಎಂಸಿ ಅಧ್ಯಕ್ಷ ಮಹದೇವಸ್ವಾಮಿ ಅವರಿಂದ, ಬೆಳಗ್ಗೆ 8ಕ್ಕೆ ಜಾಥಾ, ಬೆಳಗ್ಗೆ 10 ರಿಂದ ಆರೋಗ್ಯ ತಪಾಸಣಾ ಶಿಬಿರ, ಸಂಜೆ 5 ರಿಂದ ಉಪನ್ಯಾಸ ಕಾರ್ಯಕ್ರಮ, ಉಪಸ್ಥಿತರು : ಕನ್ನಡ ಸಹ ಪ್ರಾಧ್ಯಾಪಕರಾದ ಡಾ. ವಿನೋದಮ್ಮ, ಡಿ.ಎಲ್. ಮಹದೇವಸ್ವಾಮಿ, ಸೋಮಣ್ಣ, ರಾಜು, ಶ್ರೀಮತಿ ಭಾಗ್ಯ ಸುರೇಶ್, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ದೇವಲಾಪುರ ಗ್ರಾಮ.

■ **ಸುವರ್ಣ ಬೆಳಕು ಫೌಂಡೇಷನ್ :** ಶ್ರೀನಿಜಶರಣ ಅಂಬಿಗರ ಚೌಡಯ್ಯ ಜಯಂತಿ, ಅಂಬಿಗ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಮಾಜಿ ಸಚಿವ ಪ್ರಮೋದ್ ಮಧ್ವರಾಜ್, ಪುಷ್ಪಾರ್ಚನೆ: ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ಫೌಂಡೇಷನ್ ಅಧ್ಯಕ್ಷ ಎಸ್. ಮಹೇಶ್, ಪ್ರಾಸ್ತಾವಿಕ ನುಡಿ : ತಿರುಮಲೇ ಪ್ರಕಾಶ್, ಉಪಸ್ಥಿತರು : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಹಿರಿಯ ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ವಿಜಯ್ ಕುಮಾರ ಗಂಗಾಪುತ್ರ, ಅಪೂರ್ವ ಶಿವಣ್ಣ, ಎಲ್. ನಾಗೇಂದ್ರ, ಎಂ.ಎಸ್. ರಾಜಪ್ಪ, ಸ್ಥಳ: ಗಂಗಾಮತಸ್ಥರ ಸಮುದಾಯ ಭವನ, ಸುಣ್ಣದಕೇರಿ, ಸಂಜೆ 4.30ಕ್ಕೆ.

■ **ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠ :** ಗುರುವೈಭವೋತ್ಸವ–2025, ಶ್ರೀ ರಾಘವೇಂದ್ರ ಸ್ವಾಮಿಗಳವರ 404ನೇ ಪಟ್ಟಾಭಿಷೇಕ, ಪವಮಾನ ಹೋಮ (ಸರ್ವ ಪಾಪ ಪರಿಹಾರ), ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಸುಬ್ಬರಾಯನಕೆರೆ, ಬೆಳಗ್ಗೆ 7ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಇಸುಬು ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ಪದವಿ ಅಕ್ಷಯ ದಾಸೋಹ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಪುಟ್ಟರಾಜ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11.30ಕ್ಕೆ.

ಆರ್‌ಬಿಐ ಆವರಣದಲ್ಲಿ ಸೆರೆಸಿಕ್ಕ ಚಿರತೆ



ಆರ್‌ಬಿಐ ಆವರಣದಲ್ಲಿ ಬೋನಿಗೆ ಬಿದ್ದ ಚಿರತೆ.

ಮೈಸೂರು, ಫೆ.28(ಎಂಟಿವೈ)– ಮೈಸೂರಿನ ನೋಟು ಮುದ್ರಣಾಲಯ(ಆರ್‌ಬಿಐ) ಆವರಣದಲ್ಲಿ ಕಳೆದ ಒಂದು ತಿಂಗಳಿಂದ ಅಲೆದಾಡುತ್ತಾ, ಆತಂಕ ಉಂಟುಮಾಡಿದ್ದ ಗಂಡು ಚಿರತೆ ಕೊನೆಗೂ ಬೋನಿಗೆ ಬಿದ್ದು, ಸೆರೆ ಸಿಕ್ಕಿದೆ.

ಆರ್‌ಬಿಐ ಆವರಣದಲ್ಲಿ ರಾತ್ರಿ ವೇಳೆ ಕಾಣಿಸಿಕೊಳ್ಳುತ್ತಿದ್ದ ಚಿರತೆ, ಸಿಬ್ಬಂದಿಗಳಿರುವ ವಸತಿ ನಿಲಯದ ಬಳಿಯೂ ಸುಳಿದಾಡಿತ್ತು. ಚಿರತೆ ಸುಳಿದಾಡುವ ದೃಶ್ಯ ಆರ್‌ಬಿಐ ಆವರಣದಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲೂ ಸೆರೆಯಾಗಿತ್ತು. ಈ ಹಿನ್ನೆಲೆಯಲ್ಲಿ ಫೆ.7ರಿಂದ ಆರ್‌ಬಿಐ ಆವರಣದಲ್ಲಿ ಚಿರತೆ ಸೆರೆಗೆ ಅರಣ್ಯ ಇಲಾಖೆ ಕಾರ್ಯಾಚರಣೆ ಆರಂಭಿಸಿತ್ತು.

ಚಿರತೆ ಸಂಚಾರ ದೃಢಪಟ್ಟ ಹಿನ್ನೆಲೆಯಲ್ಲಿ ಬೋನ್(ಕ್ಯಾಟಲ್ ಪೆನ್ ಕೇಜ್) ಇಟ್ಟು ಚಿರತೆ ಸೆರೆಗೆ ಬಲೆ ಬೀಸಿದ್ದ ಅರಣ್ಯ ಸಿಬ್ಬಂದಿ, ಚಿರತೆ ಕಾರ್ಯಪಡೆ ಸಿಬ್ಬಂದಿ 20 ದಿನದ ಅವಧಿಯಲ್ಲಿಯೇ ಚಿರತೆಯನ್ನು ಬೋನಿಗೆ ಬೀಳಿಸಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಬೋನ್‌ನಲ್ಲಿದ್ದ ನಾಯಿಯನ್ನು ಬೇಟೆಯಾಡಲು ಮುಂಜಾನೆ ಬಂದ ಚಿರತೆ ಸೆರೆ ಸಿಕ್ಕಿದೆ. ಬೋನ್‌ನಲ್ಲಿ ಸೆರೆಯಾದ ಚಿರತೆಯ ಚೀರಾಟ ಕೇಳಿಸಿಕೊಂಡ ಆರ್‌ಬಿಐ ಸಿಬ್ಬಂದಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಅರಣ್ಯ ಸಿಬ್ಬಂದಿ ಹಾಗೂ ಪಶುವೈದ್ಯರು ಬೋನ್‌ನಲ್ಲಿದ್ದ ಚಿರತೆಗೆ ಅರವಳಿಗೆ ಮದ್ದು ನೀಡಿ, ಸುರಕ್ಷಿತವಾಗಿ ಸೆರೆ ಹಿಡಿದರು.

ಸೆರೆ ಸಿಕ್ಕ ಚಿರತೆ ಆರೋಗ್ಯದಿಂದ ಕೂಡಿದ್ದು, ಅದನ್ನು ಅರಣ್ಯ ಭವನಕ್ಕೆ ಕೊಂಡೊಯ್ದು ತಪಾಸಣೆ ನಡೆಸಲಾಯಿತು. ಅಲ್ಲದೆ, ಕಿವಿಗೆ ಗುರುತು ಮಾಡಿ, ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಸಂರಕ್ಷಿತ ಅರಣ್ಯದಲ್ಲಿ ಬಿಡುಗಡೆ ಮಾಡಲು ಕೊಂಡೊಯ್ಯಲಾಯಿತು. ಚಿರತೆ ಸೆರೆ ಕಾರ್ಯಾಚರಣೆಯಲ್ಲಿ 30ಕ್ಕೂ ಹೆಚ್ಚು ಸಿಬ್ಬಂದಿ ಶ್ರಮಿಸಿದ್ದರು.

ಅಧಿಕ ಜನಸಂಪರ್ಕಕ್ಕೆ ಬಂದರೆ ಅಹಂಕಾರಪಡುವಂತಹದ್ದಲ್ಲ; ಅದು ವೃತ್ತಿಗೆ ಸಂದ ಗೌರವವೆಂದು ಪರಿಭಾವಿಸಿ


● ಪತ್ರಕರ್ತರಿಗೆ ರಾಜ್ಯ ಮಾಹಿತಿ ಆಯುಕ್ತ ಕೆ.ಬದ್ರುದ್ದಿನ್ ಕಿವಿಮಾತು ●'ಏನ್ ಸಮಾಚಾರ' ಮೀಡಿಯಾ ಹಬ್ಬದ ಸಮಾರೋಪ; ಮುದ್ರಣ ಮಾಧ್ಯಮ ಮೌಲ್ಯ ಉಳಿಸಿಕೊಂಡಿದೆ

ಮೈಸೂರು, ಫೆ.28(ಎಸ್‌ಬಿಡಿ)– ಯಶಸ್ವಿ ಪತ್ರಕರ್ತರಾಗಲು ಮಾತೃ ಹೃದಯ, ತಾಳ್ಮೆ, ಸಹನೆ, ಸಂವಿಧಾನದ ಅರಿವಿನ ಜೊತೆಗೆ ನಿರಂತರ ಅಧ್ಯಯನಶೀಲತೆ ಬಹಳ ಮುಖ್ಯ ಎಂದು ರಾಜ್ಯ ಮಾಹಿತಿ ಆಯುಕ್ತ ಕೆ.ಬದ್ರುದ್ದಿನ್ ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಮಾಧ್ಯಮ ಅಕಾಡೆಮಿ, ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಹಯೋಗದಲ್ಲಿ ನಗರದ ಮಾನಸ ಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಆಯೋಜಿಸಿದ್ದ 'ಏನ್ ಸಮಾಚಾರ!!' ಮೀಡಿಯಾ ಹಬ್ಬದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಪತ್ರಿಕೋದ್ಯಮ ವಿದ್ಯಾರ್ಥಿಗಳ ಮೇಲೆ ಸಾಕಷ್ಟು ನಿರೀಕ್ಷೆಗಳಿವೆ. ಅಡ್ಡದಾರಿಗಳಿಂದ ಸಾಧನೆ ಅಸಾಧ್ಯ. ಯಶಸ್ವಿ ಪತ್ರಕರ್ತರಾಗಲು ಮಾತೃ ಹೃದಯ, ತಾಳ್ಮೆ, ಸಹನೆ ಇರಬೇಕು. ನಿರಂತರ ಅಧ್ಯಯನಶೀಲನೆ ರೂಢಿಸಿಕೊಳ್ಳಬೇಕು. ಎಲ್ಲರೂ ಸಂಪರ್ಕಕ್ಕೆ ಬಂದು ಹತ್ತಿರವಾಗುತ್ತಾರೆ ಎಂಬ ಮಾತ್ರಕ್ಕೆ ಅಹಂಕಾರ ಬೆಳೆಸಿಕೊಳ್ಳಬಾರದು. ಅದು ವೃತ್ತಿಗೆ ಸಿಗುತ್ತಿರುವ ಗೌರವ ಎನ್ನುವುದನ್ನು ಮರೆಯಬಾರದು. ಈ ಪವಿತ್ರ ಕೆಲಸದಲ್ಲಿ ಎಲ್ಲವನ್ನೂ ಗಂಭೀರವಾಗಿಯೇ ಕಾಣಬೇಕು. ಮುಖ್ಯವಾಗಿ ಸಂವಿಧಾನದ ಅರಿವಿರಬೇಕು. ವಿಶ್ವಾಸಾರ್ಹತೆ ಕುಸಿಯುತ್ತಿರುವ ಸಂದರ್ಭದಲ್ಲಿ ಮಾಹಿತಿ ಹಕ್ಕು ಕಾಯ್ದೆ(ಆರ್‌ಟಿಐ), ಮಾಧ್ಯಮಕ್ಕೆ ಅತ್ಯಗತ್ಯ. ಈ ಪ್ರಬಲವಾದ ಅಸ್ತ್ರವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಕಾಲ ಬದಲಾಗಿದೆ, ತಂತ್ರಜ್ಞಾನ ಬೆಳೆಯುತ್ತಿದೆ. ಆದರೆ ಪತ್ರಿಕೋದ್ಯಮದ ಮೌಲ್ಯವನ್ನು ಉಳಿಸಿಕೊಳ್ಳಬೇಕು. ಎಂತಹ ಪರಿಸ್ಥಿತಿಯನ್ನು ನಿಭಾಯಿಸುವ ಚಾಕಚಕ್ಯತೆ ಹಾಗೂ ಎದೆಗಾರಿಕೆ ಇರಬೇಕು. ಸಾಮಾಜಿಕ ಮಾಧ್ಯಮದ ಆರ್ಭಟದ ನಡುವೆಯೂ ಗಟ್ಟಿಯಾಗಿರುವ ಮುದ್ರಣ ಮಾಧ್ಯಮ ಆದಷ್ಟು ಮೌಲ್ಯಗಳನ್ನು ಉಳಿಸಿಕೊಂಡಿದೆ.



ಮೈಸೂರಿನ ಮಾನಸ ಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ನಡೆದ 'ಏನ್ ಸಮಾಚಾರ!!' ಮೀಡಿಯಾ ಹಬ್ಬದ ಸಮಾರೋಪ ಸಮಾರಂಭದಲ್ಲಿ ಅಮೃತ ವಿಶ್ವ ವಿದ್ಯಾಪೀಠಂನ ವಿದ್ಯಾರ್ಥಿಗಳು ಗಣ್ಯರಿಂದ ಚಾಂಪಿಯನ್ ಟ್ರೋಫಿ ಸ್ವೀಕರಿಸಿ, ಸಂಭ್ರಮಿಸಿದರು.

ಮಾಧ್ಯಮಕ್ಕೆ ಭವಿಷ್ಯ ಇಲ್ಲ ಎನ್ನುವುದು ಸುಳ್ಳು. ಹೆಚ್.ಆರ್.ರಂಗನಾಥ್ ಅವರ ಯಶಸ್ಸಿಗೆ ಅಧ್ಯಯನಶೀಲತೆಯೇ ಕಾರಣ. ಅವರು ನಿತ್ಯ 14 ಪತ್ರಿಕೆಗಳನ್ನು ಓದಿಕೊಂಡು ಬರುತ್ತಿದ್ದರು. ಯಾವ ಪತ್ರಿಕೆಯ ಯಾವ ಪುಟದಲ್ಲಿ ಯಾವ ಸುದ್ದಿ ಇದೆ ಎನ್ನುವಷ್ಟು ಅಧ್ಯಯನ ಮಾಡಿರುತ್ತಿದ್ದರು. ವಿಶ್ವಾಸಾರ್ಹ, ನಂಬಿಕಾರ್ಹ ಪತ್ರಕರ್ತರಾದರೆ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದರು.

ಮೌಲ್ಯಗಳು ಅಗತ್ಯ: ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಿರಂಜನ ವಾನಳ್ಳಿ ಮಾತನಾಡಿ, ಬರೀ ಪಾಠ ಕಲಿತರೆ ಕೆಲಸ ಸಿಗುವುದಿಲ್ಲ. ಮಾಧ್ಯಮ ಹಾಗೂ ಮಾಧ್ಯಮ ಶಿಕ್ಷಣ ಬದಲಾಗಿದೆ. ಅದಕ್ಕೆ ಅನುಗುಣವಾಗಿಯೇ ವಿದ್ಯಾರ್ಥಿಗಳಿಗೆ ಕಲಿಸುವ ಪ್ರಯತ್ನ ಮಾಡುತ್ತಿದ್ದೇವೆ. ಆದರೂ ಪತ್ರಿಕೋಧ್ಯಮ ವಿಭಾಗ ಮುಚ್ಚುತ್ತಿರುವ ಸಂದರ್ಭದಲ್ಲಿ ಅಧ್ಯಾಪಕ ವರ್ಗ ಆತ್ಮಸಾಕ್ಷಿಯನ್ನು ಪ್ರಶ್ನಿಸಿಕೊಳ್ಳಬೇಕಿದೆ. ಬುದ್ಧಿವಂತರ ಜೊತೆಗೆ ಮೌಲ್ಯವಂತರನ್ನು ತಯಾರಿಸುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಕೌಶಲ್ಯದ ಜೊತೆಗೆ ಮೌಲ್ಯಗಳನ್ನೂ ತುಂಬಬೇಕಿದೆ ಎಂದು ತಿಳಿಸಿದರು.

ಉನ್ನತೀಕರಣ ಆಗಬೇಕಿದೆ: ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ ಮಾತನಾಡಿ, ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜು ಮಾದರಿಯಲ್ಲಿ ಸರ್ಕಾರಿ ಪತ್ರಿಕೋದ್ಯಮ ಕಾಲೇಜುಗಳ ಉನ್ನತೀಕರಣ ಆಗಬೇಕಿದೆ. ಕನ್ನಡದ ವಿದ್ಯಾರ್ಥಿಗಳನ್ನು ರಾಷ್ಟ್ರಮಟ್ಟದ ಮಾಧ್ಯಮ ಪ್ರತಿನಿಧಿಗಳಾಗಿ ರೂಪಿಸುವ ನಿಟ್ಟಿನಲ್ಲಿ ಸಜ್ಜುಗೊಳಿಸಬೇಕಿದೆ ಎಂದು ಆಶಿಸಿದರು.

ಅಮೃತ ವಿದ್ಯಾಪೀಠಂ ಚಾಂಪಿಯನ್...

'ಏನ್ ಸಮಾಚಾರ' ಮೀಡಿಯಾ ಹಬ್ಬದಲ್ಲಿ ರಾಜ್ಯದ ವಿವಿಧೆಡೆಯ 18 ಕಾಲೇಜುಗಳ 230 ವಿದ್ಯಾರ್ಥಿಗಳು ಭಾಗಿಯಾಗಿದ್ದರು. ವಿವಿಧ ಹತ್ತು ಸ್ಪರ್ಧೆಗಳಲ್ಲಿ ಅಮೃತ ವಿಶ್ವ ವಿದ್ಯಾಪೀಠಂ ವಿದ್ಯಾರ್ಥಿಗಳು ಅತೀ ಹೆಚ್ಚು ಸ್ಪರ್ಧೆಗಳಲ್ಲಿ ವಿಜೇತರಾಗುವ ಮೂಲಕ ಚಾಂಪಿಯನ್ ಆಗಿ ಹೊರಹೊಮ್ಮಿದರು. ಮೈಸೂರು ವಿಶ್ವವಿದ್ಯಾನಿಲಯ ರನ್ನರ್ ಅಪ್ ಪ್ರಶಸ್ತಿ ಪಡೆದುಕೊಂಡಿತು.

ಮಾಧ್ಯಮ ಸೇತುವೆಯಾಗಬೇಕು...

ಪತ್ರಿಕೋದ್ಯಮದ ನೈತಿಕ ಮೌಲ್ಯ ಹಾಳಾಗಿಲ್ಲ. ಆದರೆ ಸುಳ್ಳು ಸುದ್ದಿಗಳು ಹೆಚ್ಚಾಗಿವೆ. ನಿಜವಾದ ಸುದ್ದಿ ಯಾವುದು ಎಂಬುದನ್ನು ಅರ್ಥ ಮಾಡಿಕೊಳ್ಳಲು ಫ್ಯಾಕ್ಟ್ ಚೆಕ್ ಮೊರೆ ಹೋಗಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಇತ್ತೀಚಿನ ದಿನಗಳಲ್ಲಿ ರಾಜಕೀಯ, ಸಿನಿಮಾ, ಅಪರಾಧ ಸುದ್ದಿಗಳಿಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ಜನಸಾಮಾನ್ಯರ ಪರವಾದ ಆಲೋಚನೆಗಳು ಕಡಿಮೆಯಾಗಿದೆ. ಪತ್ರಕರ್ತರು ಸರ್ಕಾರ ಮತ್ತು ಜನರ ನಡುವೆ ಸೇತುವೆಯಾಗಿ ಕೆಲಸ ಮಾಡಬೇಕು. ಒಳ್ಳೆಯ ವಿಚಾರಗಳನ್ನು ಬೆಳಕಿಗೆ ತರಬೇಕು.

-ಕೆ.ವಿ.ಪ್ರಭಾಕರ್
ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ, ಪತ್ರಕರ್ತೆ ರಾಧಾ ಹಿರೇಗೌಡರ್, ಮಾಧ್ಯಮ ಅಕಾಡೆಮಿ ಕಾರ್ಯದರ್ಶಿ ಎಂ.ಸಹನಾ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥೆ ಪ್ರೊ.ಎನ್.ಮಮತಾ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಹಾನಗರ ಪಾಲಿಕೆ: ನಾನಾ ರೀತಿ ಕೊಳಕು ಮಾಡುವವರಿಗೆ 2 ಲಕ್ಷ ದಂಡ

ಮೈಸೂರು,ಫೆ.28– ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯ 2016 ರ ಅನ್ವಯ ಘನತ್ಯಾಜ್ಯ ನಿರ್ವಹಣೆಯನ್ನು ಹಾಗೂ ಕರ್ನಾಟಕ ರಾಜ್ಯಪತ್ರದ ಅಧಿಸೂಚನೆ ಸಂಖ್ಯೆ ಅಪಜೀ 17 ಇಪಿಸಿ 2012, ಬೆಂಗಳೂರು ಮಾರ್ಚ್ 11 ರಂತೆ ಪ್ಲಾಸ್ಟಿಕ್ ನಿಷೇಧವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಫೆಬ್ರವರಿ 1 ರಿಂದ 20 ರವರೆಗೆ ನಿಯಮಾವಳಿಗಳನ್ನು ಉಲ್ಲಂಘಿಸಿದವರಿಗೆ ದಂಡ ವಿಧಿಸಲಾಗಿದೆ.

ಎಲ್ಲೆಂದರಲ್ಲಿ ತ್ಯಾಜ್ಯ ಹಾಕುವುದಕ್ಕೆ 36000–00, ಮನೆ ಮನೆಗಳಿಂದ ಮಿಶ್ರ ತ್ಯಾಜ್ಯ ನೀಡುವವರಿಗೆ 5800–00, ವಾಣಿಜ್ಯ ಮಳಿಗೆಗಳಿಂದ ಮಿಶ್ರ ತ್ಯಾಜ್ಯ ನೀಡುವವರಿಗೆ 6000–00, ಕೊಳಕು ನೀರು ಹಾಗೂ ಇನ್ನಿತರೆ ದ್ರವ್ಯ ತ್ಯಾಜ್ಯವನ್ನು ರಸ್ತೆಗಳಿಗೆ ಹರಿಯಬಿಟ್ಟಿರುವವರಿಗೆ 3500–00, ಪ್ರಾಣಿ ತ್ಯಾಜ್ಯವನ್ನು ನಿಗದಿತ ಸ್ಥಳದಲ್ಲಿ ವಿಲೇವಾರಿ ಮಾಡದೆ ಇರುವವರಿಗೆ 1000–00, ತೆರೆದ ಚರಂಡಿಯಲ್ಲಿ ತ್ಯಾಜ್ಯ ಬಿಸಾಡುವವರಿಗೆ 2000–00, ರಸ್ತೆ ಬದಿಗಳಲ್ಲಿ ಎಲೆಗಳನ್ನು ಸುಡುವುದಕ್ಕೆ 1400–00, ಪ್ಲಾಸ್ಟಿಕ್ ವಸ್ತು ಮತ್ತು ಒಣ ತ್ಯಾಜ್ಯ ಸುಡುವುದಕ್ಕೆ 2000–00, ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ಬಳಸುವ ಸಾರ್ವಜನಿಕರಿಗೆ 1400–00, ಬೀದಿ ಬದಿ ವ್ಯಾಪಾರಿಗಳಿಗೆ 31500–00, ವಾಣಿಜ್ಯದಾರರಿಗೆ 60000–00, ಉದ್ಯಮಿದಾರರಿಗೆ(ಮಾರಾಟ ಮತ್ತು ವಿತರಣೆ) 50000–00 ರಷ್ಟು ವಿಧಿಸಲಾಗಿದ್ದು, ಒಟ್ಟು ಮೊತ್ತ 2,00,600 ರೂ. ದಂಡ ವಿಧಿಸಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫುಟ್‌ಪಾತ್ ಹೋಟೆಲ್‌ಗಳ ವಿರುದ್ಧ ಮೈಸೂರು ಹೋಟೆಲ್ ಉದ್ಯಮಿಗಳ ಆಕ್ರೋಶ

ಅನಧಿಕೃತ ಹೋಟೆಲ್ ತೆರವು ಮಾಡದಿದ್ದರೆ ನಾವು ತೆರಿಗೆ ಪಾವತಿಸಲ್ಲ: ನಾರಾಯಣಗೌಡ

ಮೈಸೂರು, ಫೆ.28(ಬಿಎಲ್‌ಯು)– ಮೈಸೂರು ನಗರದ ಫುಟ್‌ಪಾತ್‌ಗಳಲ್ಲಿ ನಡೆಯುತ್ತಿರುವ ಅನಧಿಕೃತ ಹೋಟೆಲ್‌ಗಳನ್ನು ತೆರವು ಮಾಡದಿದ್ದರೆ ಹೋಟೆಲ್ ಉದ್ಯಮಿಗಳು ತೆರಿಗೆ ಪಾವತಿಸುವುದಿಲ್ಲ ಹಾಗೂ ಲೈಸೆನ್ಸ್ ಪಡೆಯುವುದಿಲ್ಲ ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಎಚ್ಚರಿಸಿದ್ದಾರೆ.



ಮೈಸೂರು ನಗರದ 65 ವಾರ್ಡ್‌ಗಳಲ್ಲಿ ಫುಟ್‌ಪಾತ್‌ನಲ್ಲಿ 3 ಸಾವಿರಕ್ಕೂ ಹೆಚ್ಚು ಹೋಟೆಲ್‌ಗಳು ನಡೆಯುತ್ತಿದೆ. ಸಸ್ಯಹಾರಿ ಹಾಗೂ ಮಾಂಸಹಾರಿ ಹೋಟೆಲ್‌ಗಳನ್ನು ಅನಧಿಕೃತವಾಗಿ ನಡೆಸುತ್ತಾ ಲಕ್ಷಾಂತರ ರೂಪಾಯಿ ವಹಿವಾಟು ನಡೆಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ನಿಜವಾದ ಹೋಟೆಲ್ ಉದ್ಯಮಿಗಳು ಎಲ್ಲಾ ರೀತಿಯ ಪರವಾನಗಿ ಪಡೆದು, ಜಿಎಸ್‌ಟಿ ಸೇರಿದಂತೆ ಹಲವು ರೀತಿಯ ತೆರಿಗೆ ಪಾವತಿ ಮಾಡಿ, ಗುಣಮಟ್ಟ ಖಾತರಿ ಪಡೆದುಕೊಂಡು ವ್ಯಾಪಾರ ಮಾಡುತ್ತಿದ್ದೇವೆ. ಆದರೆ ಫುಟ್‌ಪಾತ್ ಹೋಟೆಲ್‌ನವರು ಯಾವುದೇ ತೆರಿಗೆ ಮತ್ತು ಹೋಟೆಲ್ ಬಾಡಿಗೆ ಪಾವತಿ ಮಾಡದೆ ವ್ಯಾಪಾರ ಮಾಡುತ್ತಿದ್ದಾರೆ. ಇದು ಎಷ್ಟರ ಮಟ್ಟಿಗೆ ಸರಿ ಎಂದು ನಾರಾಯಣಗೌಡ ಪ್ರಶ್ನಿಸಿದ್ದಾರೆ.

ನಗರ ಪಾಲಿಕೆ ಅಧಿಕೃತವಾಗಿ ಗುರುತಿಸಿರುವ ಸ್ಥಳ ಹೊರತುಪಡಿಸಿ ಅನಧಿಕೃತವಾಗಿ ಫುಟ್‌ಪಾತ್‌ನಲ್ಲಿ ನಡೆಸು ತ್ತಿರುವ ಹೋಟೆಲ್‌ಗಳನ್ನು ಕೂಡಲೇ ಬಂದ್ ಮಾಡಬೇಕು. ಈ ಮೂಲಕ ನಗರದ ಸೌಂದರ್ಯ ಹಾಳಾಗುವುದನ್ನು ತಡೆಯಬೇಕು ಎಂದು ಕೋರಿದ್ದಾರೆ.

ನಗರ ಪಾಲಿಕೆ ಕಠಿಣ ಕ್ರಮಕ್ಕೆ ಮುಂದಾಗದಿದ್ದರೆ ನಾವು ಕೂಡ ಹೋಟೆಲ್ ಮುಂಭಾಗ ಫುಟ್‌ಪಾತ್‌ನಲ್ಲಿ ಗಾಡಿಗಳನ್ನು ನಿಲ್ಲಿಸಿ ವ್ಯಾಪಾರ ಮಾಡುತ್ತೇವೆ.

ಯಾವುದೇ ರೀತಿಯ ತೆರಿಗೆ ಪಾವತಿ ಮಾಡುವುದಿಲ್ಲ. ಕಂದಾಯ ಕೂಡ ಪಾವತಿಸುವುದಿಲ್ಲ. ಜಿಎಸ್‌ಟಿ ಸೇರಿದಂತೆ ಎಲ್ಲಾ ತೆರಿಗೆ ಕಟ್ಟುವುದನ್ನು ನಿಲ್ಲಿಸುತ್ತೇವೆ ಎಂದು ನಾರಾಯಣಗೌಡ ಎಚ್ಚರಿಸಿದ್ದಾರೆ. ಹೋಟೆಲ್‌ಗಳಲ್ಲಿ ಇಡ್ಲಿ ತಯಾರಿಕೆಗೆ ಪ್ಲಾಸ್ಟಿಕ್ ಬಳಸುವುದನ್ನು ನಾವೇ ವಿರೋಧಿಸುತ್ತಿದ್ದೇವೆ. ಪ್ಲಾಸ್ಟಿಕ್ ಬಳಸಿ ಇಡ್ಲಿ ತಯಾರಿಸಿದರೆ ಹಲವು ರೀತಿಯ ರೋಗ ಬರುತ್ತದೆ ಎಂದು ಎಚ್ಚರಿಸಿದ್ದೆವು. ಆದರೆ ಈಗ ಸರ್ಕಾರವೇ ಕಠಿಣ ಕ್ರಮಕ್ಕೆ ಮುಂದಾ ಗಿದ್ದು, ಸರ್ಕಾರದ ಈ ಕ್ರಮ ಸ್ವಾಗತಾರ್ಹ ಎಂದು ನಾರಾಯಣಗೌಡ ಹೇಳಿದ್ದಾರೆ.

ಇನ್‌ಪೆಕ್ಟರ್‌ಗಳಾದ ಪೂವಯ್ಯ, ಮಲ್ಲೇಶ್, ಕಿರಣ್ ಕುಮಾರ್‌ಗೆ ಡಿವೈಎಸ್‌ಪಿ ಬಡ್ತಿ



ಕೆ.ಸಿ.ಪೂವಯ್ಯ



ಎ.ಮಲ್ಲೇಶ್



ಸಿ.ಕಿರಣ್‌ಕುಮಾರ್

ಮೈಸೂರು, ಫೆ.28– 30 ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೆ ಡಿವೈಎಸ್‌ಪಿಗಳಾಗಿ ಬಡ್ತಿ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸಿಸಿಬಿ ಇನ್ಸ್‌ಪೆಕ್ಟರ್ ಕೆ.ಸಿ.ಪೂವಯ್ಯ, ಹೆಬ್ಬಾಳ ಠಾಣೆ ಇನ್ಸ್‌ಪೆಕ್ಟರ್ ಎ.ಮಲ್ಲೇಶ್ ಮತ್ತು ಗುಂಡ್ಲುಪೇಟೆ ತಾಲೂಕು ಬೇಗೂರು ಠಾಣೆಯ ಇನ್ಸ್‌ಪೆಕ್ಟರ್ ಆಗಿದ್ದು, ಈಗ ಚನ್ನಪಟ್ಟಣ ಪೊಲೀಸ್ ತರಬೇತಿ ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿ.ಕಿರಣ್‌ಕುಮಾರ್ ಬಡ್ತಿ ಪಡೆದವರ ಪಟ್ಟಿಯಲ್ಲಿದ್ದಾರೆ.

ಉಳಿದಂತೆ ಸಚಿನ್ ಶಿವಪುತ್ರಪ್ಪ ಭಲವಾದಿ, ಹೆಚ್.ರವಿ, ಪಿ.ಎ.ವೆಂಕಟೇಶ್, ಎಸ್.ಪರಶಿವಮೂರ್ತಿ, ಹೆಚ್.ಎಸ್.ಸುರೇಶ್, ಪಿ.ಅಶೋಕ್ ಕುಮಾರ್, ಎ.ಸಿ.ಲೋಕೇಶ್, ಅನಿಲ್ ಕುಮಾರ್ ಪಿ. ಗ್ರಾಮ ಪುರೋಹಿತ್, ಎಂ.ಎಸ್.ಶ್ರೀನಿವಾಸ್, ಆರ್.ರಾಜೇಶ್, ಬ್ರಿಜೇಶ್ ಮ್ಯಾಥೀವ್, ಜೆ.ಎಸ್.ತಿಪ್ಪೇಸ್ವಾಮಿ, ಕೆ.ರಾಜೇಶ್, ಸಿ.ಮಧುಸೂದನ್, ಎನ್.ಜಯಲಕ್ಷ್ಮಮ್ಮ, ಬಿ.ಕೆ.ಲತಾ, ಸಿ.ಎನ್.ರಮೇಶ್, ಸುರೇಶ್ ಹೆಚ್.ತಳವಾರ್, ಕೃಷ್ಣ ಕೆ.ಲಮಾಣಿ, ಪಿ.ಸುರೇಶ್ ಕುಮಾರ್, ಜಿ.ಶಿವಪ್ರಸಾದ್, ಹೆಚ್.ಜಯರಾಜ್, ಶ್ರೀಧರಶಾಸ್ತ್ರಿ ಗುಂಡಗಟ್ಟಿ, ಎಂ.ದಿವಾಕರ್, ಸೋಮಶೇಖರಪ್ಪ ಜಿ.ಜುಟ್ಟಲ್ ಬಡ್ತಿ ಪಡೆದವರಾಗಿದ್ದಾರೆ.

ಕೇಂದ್ರ ತೆರಿಗೆಯಲ್ಲಿ ರಾಜ್ಯಗಳ ಪಾಲು ಶೇ.1ರಷ್ಟು ಇಳಿಸಲು ಕೇಂದ್ರ ಚಿಂತನೆ

ನವದೆಹಲಿ, ಫೆ.28– ಕೇಂದ್ರ ತೆರಿಗೆಯಿಂದ ಸಂಗ್ರಹವಾದ ಹಣದಲ್ಲಿ ರಾಜ್ಯಗಳಿಗೆ ನೀಡಬೇಕಾದ ಮೊತ್ತವನ್ನು ಮುಂದಿನ ವರ್ಷದಿಂದ ಕಡಿಮೆ ಮಾಡುವ ಸಾಧ್ಯತೆ ಇದೆ. ಈ ಸಂಬಂಧ ಕೇಂದ್ರ ಸರ್ಕಾರವು ಸದ್ಯದಲ್ಲೇ ಹಣಕಾಸು ಆಯೋಗಕ್ಕೆ ಶಿಫಾರಸು ಸಲ್ಲಿಸಲಿದೆ. ಇದಲ್ಲದೆ, ಕೇಂದ್ರ–ರಾಜ್ಯ ಆರ್ಥಿಕ ಸಂಬಂಧಗಳಿಗೆ ಸಂಬಂಧಿಸಿದ ಇತರ ವಿಷಯಗಳೂ ಈ ಶಿಫಾರಸುಗಳಲ್ಲಿ ಇರಲಿವೆ ಎನ್ನಲಾಗಿದೆ. ಇದರಿಂದಾಗಿ ಈಗಾಗಲೇ ತೆರಿಗೆ ಪಾಲಿನ ಸಂಬಂಧ ಕೇಂದ್ರದೊಂದಿಗೆ ಸಂಘರ್ಷಕ್ಕಿಳಿದಿರುವ ರಾಜ್ಯಗಳು ಇನ್ನೊಂದು ಸುತ್ತಿನ ಸಮರಕ್ಕೆ ಸಿದ್ಧವಾಗುವ ನಿರೀಕ್ಷೆ ಇದೆ.

ಅರ್ಥಶಾಸ್ತ್ರಜ್ಞ ಅರವಿಂದ ಪನಗಾರಿಯಾ ನೇತೃತ್ವದ ಸಮಿತಿಯು ತನ್ನ ಶಿಫಾರಸುಗಳನ್ನು ಅ. 31ರೊಳಗೆ ಸಲ್ಲಿಸಲಿದ್ದು, 2026–27ನೇ ಆರ್ಥಿಕ ವರ್ಷದಿಂದ ಅವು ಜಾರಿಗೆ ಬರಲಿವೆ. ಕೇಂದ್ರದಿಂದ ರಾಜ್ಯಗಳಿಗೆ ಈಗ ಶೇ. 41ರಷ್ಟು ತೆರಿಗೆ ಪಾಲು ಬರುತ್ತಿದ್ದು, ಇದನ್ನು ಶೇ. 40ಕ್ಕೆ ಇಳಿಸಲಿದೆ ಎನ್ನಲಾಗಿದೆ. ಮಾರ್ಚ್ ಅಂತ್ಯದೊಳಗೆ ಕೇಂದ್ರ ಸಚಿವ ಸಂಪುಟ ಈ ಪ್ರಸ್ತಾವನೆಗೆ ಅನುಮೋದನೆ ನೀಡಿ, ಹಣಕಾಸು ಆಯೋಗಕ್ಕೆ ಕಳುಹಿಸಲಿದೆ. ಶೇ.1ರಷ್ಟು ಇಳಿಕೆಯಿಂದ ಕೇಂದ್ರ ಸರ್ಕಾರಕ್ಕೆ ಸುಮಾರು 35 ಸಾವಿರ ಕೋಟಿ ರೂ. ಉಳಿತಾಯವಾಗಲಿದೆ. ಪ್ರತಿ ವರ್ಷದ ತೆರಿಗೆ ಸಂಗ್ರಹ ಆಧರಿಸಿ ಈ ಮೊತ್ತ ಬದಲಾವಣೆ ಆಗುತ್ತದೆ. ಕೇಂದ್ರದಿಂದ ರಾಜ್ಯಗಳಿಗೆ ಹೋಗುವ ತೆರಿಗೆ ಪಾಲು 1980ರಲ್ಲಿ ಶೇ. 20ರಷ್ಟಿತ್ತು.

ಈಗ ಅದು ಶೇ. 41ಕ್ಕೇರಿದೆ. ಕೇಂದ್ರ ಸರ್ಕಾರವು ಮೂಲಸೌಕರ್ಯ ಮತ್ತಿತರ ಕಾರ್ಯಗಳಿಗೆ ಮಾಡುತ್ತಿರುವ ವೆಚ್ಚವು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿರುವುದರಿಂದ ತೆರಿಗೆ ಪಾಲನ್ನು ಕಡಿತಗೊಳಿಸುವ ಆಲೋಚನೆಗೆ ಮೂಲ ಕಾರಣ ಎನ್ನಲಾಗಿದೆ. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪದ್ಧತಿಯನ್ನು 2017ರ ಜುಲೈನಲ್ಲಿ ಜಾರಿಗೊಳಿಸಿದ ಬಳಿಕ ರಾಜ್ಯಗಳು ಸ್ವತಂತ್ರವಾಗಿ ಆದಾಯ ರೂಢಿಸಿಕೊಳ್ಳುವುದಕ್ಕೆ ಅವಕಾಶಗಳು ಕಡಿಮೆಯಾಗಿವೆ. ಕೋವಿಡ್ ಹಾವಳಿಯ ನಂತರದ ಅವಧಿಯಲ್ಲಿ ಕೇಂದ್ರ ಸರ್ಕಾರ ಸೆಸ್‌ಗಳು ಮತ್ತು ಸರ್ಚಾರ್ಜ್‌ಗಳ ಪಾಲನ್ನು ಹೆಚ್ಚಿಸಿದ್ದರೂ ಅದರಲ್ಲಿ ರಾಜ್ಯಗಳಿಗೆ ಯಾವುದೇ ಪಾಲನ್ನು ನೀಡುವುದಿಲ್ಲ. ಇನ್ನು ಮುಂದೆ ಕೇಂದ್ರದಿಂದ ಬರುವ ತೆರಿಗೆ ಪಾಲು ಮತ್ತಷ್ಟು ಕಡಿಮೆಯಾಗುವುದರಿಂದ ರಾಜ್ಯಗಳು ತಮ್ಮ ವೆಚ್ಚಗಳನ್ನು ನಿಯಂತ್ರಿಸಿಕೊಳ್ಳುವ ಅನಿವಾರ್ಯತೆ ಎದುರಾಗಲಿದೆ.

ಗ್ಯಾರಂಟಿಗಳಿಗೆ ಕಡಿವಾಣ ನಿರೀಕ್ಷೆ: ರಾಜಕೀಯ ಲಾಭಕ್ಕಾಗಿ ಉಚಿತ ಗ್ಯಾರಂಟಿಗಳನ್ನು ಘೋಷಿಸುವುದು, ಸಾಲ ಮನ್ನಾ ಮಾಡುವುದು, ಜನಪ್ರಿಯ ಯೋಜನೆಗಳಡಿ ಫಲಾನುಭವಿಗಳಿಗೆ ಹಣ ವರ್ಗಾವಣೆ ಮಾಡುವುದು ಮುಂತಾದವುಗಳಿಗೆ ಕಡಿವಾಣ ಹಾಕಿಕೊಳ್ಳುವಂತೆ ಕೇಂದ್ರ ಸರ್ಕಾರವು ರಾಜ್ಯಗಳಿಗೆ ತಾಕೀತು ಮಾಡುವ ಸಾಧ್ಯತೆಯೂ ಇದೆ. ರಾಜ್ಯಗಳಿಗೆ ನೀಡುವ ತೆರಿಗೆ ಪಾಲಿನ ಹಣವನ್ನು ಯಾವ್ಯಾವುದಕ್ಕೆ ಖರ್ಚು ಮಾಡಬೇಕು ಎಂಬುದರ ಕುರಿತು ನಿರ್ದಿಷ್ಟ ಷರತ್ತುಗಳನ್ನು ವಿಧಿಸುವ ಯೋಚನೆಯೂ ಕೇಂದ್ರಕ್ಕಿದೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ. ಅಬ್ದುಲ್ ರಶೀದ್ ರವರ ಮಗ ಶ್ರೀ. ಅಬ್ದುಲ್ ಶಫಿ ರವರು, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಸಿಟಿ, ಎನ್.ಆರ್. ಮೊಹಲ್ಲಾ, ದೇವನೂರು ಎಕ್ಸ್‌ಟೆನ್ಷನ್, 2ನೇ ಹಂತ, ನಿವೇಶನ ನಂ. 1955, ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿದ್ದು ಸ್ವತ್ತಿನ ಪಿ.ಐ.ಡಿ. ನಂ. 97866 ವಾರ್ಡ್ ನಂ. 10 ರ ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ: 12.00 ಮೀಟರ್ ಮತ್ತು ಉತ್ತರ–ದಕ್ಷಿಣ: 18.00 ಮೀಟರ್, ಒಟ್ಟು ವಿಸ್ತೀರ್ಣ: 216.00 ಚದರ ಮೀಟರ್‌ಗಳು, ಇದರಲ್ಲಿರತಕ್ಕ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ– ಖಾಸಗಿ ಸ್ವತ್ತಿನ ನಂ. 1956, ಪಶ್ಚಿಮಕ್ಕೆ – ಖಾಸಗಿ ಸ್ವತ್ತಿನ ನಂ. 1954, ಉತ್ತರಕ್ಕೆ – ರಸ್ತೆ ಮತ್ತು ದಕ್ಷಿಣಕ್ಕೆ ಮುಡಾ ಸ್ವತ್ತು

ಎಸ್‌ಎಲ್‌ಡಿ ಲಾ ಫರ್ಮ್
ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು,
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641
email: sldlawfirm2021@gmail.com

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ಜೆ.ಪಿ.ನಗರ, ನಾಚನಹಳ್ಳಿ ಪಾಳ್ಯ, 2ನೇ ಹಂತ, 9ನೇ ಮೇನ್, 20ನೇ ಕ್ರಾಸ್, ಮನೆ ನಂ. ಇ.ಡಬ್ಲ್ಯೂ.ಎಸ್–6 ರಲ್ಲಿ ವಾಸವಾಗಿರುವ ಲೇಟ್.ಕೆ.ಬಿ.ಧನಶೇಖರ್ ರವರ ಮಗಳಾದ ಸುಮಾರು 35 ವರ್ಷದ ಎಂ.ಡಿ.ದೀಪಿಕ ನಾಯ್ಡು ರವರು ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಹಲ್ಲರೆ ಗ್ರಾಮದಲ್ಲಿ ವಾಸವಾಗಿರುವ ಚನ್ನಪ್ಪ ರವರ ಮಗನಾದ ಸುಮಾರು 60 ವರ್ಷದ ಶ್ರೀ.ಹೆಚ್.ಸಿ.ಬಸವಣ್ಣ ರವರಿಂದ ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಇಚ್ಛಿಸಿದ್ದು, ಈ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದಾದರೂ ಕೋರ್ಟ್ ಕೇಸು, ಆಧಾರ, ಭೋಗ್ಯ, ಯಾವುದೇ ತಂಟೆ ತಕರಾರು ಹಕ್ಕು, ಹೊಣೆಗಾರಿಕೆ ಇದ್ದರೆ ಅಂತಹವರುಗಳು ಈ ಪ್ರಕಟಣೆ ಹೊರಡಿಸಿದ 7 ದಿನಗಳ ಒಳಗಾಗಿ ಲಿಖಿತ ತಕರಾರು ಹಾಗೂ ದಾಖಲೆಗಳ ಮುಖಾಂತರ ಈ ಕೆಳಗೆ ತಿಳಿಸಿರುವ ವಕೀಲರನ್ನಾಗಲೀ ಅಥವಾ ನಮ್ಮ ಕಕ್ಷಿದಾರರನ್ನಾಗಲೀ ಸಂಪರ್ಕಿಸಬೇಕೆಂದು ಈ ಮೂಲಕ ತಿಳಿಯಪಡಿಲಾಗಿರುತ್ತದೆ.

7 ದಿನಗಳ ಒಳಗೆ ಯಾವುದೇ ತಂಟೆ ತಕರಾರುಗಳು ಬರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಯಾವುದೇ ತಂಟೆ ತಕರಾರು ಇಲ್ಲವೆಂದು ಪರಿಗಣಿಸಲಾಗುತ್ತದೆ. ನಂತರ ಬರುವ ತಂಟೆ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ : ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಹೋಬಳಿ, ಹಲ್ಲರೆ ಗ್ರಾಮಕ್ಕೆ ಸೇರಿದ್ದು, ಖುಷ್ಕಿ ಸರ್ವೆ ನಂ 302/1 ರ ವಿಸ್ತೀರ್ಣ 0–20 ಗುಂಟೆ ಜಮೀನಿಗೆ ಚಕ್ಕುಬಂದಿ:–ಪೂರ್ವಕ್ಕೆ : ಲಾಸನಂ 302/2, 3 ಪಶ್ಚಿಮಕ್ಕೆ : ಲಾಸನಂ 301, ಉತ್ತರಕ್ಕೆ: ಲಾಸನಂ 306, ದಕ್ಷಿಣಕ್ಕೆ :ರಸ್ತೆ

ಸಹಿ/– ಡಿ.ಕೆ.ನವೀನ್ ಕುಮಾರ್, ವಕೀಲರು
ಕೆ.ಎ.ಆರ್.1930/2001, ನಂ.595, ಎಫ್ 26
3ನೇ ರಾಮಚಂದ್ರ ಅಗ್ರಹಾರ, ಮೈಸೂರು.
ಮೊ: 9606958870 / 9448360547

PUBLIC NOTICE

Our client has been negotiating with Smt.Smitha Gubbi W/o. Ravindra Gangavaram, residing at # 40,Vail Lane, Watchung NJ 07069, USA, represented by her GPA Holder and husband Mr. Ravindra Gangavaram, for purchase of Schedule property.

It was represented by the present owner that she lost Original Allotment Letter issued by Mysuru Jilla Sahakara Bank Limited Noukarara Sahakara Sangha and Possession Certificate dated 01.09.1980 issued by MUDA, Mysuru.

If anybody has got any claim pertaining to the schedule House Property or pertaining to lost documents, they may notify the same to our client **(Mobile # 99001 24955)** with documentary proof within fifteen days **(15 days)** from the date of this publication. If no claim or objection is received within the said period ,then our client will proceed to complete the transaction treating that there is no claim by anybody in respect of the sites referred above. Any subsequent objections, if any will not bind our client in any manner.

SCHEDULE

All that piece and parcel of property bearing house # 680, situated at JSS Nagar, Bannimantap 'B' Layout, Mandi Mohalla, Mysuru, consisting of residential house building in the site measuring East to West: 40(Forty) feet, North to South 60 (Sixty) feet, in all 2400 square feet, and bounded on ; East: By Property #681, West : By Property # 679, North : By 9 Meter Road, South: By Property # 673 & 674.

Date: 01-03-2025
Place: Mysuru

O. Shama Bhat, B.A., LLB.
O. Satisha, B.Sc., LLB
Advocates
#20\C, 2nd Floor, Near Airlines Hotel,Jayalakshmivilas Road, Chamarajapuram, Mysuru-570005
0821-4262475

ಮೈಸೂರು ಮಹಾನಗರಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ,
ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು.

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್–17/ 998 /2024–25 ದಿನಾಂಕ: 28.02.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಪಾಲಿಕೆ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

				ಸಂಜೆ 4.30 ಗಂಟೆ ನಂತರ	ಬೆಳಿಗ್ಗೆ 11.00 ಗಂಟೆ	ಬೆಳಿಗ್ಗೆ 11.30 ಗಂಟೆ ನಂತರ
ಕ್ರ ಸಂ	ವಿವರ	ಕಾಮಗಾರಿ ಸಂಖ್ಯೆ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಕೆ.ಪಿಪಿ ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ
1	Kw-1	1	9.77	01.03.2025	10.03.2025	11.03.2025
2	Kw-1	1	15.20	01.03.2025	17.03.2025	18.03.2025

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ನೀಸ & ಒಚ (ಪೂರ್ವ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು

ನಕ್ಕರೆ ಅದೇ ಸ್ವರ್ಗ

ಭಿಕ್ಷುಕ : ಸ್ವಾಮಿ ಭಿಕ್ಷೆ ಕೊಡಿ.
ಗುಂಡ : ತಗೋ 2 ರೂಪಾಯಿ.
ಭಿಕ್ಷುಕ : ಇದೇನು ಸ್ವಾಮಿ, ಮೊದಲೆಲ್ಲಾ 10 ರೂ. ಕೊಡುತ್ತಿದ್ರಿ.
ಗುಂಡ : ಏನ್ ಮಾಡೋದು, ಈಗ ನನ್ನ ಮದುವೆ ಆಗಿದೆ.
ಭಿಕ್ಷುಕ : ವಾವ್... ಸ್ವಾಮಿ ನನ್ನ ದುಡ್ಡಲ್ಲಿ ನಿಮ್ಮ ಸಂಸಾರ ನಡೆಸ್ತ ಇದ್ದೀರ.

ಮೈಸೂರು ಮಿತ್ರ

ಶನಿವಾರ, 1 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬೇಕಾದವರೆಲ್ಲಾ ಕೈಬಿಟ್ಟಾಗ, ಧೈರ್ಯ ಕಳೆದುಕೊಂಡಾಗ, ಸೋಲುತ್ತಿದ್ದೇವೆ ಎಂದು ಭಯ ಪಟ್ಟಾಗ, ಯಾವುದೇ ದಾರಿ ಕಾಣಿಸದೆ ಇದ್ದಾಗ, ನಮ್ಮನ್ನು ಗೆಲುವಿನ ಕಡೆಗೆ ನಡೆಸುವ ಮತ್ತು ಧೈರ್ಯ ತುಂಬುವ ಒಂದೇ ಒಂದು ಮಾತು ರಾಂಯರಿದ್ದಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತನ್ನದೆ ಓಣಿಯಲ್ಲಿ ನಾಯಿಯೂ ಸಿಂಹ

ನಿಮ್ಮ ಪತ್ರಗಳು

ಕರ್ನಾಟಕವೂ ದನಿಗೂಡಿಸಬೇಕು

ಮಾನ್ಯರೆ,

ದೇಶದ 543 ಲೋಕಸಭಾ ಕ್ಷೇತ್ರಗಳನ್ನು ಜನಸಂಖ್ಯೆ ಆಧಾರದ ಮೇಲೆ ಪುನರ್ ವಿಂಗಡಣೆ ಮಾಡಿದರೆ ದಕ್ಷಿಣ ಭಾರತದ ಒಟ್ಟು 130 ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗುತ್ತದೆ. ಇದರಿಂದ ತಮಿಳುನಾಡು ಒಂದೇ 8 ಕ್ಷೇತ್ರಗಳನ್ನು ಕಳೆದುಕೊಳ್ಳಲಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಕೇಂದ್ರ ಸಚಿವ ಅಮಿತ್ ಶಾ ದಕ್ಷಿಣ ಭಾರತದವರು ಒಂದೇ ಒಂದು ಸ್ಥಾನವನ್ನೂ ಕಳೆದುಕೊಳ್ಳುವುದಿಲ್ಲ ಎಂದು ಭರವಸೆ ಕೊಡುತ್ತೇನೆ. ಲೋಕಸಭೆಯಲ್ಲಿ ಕೂಡ ಇದನ್ನು ಸ್ಪಷ್ಟಪಡಿಸಲಾಗಿದೆ ಎಂದು ಹೇಳಿದ್ದಾರೆ (ಅಮಿತ್ ಶಾರ ಕೊಯಮತ್ತೂರು ಪ್ರವಾಸ) ಎಂದು 27.2.25.ರ ಪತ್ರಿಕೆಗಳಲ್ಲಿ ವರದಿಯಾಗಿದೆ.

ಮುಂಬರುವ ಕ್ಷೇತ್ರ ಪುನರ್ ವಿಂಗಡಣೆಯನ್ನು ಜನಸಂಖ್ಯೆ ಆಧಾರದ ಮೇಲೆ ಕ್ಷೇತ್ರ ಪುನರ್ ವಿಂಗಡಣೆ ಮಾಡಿದರೆ ಇಂದಿನ ಪರಿಸ್ಥಿತಿಯಲ್ಲಿ ಭಾರಿ ಪ್ರಮಾಣದಲ್ಲಿ ಜನಸಂಖ್ಯೆ ನಿಯಂತ್ರಣ ಮಾಡಿರುವ ದಕ್ಷಿಣದ ರಾಜ್ಯಗಳು ಕೇವಲ ಒಂದೆರಡು ಹೆಚ್ಚು ಸ್ಥಾನಗಳನ್ನು ಪಡೆಯಬಹುದು. ಆದರೆ ಅತೀ ಹೆಚ್ಚು ಜನಸಂಖ್ಯೆ ಬೆಳವಣಿಗೆ ಕಂಡಿರುವ ಯುಪಿ, ಬಿಹಾರ ಮುಂತಾದ ಉತ್ತರದ ರಾಜ್ಯಗಳು ಈಗಿರುವುದಕ್ಕಿಂತ ಅತೀ ಹೆಚ್ಚಿನ ಸ್ಥಾನಗಳನ್ನು ಗಳಿಸಿ ಉತ್ತರದ ಸಂಸದರ ಪ್ರಾಬಲ್ಯಕ್ಕೆ ಕಾರಣವಾಗುತ್ತದೆ. ಇದೇ ಕಾರಣಕ್ಕೆ ಸ್ಟಾಲಿನ್ ದಕ್ಷಿಣದವರು ಹೆಚ್ಚು ಮಕ್ಕಳನ್ನು ಹೊಂದಬೇಕು ಎಂದು ಹೇಳಿರುವುದು. ಕುಟುಂಬ ಯೋಜನೆಯನ್ನು ದಕ್ಷಿಣ ಭಾರತದ ರಾಜ್ಯಗಳು ರಾಷ್ಟ್ರೀಯ ಕಾರ್ಯಕ್ರಮವೆಂದು ಶಿಸ್ತಿನಿಂದ ಅಳವಡಿಸಿಕೊಂಡದ್ದೇ ತಪ್ಪೇನ್ನುವಂತಾಗಿದೆ ವಿಪರ್ಯಾಸ!

ಆದ್ದರಿಂದ ಜನಸಂಖ್ಯೆ ಆಧಾರದ ಮೇಲೆ ಕ್ಷೇತ್ರಗಳನ್ನು ಹೆಚ್ಚು ಮಾಡುವುದನ್ನು ಬಿಟ್ಟು ಈಗಿರುವ ಕ್ಷೇತ್ರಗಳ ಶೇಕಡಾವಾರು ಆಧಾರದ ಮೇಲೆ ಹೊಸ ಕ್ಷೇತ್ರಗಳನ್ನು ನೀಡಲು ದಕ್ಷಿಣದ ರಾಜ್ಯಗಳು ಕೇಂದ್ರ ಸರ್ಕಾರದ ಮೇಲೆ ಭಾರಿ ಒತ್ತಡ ಹೇರುವ ಅಗತ್ಯವಿದೆ. ಹೀಗೆ ಮಾಡಿದರೆ ಯುಪಿಯ 82 ಕ್ಷೇತ್ರಗಳಿಗೆ ಶೇಕಡವಾರು ಎಷ್ಟು ಕ್ಷೇತ್ರಗಳು ಜಾಸ್ತಿಯಾಗುತ್ತವೋ, ಅದೇ ಪ್ರಮಾಣದಲ್ಲಿ ಕರ್ನಾಟಕದ 28 ಕ್ಷೇತ್ರಗಳಿಗೂ ಹೆಚ್ಚು ಮಾಡುವಂತಾಗುತ್ತದೆ. ಇಲ್ಲದಿದ್ದರೆ ಕೇಂದ್ರ ಸರ್ಕಾರ ರಚನೆಯಲ್ಲಿ ದಕ್ಷಿಣದ ರಾಜ್ಯಗಳು ತಮ್ಮ ಪ್ರಾಬಲ್ಯ ಕಳೆದುಕೊಂಡು ನೆಪ ಮಾತ್ರದ ಅಸ್ತಿತ್ವವನ್ನು ಹೊಂದಿರುತ್ತವೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಪ್ರಧಾನಿ ಮೋದಿ ಮಧುಮೇಹದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಿ

ಮಾನ್ಯರೆ,

ಕಳೆದ ಭಾನುವಾರ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆಕಾಶವಾಣಿಯ ತಮ್ಮ ಮನದ ಮಾತು (ಮನ್ ಕಿ ಬಾತ್) ಕಾರ್ಯಕ್ರಮದಲ್ಲಿ ಜನರ ಸ್ಥೂಲಕಾಯ ಸಮಸ್ಯೆ ಬಗ್ಗೆ ತಮ್ಮ ಆತಂಕ ವ್ಯಕ್ತಪಡಿಸಿ, ಅದಕ್ಕೆ ಪರಿಹಾರವನ್ನೂ ಹೇಳಿದ್ದಾರೆ. ಇತ್ತೀಚಿನ ದಿನಗಳಲ್ಲಿ ಪ್ರಸಾರವಾದ ಮನದ ಮಾತು ಕಾರ್ಯಕ್ರಮದಲ್ಲೇ, ಇದೊಂದು ವಿಶಿಷ್ಟ ರೀತಿಯ ಕಾರ್ಯಕ್ರಮ. ದೇಶದ ಸರಾಸರಿ ಜನಸಂಖ್ಯೆಯ 8 ಜನರಲ್ಲಿ ಒಬ್ಬರು ಈ ಬೊಜ್ಜು ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಮುಖ್ಯವಾಗಿ ಯುವ ಜನತೆಗೆ ಈ ಸ್ಥೂಲಕಾಯದಿಂದ ಆಗುವ ಆರೋಗ್ಯ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಿರುವುದು ಅತ್ಯಂತ ಶ್ಲಾಘನೀಯ ಕಾರ್ಯಕ್ರಮ. ಟಿವಿ ಬಂದ ನಂತರ, ರೇಡಿಯೋದಿಂದ ದೂರವಾಗಿದ್ದ ಜನರನ್ನು ರೇಡಿಯೋ ಕೇಳುವಂತೆ ಮಾಡಿದ ಕೀರ್ತಿ ಪ್ರಧಾನಮಂತ್ರಿಯವರಿಗೆ ಸಲ್ಲಬೇಕು. ಮೋದಿ ಅವರು ಆಕಾಶವಾಣಿಗೆ ಒಂದು ಕಾಯಕಲ್ಪ ಕಲ್ಪಿಸಿದವರು. ಮುಖ್ಯವಾಗಿ ನಮ್ಮ ಯುವ ಜನತೆ ಸೇರಿದಂತೆ ದೇಶದ ಸರಾಸರಿ ಜನಸಂಖ್ಯೆಯ 4 ಜನರಲ್ಲಿ ಒಬ್ಬರು 'ಮಧುಮೇಹ' (ಸಕ್ಕರೆ ಖಾಯಿಲೆ)ದಿಂದ ಬಳಲುತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ಹೇಳಿದೆ. ಒಂದು ಅಂದಾಜಿನ ಪ್ರಕಾರ 2040 ರ ವೇಳೆಗೆ ಇಡೀ ಪ್ರಪಂಚದಲ್ಲೇ ಅತ್ಯಂತ ಹೆಚ್ಚು ಮಧುಮೇಹಿಗಳನ್ನು ಹೊಂದಿದ ದೇಶವಾಗಲಿದೆ ಎಂದು ಹೇಳಲಾಗುತ್ತಿದೆ. ಪ್ರಧಾನ ಮಂತ್ರಿಯವರು ತಮ್ಮ ರೇಡಿಯೋದ ಜನಪ್ರಿಯ ಕಾರ್ಯಕ್ರಮವಾದ ಮನದ ಮಾತು ಕಾರ್ಯಕ್ರಮದ ಮುಂದಿನ ಸಂಚಿಕೆಯಲ್ಲಿ ಮಧುಮೇಹದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ ಮೈಸೂರು

ಫುಟ್‌ಪಾತ್ ತೆರವುಗೊಳಿಸಿ

ಮಾನ್ಯರೆ,

ಮೈಸೂರಿನ ಅರಮನೆ ಸುತ್ತ, ಸಯ್ಯಾಜಿರಾವ್ ರಸ್ತೆ, ಗಾಂಧಿ ವೃತ್ತ, ಶಿವರಾಂಪೇಟೆ ರಸ್ತೆ, ಡಿ.ದೇವರಾಜ ಅರಸು ರಸ್ತೆ, ಸೇರಿದಂತೆ ಹಲವೆಡೆ ಪಾದಚಾರಿಗಳಿಗೆ ಇರುವ ಫುಟ್‌ಪಾತ್‌ಗಳನ್ನು ಅಂಗಡಿಯವರು ಒತ್ತುವರಿ ಮಾಡಿಕೊಂಡಿದ್ದಾರೆ. ಎಲ್ಲೆಂದರಲ್ಲಿ ಸಣ್ಣ ಸಣ್ಣ ಅಂಗಡಿಗಳು ತಲೆ ಎತ್ತಿವೆ. ಈ ಕಾರಣಕ್ಕೆ ಸಾರ್ವಜನಿಕರು ಫುಟ್‌ಪಾತ್ ಬಿಟ್ಟು ರಸ್ತೆಗಿಳಿಯುತ್ತಿದ್ದಾರೆ. ಇದು ಅಪಘಾತಗಳಿಗೆ ಕಾರಣವಾಗುತ್ತಿದೆ. ಸಂಯ್ಯಾಜಿರಾವ್ ರಸ್ತೆಯ ಒಂದು ಬದಿಯಲ್ಲಿ 150ಕ್ಕೂ ಹೆಚ್ಚು ಮಂದಿ ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಇಂತಹ ಅಂಗಡಿಗಳನ್ನು ತೆರವುಗೊಳಿಸಬೇಕೆಂದು ಈ ಮೂಲಕ ಮನವಿ.

–ಪಿ. ನಾಗರತ್ನ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು

ಕೆಲವು ವಿವಿ ಮುಚ್ಚುವ ನಿರ್ಧಾರ ಸ್ವಾಗತಾರ್ಹ

ಮಾನ್ಯರೆ,

ಹಿಂದಿನ ಸರ್ಕಾರದ ಜಿಲ್ಲೆಗೊಂದು ವಿಶ್ವವಿದ್ಯಾಲಯ ಆರಂಭವಾದ ವಿವಿಗಳಲ್ಲಿ ಕೆಲವನ್ನು ಮುಚ್ಚುವ ಈಗಿನ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಇದನ್ನೇ ಜನಗಳು ಜಿಲ್ಲೆಗೊಂದು ವಿವಿ ಆಯ್ತು, ಮುಂದಕ್ಕೆ ತಾಲೂಕಿಗೆ ಒಂದು, ಹೋಬಳಿಗೊಂದು ವಿವಿ ಗಳು ಆಗುತ್ತಿದ್ದವೇನೋ ಎಂದು ಗೇಲಿ ಮಾಡುತ್ತಿದ್ದರು. ಮೈಗಿಂತ ತಲೆ ದಪ್ಪ ಎನ್ನುವಂತೆ ಆಯ್ತು. ಸಂಗೀತ, ಜಾನಪದ ಮುಂತಾದ ವಿವಿಗಳೂ ಅನಾವಶ್ಯಕ. ಹಾಗೆ ನೋಡಿದರೆ ಬೆಂಗಳೂರಲ್ಲಿ ಹೊಸದಾಗಿ ಆರಂಭಿಸಿದ ಬೆಂಗಳೂರು ನಗರ, ಬೆಂಗಳೂರು ಉತ್ತರ ಎಂಬ ಎರಡು ವಿವಿಗಳ ಅವಶ್ಯಕತೆಯೂ ಇಲ್ಲ. ತಮ್ಮ ಕಡೆಯವರಿಗೆ ಸಹಾಯ ಮಾಡಲು ಹುದ್ದೆಗಳನ್ನು ಸೃಷ್ಟಿ ಮಾಡುವುದು ಸರಿಯಲ್ಲ. ಇಡೀ ರಾಜ್ಯಕ್ಕೆ ಮೂರು ತಪ್ಪಿದರೆ ನಾಲ್ಕು ವಿವಿಗಳು ಸಾಕು. ಉಳಿದವನ್ನು ಬಂದ್ ಮಾಡಿ ಸಾರ್ವಜನಿಕ ಹಣ ದುಂದು ವೆಚ್ಚ ಮಾಡದಿರಲಿ.

–ಅಕ್ಕಿಹೆಬ್ಬಾಳು ವೆಂಕಟೇಶ್, ಕುವೆಂಪುನಗರ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಎಲ್ಲರೊಳಗೊಂದಾಗಿ... ಋಣಮುಕ್ತನಾಗು...!



"ನಾವು ಇಂತಹ ಮನೋಗುಣ ಬೆಳೆಸಿಕೊಳ್ಳುವುದು ಅವಶ್ಯಕ. ನಾವು ಮನೆ ಕಟ್ಟುವಾಗ ಹೇಗಾದರೂ ಹಣ ಹೊಂದಿಸಬಹುದು. ಆದರೆ ಮನೆಗೆ ಬೇಕಾದ ಸಾಮಾಗ್ರಿಗಳು, ಕೆಲಸಗಾರರೂ ಬೇಕಾಗುತ್ತಾರೆ. ಅದರಲ್ಲಿ ನಮ್ಮ ಹಣಕ್ಕಿಂತ ನಮ್ಮ ಬಾಂಧವ್ಯ ಹೆಚ್ಚು ಕೆಲಸ ಮಾಡುತ್ತದೆ. ಅಂತಹವರ ಸಹಕಾರವನ್ನು ಸ್ಮರಿಸಿ, ಕೃತಜ್ಞತೆ ಸಲ್ಲಿಸಬೇಕು. ಶ್ರಮಿಕರು ಸಂತೃಪ್ತರಾದರೆ ಏನೋ ಧನ್ಯತಾ ಭಾವ. ನಾವು ಹಣವಂತರಾಗುವ ಜೊತೆಗೆ ಗುಣವಂತರೂ ಆಗಬೇಕು. ನನಗೆ ಇಷ್ಟೆಲ್ಲಾ ದೊರಕಿರುವುದು ಈ ಸಮಾಜದಿಂದ ಎಂದು ಭಾವಿಸಬೇಕು. ಹಾಗಾಗಿ ಸಮಾಜ ದೇವೋಭವ ಎಂಬ ಕೃತಜ್ಞತೆ ಅವಶ್ಯ. ಇದರ ಜೊತೆಗೆ ನಮ್ಮ ಆದ್ಯ ಕರ್ತವ್ಯ ಎಂದರೆ ನಮಗೆ ಯಾರೇ ಸಹಾಯ ಮಾಡಲಿ, ಅದು ಎಷ್ಟೇ ಸಣ್ಣದಾಗಿರಲಿ, ಅಂತಹುದನ್ನು ನೆನಪಿಸಿಕೊಂಡು ಕೃತಜ್ಞತೆ ಸಲ್ಲಿಸಬೇಕು. ನಮ್ಮ ಹಣ ಸದ್ವಿನಿಯೋಗವಾಗುವುದು ಇಂತಹ ಪ್ರಾಮಾಣಿಕ ಸಣ್ಣಪುಟ್ಟ ಕೆಲಸಗಾರರು ಹಾಗೂ ಸರಬರಾಜುದಾರರಿಂದ ಎಂಬುದು ನಮ್ಮ ಅರಿವಿನಲ್ಲಿರಬೇಕು. ನಮ್ಮ ಮನೆಯ ಮುಂದೆ ತರಕಾರಿ, ಹಾಲು ತರುವವರು, ಪತ್ರಿಕೆ ವಿತರಿಸುವವರು, ಕಸ ಸಂಗ್ರಹಣೆ ಮಾಡುವವರು, ಹಳೆ ಪತ್ರಿಕೆ ಕೊಂಡುಕೊಳ್ಳುವವರು ಇವರೆಲ್ಲಾ ಒಂದಲ್ಲ ಒಂದು ರೀತಿ ನಮಗೆ ಸಹಾಯಕರು. ಅಂತಹವರಿಗೆ ನಾವು ಹಣ ನೀಡಬಹುದು. ಅಷ್ಟು ಸಾಲದು. ಅವರಿಗೆ ಒಂದು ಸಣ್ಣ ನಗು, ಒಂದು ಧನ್ಯವಾದ ತಿಳಿಸಿದರೆ ಅವರು ಕೃತಜ್ಞತಾ ಭಾವ ತಾಳುತ್ತಾರೆ.

ನಾವು ಈ ಸಮಾಜದಲ್ಲಿ ನೆಮ್ಮದಿಯಾಗಿ ಬದುಕುತ್ತಿದ್ದೇವೆ ಎಂದರೆ ಅದಕ್ಕೆ ಹಲವರ ಕೊಡುಗೆ ಹಾಗೂ ಸಹಕಾರ ಕಾರಣವಾಗಿರುತ್ತದೆ. ಮೊದಲನೆಯದಾಗಿ ತಂದೆ–ತಾಯಿ. ನಂತರ ನಮಗೆ ವಿದ್ಯೆ ಕಲಿಸಿದ ಗುರುಗಳು, ಈ ಪ್ರಕೃತಿ, ಸಮಾಜ. ಅದಕ್ಕಾಗಿಯೇ ನಮ್ಮ ಜೀವನದ ಶ್ರೇಷ್ಠತೆಯನ್ನು ಹಾಗೂ ಜವಾಬ್ದಾರಿಯನ್ನು ನೆನಪಿಸುವುದರ ಜೊತೆಗೆ ಕೃತಜ್ಞತಾ ಭಾವದಿಂದ ಕೆಲವು ಮಾತುಗಳಿವೆ. ಅವೆಂದರೆ, ಮಾತೃ ದೇವೋಭವ, ಪಿತೃ ದೇವೋಭವ, ಆಚಾರ್ಯ ದೇವೋಭವ, ಅತಿಥಿ ದೇವೋಭವ, ಸಮಾಜ ದೇವೋಭವ ಹಾಗೂ ರಾಷ್ಟ್ರ ದೇವೋಭವ ಎಂದು ಸ್ಮರಿಸುತ್ತೇವೆ, ವಂದಿಸುತ್ತೇವೆ. ನಾವು ಉತ್ತಮ ಜೀವನ ನಡೆಸಬೇಕಾದರೆ ಇವರೆಲ್ಲರ ಸಹಕಾರ ಮುಖ್ಯವಾಗಿರುತ್ತದೆ. ನಾವು ಸ್ವಯಂಭೂ ಅಲ್ಲ. ತಂದೆ–ತಾಯಿ ಪ್ರತಿಯೊಬ್ಬರ ಜನ್ಮಕ್ಕೆ ಕಾರಣರಾಗಿರುತ್ತಾರೆ. ಶಾಲೆಯ ಗುರುಗಳು ನಮಗೆ ಅಕ್ಷರ ಕಲಿಸಿ ಮಾರ್ಗದರ್ಶನ ಮಾಡಿರುತ್ತಾರೆ. ಅದರಲ್ಲೂ ನಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯ ಶಿಕ್ಷಕರಂತೂ ನಮಗೆ ಜ್ಞಾನದ ಬೆಳಕು ಹೊತ್ತಿಸಿರುತ್ತಾರೆ. ಅಲ್ಲಿಂದ ಮುಂದೆ ನಾವು ಬೆಳೆಯುವ ವಾತಾವರಣವು ನಮ್ಮ ಮುಂದಿನ ಶಿಕ್ಷಣಕ್ಕೆ ನಾಂದಿಯಾಗುತ್ತದೆ. ಅದರಲ್ಲೂ ತಂದೆ–ತಾಯಿಯ ಪಾತ್ರವೇ ಹಿರಿದು. ನಮ್ಮ ಮಗ, ಮಗಳು ಮುಂದೆ ಉತ್ತಮ ಜೀವನ ನಡೆಸ ಬೇಕೆಂದು ಅವರು ಹಲವು ಕಠಿಣ ನಿರ್ಧಾರ ಕೈಗೊಂಡಿರುತ್ತಾರೆ. ಅದರಂತೆ ಕಷ್ಟಪಟ್ಟು ನಮಗೆ ವಿದ್ಯಾಭ್ಯಾಸ ಕೊಡಿಸುತ್ತಾರೆ.

ನಾವು ಹುಟ್ಟುವ ಮೊದಲೇ ಇಲ್ಲಿ ಶಾಲೆಗಳು, ಪಠ್ಯಗಳು, ಪ್ರಯೋಗಾಲಯಗಳು, ಗ್ರಂಥಾಲಯಗಳು, ರಸ್ತೆಗಳು, ವಾಹನಗಳು ಎಲ್ಲಾ ವ್ಯವಸ್ಥೆ ಇರುತ್ತದೆ. ಇದಾವುದನ್ನೂ ನಾವೇನು ಹೊಸದಾಗಿ ರೂಪಿಸಿಕೊಳ್ಳಬೇಕಿಲ್ಲ. ಇರುವುದನ್ನು ಉಪಯೋಗಿಸಿಕೊಂಡು ನಾವು ನಮ್ಮ ಓದು ಮುಗಿಸುತ್ತೇವೆ. ಹಾಗೆಯೇ ನಮಗೆ ಯಾವ ಸಂಬಂಧವೂ ಇಲ್ಲದ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿ ಸಂಪಾದಿಸುತ್ತೇವೆ. ಇಲ್ಲಿಯೂ ನಮ್ಮ ಹಿರಿಮೆ ಏನೂ ಇಲ್ಲ. ಹಾಗಾಗಿ ಇವೆಲ್ಲದರ ಬಗ್ಗೆ ನಮಗೆ ಅಭಿಮಾನ ಹಾಗೂ ಗೌರವ ಇರಬೇಕಷ್ಟೆ. ಇವುಗಳನ್ನು ಉಪಯೋಗಿಸಿಕೊಂಡು ಬೆಳೆದ ನಾವು ನಮ್ಮ ಬೆಳವಣಿಗೆಗೆ ಕಾರಣವಾದ ಈ ಸಮಾಜಕ್ಕೆ ಏನನ್ನಾದರೂ ಕೊಡುಗೆ ನೀಡಬೇಕು. ಹಿಂದಿನ ತಲೆಮಾರು ನಮಗೆ ಈ ಸೌಲಭ್ಯಗಳನ್ನು ಕಲ್ಪಿಸಿರುವಾಗ, ನಾವೂ ಅದಕ್ಕೆ ಕೈಲಾದುದನ್ನು ಸೇರ್ಪಡೆ ಮಾಡಬೇಕು. ಅದನ್ನು ನಾವು ಕೃತಜ್ಞತೆ ಎಂದು ಕರೆಯುತ್ತೇವೆ. ಹಾಗೆ ಮಾಡದೇ ಇರುವುದು ಕೃತಘ್ನತೆ ಎನಿಸಿಕೊಳ್ಳುತ್ತದೆ.

ಇತ್ತೀಚೆಗೆ ಗಣ್ಯರೊಬ್ಬರ ಮನೆಯ ಗೃಹಪ್ರವೇಶ ನಡೆಯಿತು. ಅವರು ಸಾಮಾಜಿಕ ಕಳಕಳಿ ಉಳ್ಳವರು. ಇದಕ್ಕಾಗಿ ತಮ್ಮ ಗೃಹಪ್ರವೇಶವನ್ನು ವಿಶಿಷ್ಟವಾಗಿ ಆಚರಿಸಲು ಉದ್ದೇಶಿಸಿದರು. ಅವರು ಮನೆ ಕಟ್ಟಿದ್ದು ಈಗಾಗಲೇ ಅಭಿವೃದ್ಧಿ ಹೊಂದಿದ ಪ್ರದೇಶದಲ್ಲಿ. ಅಂದರೆ ಆ ಮನೆಯ ಸುತ್ತಾಮುತ್ತಾ ಈಗಾಗಲೇ ಹಲವು ಮನೆಗಳಿದ್ದವು ಹಾಗೂ ಅಲ್ಲಿ ಜನರೂ ವಾಸವಿದ್ದರು. ತಮ್ಮ ಗೃಹಪ್ರವೇಶದ ಆಹ್ವಾನ ಪತ್ರಿಕೆಯಲ್ಲಿ ಮಾತೃ ದೇವೂಭವ, ಪಿತೃ ದೇವೋಭವ, ಆಚಾರ್ಯ ದೇವೋಭವ, ಅತಿಥಿ ದೇವೋಭವ, ದರಿದ್ರ ನಾರಾಯಣ ದೇವೋಭವ, ಸಮಾಜ ದೇವೋಭವ ಹಾಗೂ ರಾಷ್ಟ್ರ ದೇವೋಭವ ಎಂದು ಮುದ್ರಿಸಿದ್ದರು. ನಿಜವಾಗಲೂ, ಇದೊಂದು ವಿನೂತನ ರೀತಿಯ ಆಹ್ವಾನ ಪತ್ರಿಕೆ.

ಗೃಹಪ್ರವೇಶದ ಸಮಯದಲ್ಲಿ ಮನೆಮಂದಿಯೆಲ್ಲಾ ಸಂಭ್ರಮದಲ್ಲಿರುತ್ತೇವೆ. ನೆಂಟರು ಇಷ್ಟರನ್ನು ಕರೆಯುವುದು, ಅವರಿಗೆ ಉಡುಗೊರೆ ನೀಡುವುದು, ಉಡುಗೊರೆ ಪಡೆಯುವುದು ಇವೆಲ್ಲಾ ಸಾಮಾನ್ಯ. ಆದರೆ ಅವರು, ತಾವು ಬೆಳೆದ ಸಮಾಜಕ್ಕಾಗಿ ಏನನ್ನಾದರೂ ನೀಡಬೇಕೆಂದು ಬಯಸಿ, ಉತ್ತಮ, ಸಾರ್ಥಕ ಸಾಮಾಜಿಕ ಕಾರ್ಯ ಮಾಡುತ್ತಿರುವ ಒಂದು ಸಂಸ್ಥೆಗೆ ಆರ್ಥಿಕ ನೆರವನ್ನೂ ನೀಡಿದರು. ಅದನ್ನು ಅವರು ಮಂಗಳನಿಧಿ ಎಂದು ಕರೆದರು. ಉಳಿದವರೂ ಈ ರೀತಿ ಯೋಚನೆ ಮಾಡುವಂತಾಗಲಿ ಎಂಬ ಸದುದ್ದೇಶದಿಂದ ಈ ನಿಧಿ ಸಮರ್ಪಣೆಯ ಬಗ್ಗೆ ಒಬ್ಬ ಸಾಮಾಜಿಕ ಕಾರ್ಯಕರ್ತರಿಂದ ಅದರ ಮಹತ್ವ ತಿಳಿಸುವಲುವಾಗಿ ವೇದಿಕೆ ಕಾರ್ಯಕ್ರಮವನ್ನೂ ಮಾಡಿದರು. ಇದರ ಜೊತೆಗೆ ಅಲ್ಲಿ ಮಾತನಾಡುವಾಗ ತಮ್ಮ ಮನೆಯನ್ನು ಕಟ್ಟಲು ಸಹಕರಿಸಿದ ಎಲ್ಲರನ್ನೂ ಸ್ಮರಿಸಿ, ಅವರನ್ನು ವೇದಿಕೆಗೆ ಕರೆದು ಗೌರವಿಸಿದರು. ಅದನ್ನು ಒಂದು ರೀತಿಯ 'ಉಪಕಾರ ಸ್ಮರಣೆ' ಎಂದು ಕರೆದರು. ಅದರಲ್ಲಿ ಮನೆಯ ಇಂಜಿನಿಯರ್‌ನಿಂದ ಹಿಡಿದು, ಸುಣ್ಣಬಣ್ಣ ಬಳಿದವರು, ಮರಗೆಲಸ ಮಾಡಿದವರು, ಸಾಮಾಗ್ರಿ ಸರಬರಾಜು ಮಾಡಿದವರು... ಹೀಗೆ ಮನೆ ನಿರ್ಮಾಣದಲ್ಲಿ ಸಹಾಯ–ಸಹಕಾರ ನೀಡಿದವರ ಪಟ್ಟಿ ಮಾಡಿಕೊಂಡು ಅವರಿಗೆಲ್ಲಾ ಗೌರವ ಸಲ್ಲಿಸಿದರು. ವಿಶೇಷ ಎಂದರೆ ಆ ಪಟ್ಟಿಯಲ್ಲಿ ಮನೆಯ ಕಾವಲುಗಾರ, ಆತನ ಪತ್ನಿ, ಕೆಲಸಗಾರರಿಗೆ ನಿರ್ಮಾಣ ಸಮಯದಲ್ಲಿ ಟೀ ಸರಬರಾಜು ಮಾಡಿದವರು, ಕಸ ಗುಡಿಸಿ, ಸ್ವಚ್ಛ ಮಾಡಿದವರನ್ನೂ ನೆನಪಿಸಿಕೊಂಡು ಸತ್ಕರಿಸಿದರು. ಅದನ್ನು ಅವರು ಕೃತಜ್ಞತಾಭಾವ ಎಂದು ಭಾವಿಸಿದರು. ಇದರ ಜೊತೆಗೆ ತಾವು ಮನೆ ಕಟ್ಟುವಾಗ ನೆರೆಹೊರೆಯವರಿಗೆ ಒಂದಲ್ಲ ಒಂದು ರೀತಿ ತೊಂದರೆಯಾಗಿದೆ. ಅವರಲ್ಲಿ ಕ್ಷಮೆ ಕೋರುತ್ತೇವೆ ಎಂದೂ ಹೇಳಿದರು. ಇದು ಈ ಸಮಾಜದ ಬಗ್ಗೆ ನಮಗೆ ಇರಬೇಕಾದ ಕಳಕಳಿ, ಗೌರವವನ್ನು ತೋರಿಸುತ್ತದೆ. ಹೀಗೆ ಮಾಡಿದಾಗ ನಮ್ಮ ಅಕ್ಕಪಕ್ಕದವರ ಸ್ನೇಹ ವೃದ್ಧಿಯಾಗುತ್ತದೆ. ಅವರು ತಮಗಾದ ತೊಂದರೆ ಮರೆತುಬಿಡುತ್ತಾರೆ. ಇದಾವುದೂ ತೋರಿಕೆಗೆ ಆದ ಮಾತಗಳಲ್ಲ. ಅವರ ಬದ್ಧತೆ ಇದರಲ್ಲಿ ಕಂಡುಬಂದಿತು.

ನಾವು ಇಂತಹ ಮನೋಗುಣ ಬೆಳೆಸಿಕೊಳ್ಳುವುದು ಅವಶ್ಯಕ. ನಾವು ಮನೆ ಕಟ್ಟುವಾಗ ಹೇಗಾದರೂ ಹಣ ಹೊಂದಿಸಬಹುದು. ಆದರೆ ಮನೆಗೆ ಬೇಕಾದ ಸಾಮಾಗ್ರಿಗಳು, ಕೆಲಸಗಾರರೂ ಬೇಕಾಗುತ್ತಾರೆ. ಅದರಲ್ಲಿ ನಮ್ಮ ಹಣಕ್ಕಿಂತ ನಮ್ಮ ಬಾಂಧವ್ಯ ಹೆಚ್ಚು ಕೆಲಸ ಮಾಡುತ್ತದೆ. ಅಂತಹವರ ಸಹಕಾರವನ್ನು ಸ್ಮರಿಸಿ, ಕೃತಜ್ಞತೆ ಸಲ್ಲಿಸಬೇಕು. ಶ್ರಮಿಕರು ಸಂತೃಪ್ತರಾದರೆ ಏನೋ ಧನ್ಯತಾ ಭಾವ.

ನಾವು ಹಣವಂತರಾಗುವ ಜೊತೆಗೆ ಗುಣವಂತರೂ ಆಗಬೇಕು. ನನಗೆ ಇಷ್ಟೆಲ್ಲಾ ದೊರಕಿರುವುದು ಈ ಸಮಾಜದಿಂದ ಎಂದು ಭಾವಿಸಬೇಕು. ಹಾಗಾಗಿ ಸಮಾಜ ದೇವೋಭವ ಎಂಬ ಕೃತಜ್ಞತೆ ಅವಶ್ಯ. ಇದರ ಜೊತೆಗೆ ನಮ್ಮ ಆದ್ಯ ಕರ್ತವ್ಯ ಎಂದರೆ ನಮಗೆ ಯಾರೇ ಸಹಾಯ ಮಾಡಲಿ, ಅದು ಎಷ್ಟೇ ಸಣ್ಣದಾಗಿರಲಿ, ಅಂತಹುದನ್ನು ನೆನಪಿಸಿಕೊಂಡು ಕೃತಜ್ಞತೆ ಸಲ್ಲಿಸಬೇಕು. ನಮ್ಮ ಹಣ ಸದ್ವಿನಿಯೋಗವಾಗುವುದು ಇಂತಹ ಪ್ರಾಮಾಣಿಕ ಸಣ್ಣಪುಟ್ಟ ಕೆಲಸಗಾರರು ಹಾಗೂ ಸರಬರಾಜುದಾರರಿಂದ ಎಂಬುದು ನಮ್ಮ ಅರಿವಿನಲ್ಲಿರಬೇಕು. ನಮ್ಮ ಮನೆಯ ಮುಂದೆ ತರಕಾರಿ, ಹಾಲು ತರುವವರು, ಪತ್ರಿಕೆ ವಿತರಿಸುವವರು, ಕಸ ಸಂಗ್ರಹಣೆ ಮಾಡುವವರು, ಹಳೆ ಪತ್ರಿಕೆ ಕೊಂಡುಕೊಳ್ಳುವವರು ಇವರೆಲ್ಲಾ ಒಂದಲ್ಲ ಒಂದು ರೀತಿ ನಮಗೆ ಸಹಾಯಕರು. ಅಂತಹವರಿಗೆ ನಾವು ಹಣ ನೀಡಬಹುದು. ಅಷ್ಟು ಸಾಲದು. ಅವರಿಗೆ ಒಂದು ಸಣ್ಣ ನಗು, ಒಂದು ಧನ್ಯವಾದ ತಿಳಿಸಿದರೆ ಅವರು ಕೃತಜ್ಞತಾ ಭಾವ ತಾಳುತ್ತಾರೆ.

ಇನ್ನು ವಯಸ್ಸಾದ ತಂದೆ–ತಾಯಿಯನ್ನು ಗೌರವದಿಂದ ನೋಡಿಕೊಳ್ಳಬೇಕು ಎಂಬ ಮಾತನ್ನು ಆಗಾಗ್ಗೆ ಕೇಳುತ್ತೇವೆ. ಆದರೆ ಹಣದ ಹಂಬಲದ ಮಕ್ಕಳು ತಮ್ಮನ್ನು ಸಾಕಿ ಸಲಹಿದ ತಂದೆ–ತಾಯಿಯನ್ನೇ ಮರೆಯುತ್ತಿರುವುದು ಅತೀವ ನೋವಿನ ಸಂಗತಿಯಾಗಿದೆ. ಇತ್ತೀಚೆಗೆ ಕೇಳಿದ ಒಂದು ಘಟನೆ, ಮಕ್ಕಳಿಬ್ಬರು ವಿದೇಶದಲ್ಲಿ ನೆಲೆಸಿದ್ದಾರೆ. ಇಬ್ಬರೂ ಗಂಡುಮಕ್ಕಳು. ಒಳ್ಳೆಯ ಕೆಲಸ, ಕೈತುಂಬಾ ಸಂಪಾದನೆ. ಅಚ್ಚುಕಟ್ಟಾಗಿ ಬದುಕುತ್ತಿದ್ದಾರೆ. ಊರಿನಲ್ಲಿ ವಯಸ್ಸಾದ ತಂದೆ–ತಾಯಿ. ಮಕ್ಕಳು ಆರಂಭದಲ್ಲಿ ವರ್ಷಕ್ಕೆ ಒಮ್ಮೆ ಬರುತ್ತಿದ್ದವರು, ಕ್ರಮೇಣ ಬರುವುದು ಕಡಿಮೆಯಾಯಿತು. ನಂತರ ಐದಾರು ವರ್ಷಕ್ಕೆ ಒಮ್ಮೆ. ಅಷ್ಟರಲ್ಲಿ ತಂದೆ–ತಾಯಿಗೆ ವಯಸ್ಸು ಜಾಸ್ತಿಯಾಯಿತು. ಒಮ್ಮೆ ತಾಯಿ ತೀರಿಕೊಂಡರು. ತಂದೆ ಮಕ್ಕಳಿಗೆ ವಿಷಯ ತಿಳಿಸಿದರು. ಮಕ್ಕಳು ಊರಿಗೆ ಹೋಗುವ ಬಗ್ಗೆ ಮಾತನಾಡಿಕೊಂಡರು. ದೊಡ್ಡವ ತನಗೆ ರಜೆ ಇಲ್ಲ, ಈಗ ಬರಲಾಗುವುದಿಲ್ಲ. ತಂದೆ ಸತ್ತಾಗ ಬರಲು ಪ್ರಯತ್ನಿಸುತ್ತೇನೆ ಎಂದನಂತೆ! ಈ ವಿಷಯ ತಿಳಿದ ತಂದೆ ಮನನೊಂದು ನಾನು ಸತ್ತಾಗಲೂ ಆತ ಬರುವುದು ಬೇಡ. ನನಗಾಗಿ ಕಷ್ಟಪಡುವುದು ಬೇಡ ಎಂದರಂತೆ. ಈ ಭಾಗ್ಯಕ್ಕೆ ಮಕ್ಕಳೇಕೆ?

ಇತ್ತೀಚೆಗೆ ಓದಿದ ಪ್ರಸಂಗ; ವಿದೇಶಿ ಪತ್ರಿಕೆಯಲ್ಲಿ ಒಂದು ಜಾಹೀರಾತು ಪ್ರಕಟವಾಗಿತ್ತು. ಅದರ ಶೀರ್ಷಿಕೆ 'ವೃದ್ಧ ದಂಪತಿಗಳು ಬೇಕಾಗಿದ್ದಾರೆ'. ಅವರು ನಮ್ಮೊಂದಿಗೇ ಇರಬೇಕು ಎಂದಿತ್ತು. ಇದೊಂದು ವಿಚಿತ್ರವಾದ ಜಾಹೀರಾತು. ಸಾಮಾನ್ಯವಾಗಿ ನಾವು–ನೀವು ನೋಡಿರುವ ಜಾಹೀರಾತು ಎಂದರೆ ಕೆಲಸಕ್ಕೆ ಬೇಕಾಗಿದ್ದಾರೆ. ಅದರಲ್ಲೂ ಯುವಕ/ಯುವತಿಯರು ಬೇಕಾಗಿದ್ದಾರೆ ಎಂದು ಸಾಮಾನ್ಯವಾಗಿರುತ್ತವೆ. ಅಂತಹುದರಲ್ಲಿ ವೃದ್ಧ ದಂಪತಿಗಳು ಬೇಕು ಎಂಬ ಜಾಹೀರಾತು ವಿಶೇಷವಾದುದು. ಇದನ್ನು ಗಮನಿಸಿದ ಒಬ್ಬ ವೃದ್ಧ ಕರೆ ಮಾಡಿ ಕೇಳಿದರು. ನಿಮ್ಮ ಜಾಹೀರಾತಿನಂತೆ ನಮಗೆ ಕೆಲಸ ಬೇಕು. ನಾವು ವಯಸ್ಸಾದವರು. ನಾವೇನು ಕೆಲಸ ಮಾಡಬೇಕು ಎಂದು ಪ್ರಶ್ನಿಸಿದರು. ಅದಕ್ಕೆ ಜಾಹಿರಾತು ನೀಡಿದವರ ಉತ್ತರ ವಿಸ್ಮಯ ಮೂಡಿಸುವಂತಹುದು. ನೀವು ಏನೂ ಕೆಲಸ ಮಾಡಬೇಕಿಲ್ಲ. ನಾನು, ನನ್ನ ಹೆಂಡತಿ ಇಬ್ಬರೂ ವೈದ್ಯರು. ಒಂದೊಂದು ಕಡೆ ಕೆಲಸಕ್ಕೆ ಹೋಗುತ್ತೇವೆ. ಇಡೀ ದಿನ ಕಷ್ಟಪಟ್ಟು ಕೆಲಸ ಮಾಡುತ್ತೇವೆ. ನಮ್ಮ ತಾಯಿ ಇತ್ತೀಚೆಗೆ ನಿಧನ ಹೊಂದಿದರು. ತಾಯಿ–ತಂದೆ ಅಗಲಿಕೆ ಕಾಡುತ್ತಿದೆ. ಹಾಗಾಗಿ ನಮಗೆ ತಾಯಿ–ತಂದೆಯಾಗಿ ಇರುವುದೇ ನಿಮ್ಮ ಕೆಲಸ. ನಮ್ಮ ಮನೆಯಲ್ಲಿ ಎಲ್ಲದಕ್ಕೂ ಕೆಲಸದವರು ಇದ್ದಾರೆ. ಆದರೆ ನಮ್ಮನ್ನು ಕೇಳುವವರು ಯಾರೂ ಇಲ್ಲ. ನಾವು ತಡವಾಗಿ ಮನೆಗೆ ಬಂದಾಗ ಏಕೆ ತಡವಾಗಿ ಬಂದಿರಿ. ಊಟ ಮಾಡಿದ್ದಿರೋ ಇಲ್ಲವೋ ಎಂದೆಲ್ಲಾ ಕೇಳುವವರು ಇಲ್ಲದೆ ನಮಗೆ ಅನಾಥ ಭಾವನೆ ಕಾಡುತ್ತಿದೆ. ನಾವು ಕೆಲಸ ಮುಗಿಸಿ ಬಂದಾಗ ನಮ್ಮನ್ನು ಪ್ರೀತಿಯಿಂದ ಮಾತನಾಡಿಸುವವರು ಬೇಕು. ಅದಕ್ಕಾಗಿ ಈ ಜಾಹಿರಾತು ನೀಡಿದ್ದೇವೆ ಎಂದರಂತೆ. ಇದನ್ನು ಕೇಳಿದ ವೃದ್ಧ ದಂಪತಿಯ ಕಣ್ಣಲ್ಲಿ ನೀರು ಬಂತಂತೆ. ಇದು ವಾಸ್ತವವೇ ಅಲ್ಲವೇ? ನಮ್ಮಲ್ಲಿ ಎಷ್ಟೇ ದುಡ್ಡಿರಲಿ, ನಾವು ಎಷ್ಟೇ ದೊಡ್ಡ ಹುದ್ದೆಯಲ್ಲಿರಲಿ, ನಮ್ಮನ್ನು ಆತ್ಮೀಯವಾಗಿ ವಿಚಾರಿಸುವವರು ಇಲ್ಲದಾಗ ನಮ್ಮ ಹಣಕ್ಕೆ ಯಾವ ಬೆಲೆಯೂ ಇರದು.

ಇದೊಂದು ರೀತಿಯ ವಿಪರ್ಯಾಸ. ಯಾರ ಮನೆಯಲ್ಲಿ ತಂದೆ–ತಾಯಿ ಇರುತ್ತಾರೋ, ಅವರ ಬಗ್ಗೆ ಮಕ್ಕಳಿಗೆ ಕಾಳಜಿಯೇ ಇರುವುದಿಲ್ಲ. ಯಾರ ಮನೆಯಲ್ಲಿ ಇವರಿಲ್ಲವೋ ಆಗ ಅಪ್ಪ ಇರ ಬೇಕಿತ್ತು, ಅಮ್ಮ ಇರಬೇಕಿತ್ತು ಎಂಬ ಹಂಬಲ ವ್ಯಕ್ತವಾಗುತ್ತದೆ. ತಂದೆ–ತಾಯಿಯ ಪ್ರೀತಿ ನಿಷ್ಕಲ್ಮಷವಾದದ್ದು. ಮಕ್ಕಳು ತಮ್ಮನ್ನು ಕಡೆಗಣಿಸಿದರೂ ಅವರು ಮಕ್ಕಳ ಶ್ರೇಯಸ್ಸನ್ನೇ ಬಯಸುತ್ತಾರೆ. ಅವರನ್ನು ಕಡೆಗಣಿಸಿ ವೃದ್ಧಾಶ್ರಮಕ್ಕೆ ಕಳುಹಿಸುವವರು ಮುಂದೆ ತಮ್ಮ ಮಕ್ಕಳೂ ತಮ್ಮನ್ನು ವೃದ್ಧಾಶ್ರಮಕ್ಕೆ ಸೇರಿಸಿದಾಗ ನೊಂದು ಕೊಂಡರೆ ಪ್ರಯೋಜನವೇನು? ಇಂದಿನ ಮಕ್ಕಳ ಬುದ್ದಿವಂತಿಕೆಯ ಮುಂದೆ ತಂದೆ–ತಾಯಿ ದಡ್ಡರಾಗಿ ಕಾಣಬಹುದು. ಅವರು ವಯಸ್ಸಾಗಿ ಕೃಶದೇಹ ಹೊಂದಿದವರಾಗಿರಬಹುದು. ದೃಷ್ಟಿ ಮಂಜಾಗಿರಬಹುದು. ಆದರೆ ಅದು ಅವರಾಗಿ ಮಾಡಿಕೊಂಡಿರುವಂತಹುದಲ್ಲ. ಅದು ವಯೋಸಹಜವಾದುದು, ನಾವು ಮಕ್ಕಳಾಗಿದ್ದಾಗ, ಈಗಿನ ವೃದ್ಧರಂತೆಯೇ ನಡೆದುಕೊಂಡಿರುತ್ತೇವೆ. ತಿನ್ನುವಾಗ ಚೆಲ್ಲಿಕೊಳ್ಳುವುದು, ಕುಳಿತಲ್ಲೇ ಮಲ–ಮೂತ್ರ ವಿಸರ್ಜನೆ ಮಾಡಿಕೊಂಡಿರಬಹುದು. ಆದರೆ ತಂದೆ–ತಾಯಿ ಆ ಬಗ್ಗೆ ಎಂದಿಗೂ ಬೇಸರ ಮಾಡಿಕೊಂಡಿರಲ್ಲ. ಅದನ್ನು ನೆನಪಿಸಿಕೊಂಡು ಅವರನ್ನು ಪೋಷಿಸುವುದು ನಮ್ಮ ಕರ್ತವ್ಯ ಎಂಬ ಭಾವನೆ ಬರಬೇಕು.

ಅವರು ಸತ್ತ ನಂತರ ನಾನು ಹಾಗೆ ನೋಡಿಕೊಳ್ಳಬೇಕಾಗಿತ್ತು, ಹೀಗೆ ನೋಡಿಕೊಳ್ಳಬೇಕಾಗಿತ್ತು ಎಂದೆಲ್ಲಾ ಅಂದುಕೊಳ್ಳುವುದು ವ್ಯರ್ಥ. ಅವರು ಬದುಕಿರುವಾಗಲೇ ಅವರು ಸಂತಸದಿಂದಿರುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಮೇಲ್ಕಂಡ ಜಾಹೀರಾತಿನಲ್ಲಿ ತಿಳಿಸಿದಂತೆ ನಮ್ಮನ್ನು ಪ್ರೀತಿಯಿಂದ ನೋಡಿಕೊಳ್ಳುವವರು ಯಾರೂ ಇಲ್ಲ ಎಂದು ಮರುಗುವಂತಾಗುತ್ತದೆ. ಈ ಮಾತು ಎಲ್ಲದಕ್ಕೂ ಅನ್ವಯವಾಗುತ್ತದೆ. ಅದರಲ್ಲಿ ಈ ಸಮಾಜವೂ ಒಂದು, ನಮ್ಮ ಸಾಮಾಜಿಕ ಜವಾಬ್ದಾರಿ ಸಮಾಜದೊಡನೆ ಬೆರೆಯಬೇಕು. ಸಮಾಜಕ್ಕಾಗಿ ಏನಾದರೂ ಮಾಡಬೇಕು. ನಾವು ಬದುಕಿರುವಾಗಲೇ ಋಣಮುಕ್ತರಾಗಲು ಪ್ರಯತ್ನಿಸಬೇಕು.

ಹೆಚ್ಚಿನ ವೈಜ್ಞಾನಿಕ ಅನ್ವೇಷಣೆ ನಡೆದರೆ ರಾಷ್ಟ್ರಕ್ಕೆ ಮತ್ತಷ್ಟು ಅನುಕೂಲ

ಇಸ್ರೋ ಹಿರಿಯ ವಿಜ್ಞಾನಿ ಡಾ. ವಿ.ರಾಧಾಕೃಷ್ಣ ಅಭಿಮತ

ಮೈಸೂರು, ಫೆ.28(ಆರ್‌ಕೆ)–ವೈಜ್ಞಾನಿಕ ಅನ್ವೇಷಣೆಗಳು ಹೆಚ್ಚಿನ ಪ್ರಮಾಣದಲ್ಲಿ ನಡೆದರೆ ದೇಶದ ಅಭಿವೃದ್ಧಿಗೆ ಮತ್ತಷ್ಟು ಅನುಕೂಲವಾಗಲಿದೆ ಎಂದು ಇಸ್ರೋ ಹಿರಿಯ ವಿಜ್ಞಾನಿ ಡಾ. ವಿ.ರಾಧಾಕೃಷ್ಣ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಇಂದು ಏರ್ಪಡಿಸಲಾಗಿದ್ದ 'ಬಾಹ್ಯಾಕಾಶ ವಿಜ್ಞಾನ ಕಾರ್ಯಾಚರಣೆಗಳು: ಸವಾಲು ಮತ್ತು ಅವಕಾಶಗಳು' ವಿಷಯ ಕುರಿತ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ವಿಜ್ಞಾನ ಕ್ಷೇತ್ರದಲ್ಲಿ ಇಸ್ರೋ ಅಪಾರ ಸಾಧನೆ ಮಾಡಿದೆ. ಇಡೀ ವಿಶ್ವವೇ ಭಾರತದತ್ತ ತಿರುಗಿ ನೋಡುವಂತಹ ಸಂಶೋಧನಾ ಕಾರ್ಯಗಳು ನಮ್ಮ ದೇಶದಲ್ಲಿ ನಡೆಯುತ್ತಿವೆ. ಅದಕ್ಕೆ ಚಂದ್ರಯಾನ, ಆದಿತ್ಯ ಮಿಷನ್, ಮಂಗಳಯಾನ ಇವು ನಮ್ಮ ದೇಶದ ಹೆಮ್ಮೆಯ ಪ್ರತೀಕಗಳು ಎಂದರು.



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ 'ಬಾಹ್ಯಾಕಾಶ ವಿಜ್ಞಾನ ಕಾರ್ಯಾಚರಣೆಗಳು: ಸವಾಲು ಮತ್ತು ಅವಕಾಶಗಳು' ವಿಷಯ ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಇಸ್ರೋ ಹಿರಿಯ ವಿಜ್ಞಾನಿ ಡಾ. ವಿ.ರಾಧಾಕೃಷ್ಣ ಉದ್ಘಾಟಿಸಿದರು. ಈ ವೇಳೆ ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಹಾಗೂ ಕುಲಸಚಿವೆ ಎಂ.ಕೆ.ಸವಿತಾ ಉಪಸ್ಥಿತರಿದ್ದರು.

ಚಂದ್ರಯಾನ–3 ಭಾರತ ವಿಜ್ಞಾನ ಕ್ಷೇತ್ರದಲ್ಲಿ ಮಾಡಿದ ಸಾಧನೆಗೆ ಕೈಗನ್ನಡಿಯಾಗಿದೆ. 2040ಕ್ಕೆ ಚಂದ್ರ ಗ್ರಹಕ್ಕೆ ಇಸ್ರೋ ಮನುಷ್ಯನನ್ನು ಕಳುಹಿಸಿಕೊಡುತ್ತಿದೆ. ಇಂದು ಉಪಗ್ರಹಗಳ ಮೂಲಕ ಹವಾಮಾನದ ವೈಪರೀತ್ಯವನ್ನು ತಿಳಿದುಕೊಳ್ಳುವುದಲ್ಲದೆ, ರೈತರು, ಅರಣ್ಯ ಇಲಾಖೆಯು ಕಾಡಿನ ಸಂರಕ್ಷಣೆಗೆ ಸ್ಯಾಟಲೈಟ್ ಬಳಸಲು ಸಹಕಾರಿಯಾಗುತ್ತದೆ. ಇಂದು ಭಾರತವು ಕೇವಲ ವಿಜ್ಞಾನ ಕ್ಷೇತ್ರದಲ್ಲಷ್ಟೇ ಅಲ್ಲದೆ ತಂತ್ರಜ್ಞಾನದಲ್ಲೂ ಅಪಾರ ಪ್ರಗತಿ ಸಾಧಿಸಿದೆ ಎಂದ ಅವರು, ಇಂತಹ ವೈಜ್ಞಾನಿಕ ಅನ್ವೇಷಣೆಗಳು ಹೆಚ್ಚಿನ ಪ್ರಮಾಣದಲ್ಲಿ ನಡೆದರೆ ದೇಶದ ಅಭಿವೃದ್ಧಿಗೆ ಪೂರಕವಾಗುತ್ತದೆ ಎಂದು ನುಡಿದರು.

ವಿಜ್ಞಾನ ವಿಷಯಗಳಲ್ಲಿ ಸಂಶೋಧನೆ ಮಾಡುವಾಗ ಸಾಕಷ್ಟು ಸವಾಲುಗಳು ಎದುರಾಗುತ್ತವೆ. ಅವುಗಳನ್ನು ಮೆಟ್ಟಿನಿಂತರಷ್ಟೇ ಸಾಧನೆ ಮಾಡಲು ಸಾಧ್ಯ. ಈ ಹಿನ್ನೆಲೆಯಲ್ಲಿ ರಾಷ್ಟ್ರದ ಅಭಿವೃದ್ಧಿಗೆ ಅನುಕೂಲವಾಗುವ ಸಂಶೋಧನೆಗಳನ್ನು ಯುವ ವಿಜ್ಞಾನಿಗಳು ಕೈಗೊಳ್ಳಬೇಕು. ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಅರ್ಥ ಮಾಡಿಕೊಳ್ಳಬೇಕು. ವಿಜ್ಞಾನ ಎಂದೂ ಯಾರಿಗೂ ಕಷ್ಟಕರವಾದುದ್ದಲ್ಲ. ಕಷ್ಟಕರವಾದರೆ ನಿರಂತರ ಅಧ್ಯಯನದಿಂದ ಸುಲಭ ಸಾಧ್ಯ ಎಂದ ಡಾ. ರಾಧಾಕೃಷ್ಣ ಅವರು, ಗೆಲಿಲಿಯೋರಿಂದ ಹಿಡಿದು ವಿಕ್ರಂ ಸಾರಾಬಾಯಿವರೆಗೂ ಸಾಕಷ್ಟು ವಿಜ್ಞಾನಿಗಳು ಬಾಹ್ಯಾಕಾಶದಲ್ಲಿ ಸಾಧನೆ ಮಾಡಿದ್ದಾರೆ. ಅವರು ಇಂದಿನ ಯುವ ಪೀಳಿಗೆಗೆ ಮಾದರಿ ಎಂದರು.

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಹಾಗೂ ಕುಲಸಚಿವೆ ಎಂ.ಕೆ. ಸವಿತಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com


ಸಿಲಿಕಾನ್ ಸಿಟಿಯನ್ನು ಗುಂಡಿಮುಕ್ತ ಮಾಡಿ ಸ್ವಾಮಿ...!

● ಮುಖ್ಯಮಂತ್ರಿ ಸಿದ್ದರಾಮಯ್ಯರಲ್ಲಿ ಬಿಜೆಪಿ ನಿಯೋಗ ಮನವಿ ● ಬೆಂಗಳೂರು ಉಸ್ತುವಾರಿ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಸಿಎಂಗೆ ಪರೋಕ್ಷ ದೂರು ● ಬಜೆಟ್‌ನಲ್ಲಿ ರಾಜಧಾನಿಗೆ ಅಧಿಕ ಅನುದಾನ ಮೀಸಲಿಡಲು ಒತ್ತಾಯ

ಬೆಂಗಳೂರು, ಫೆ. 28(ಕೆಎಂಶಿ)– ಅಭಿವೃದ್ಧಿಗೆ ಹಣ ನೀಡದೆ ಸಿಲಿಕಾನ್ ಸಿಟಿ ಗುಂಡಿಗಳ ಆಗರವಾಗಿದೆ ಎಂದು ಬೆಂಗಳೂರು ಉಸ್ತುವಾರಿಯನ್ನೂ ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜ್ಯ ಬಿಜೆಪಿ ದೂರು ನೀಡಿದೆ.

ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಸೇರಿದಂತೆ ಬೆಂಗಳೂರು ನಗರ ಪ್ರತಿನಿಧಿಸುವ ಬಿಜೆಪಿ ಸಂಸದರು ಮತ್ತು ಶಾಸಕರ ನಿಯೋಗ ಇಂದು ಮುಖ್ಯಮಂತ್ರಿ ಅವರನ್ನು ಕಾವೇರಿ ನಿವಾಸದಲ್ಲಿ ಭೇಟಿ ಮಾಡಿ, ರಾಜಧಾನಿ ಪರಿಸ್ಥಿತಿಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿತು. ಸರ್ಕಾರದಲ್ಲಿ ಪ್ರಭಾವಿ ಹಾಗೂ ರಾಜಧಾನಿ ಉಸ್ತುವಾರಿ ಹೊತ್ತಿರುವ ಶಿವಕುಮಾರ್ ಅವರಿಗೆ ಅಭಿವೃದ್ಧಿ ಕುರಿತು ಮನವಿ ಮಾಡದೆ, ಮುಂದಿನ ಮುಂಗಡಪತ್ರದಲ್ಲಿ ಹೆಚ್ಚು ಹಣ ಒದಗಿಸಿ ಎಂಬ ನೆಪದಲ್ಲಿ ಮುಖ್ಯಮಂತ್ರಿ ಅವರಿಗೆ ಪರಿಸ್ಥಿತಿ ವಿವರಿಸಿದ್ದಾರೆ.

ಇತ್ತೀಚೆಗಷ್ಟೇ ಐಟಿ ದಿಗ್ಗಜ ಮೋಹನ್ ದಾಸ್ ಪೈ ರಾಜಧಾನಿಯ ಕೆಟ್ಟ ಪರಿಸ್ಥಿತಿಯನ್ನು ಜನರ ಮುಂದಿಟ್ಟು, ಅಧಿಕಾರಿಗಳು ಜನರ ಮಾತನ್ನೇ ಕೇಳುತ್ತಿಲ್ಲ ಎಂದು ಕಿಡಿ ಕಾರಿದ್ದರು. ಇದರ ಬೆನ್ನಲ್ಲೇ ಬಿಜೆಪಿ ನಿಯೋಗ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಮುಂದಿನ ಬಜೆಟ್‌ನಲ್ಲಾದರೂ ಹಣ ನೀಡಿ ಬೆಂಗಳೂರನ್ನು ಉಳಿಸಿ ಎಂದು ಕೋರಿದ್ದಾರೆ.



ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಸೇರಿದಂತೆ ಬೆಂಗಳೂರು ನಗರ ಪ್ರತಿನಿಧಿಸುವ ಬಿಜೆಪಿ ಸಂಸದರು ಮತ್ತು ಶಾಸಕರ ನಿಯೋಗ ಮುಖ್ಯಮಂತ್ರಿ ಅವರನ್ನು ಕಾವೇರಿ ನಿವಾಸದಲ್ಲಿ ಭೇಟಿ ಮಾಡಿದರು.

ಬೆಂಗಳೂರು ಮಹಾನಗರದ ಅಭಿವೃದ್ಧಿ ದೃಷ್ಟಿಯಿಂದ ಶಾಸಕರಿಗೆ ಹೆಚ್ಚು ಅನುದಾನ ನೀಡಬೇಕು, 2025–26ನೇ ಸಾಲಿನ ಬಜೆಟ್‌ನಲ್ಲಿ 6 ರಿಂದ 8 ಸಾವಿರ ಕೋಟಿ ರೂ. ಮೀಸಲಿಡಬೇಕು ಎಂದು ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಯಿತು.

ಒತ್ತು ನೀಡಲು ಮನವಿ: ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ, ಸಿಲಿಕಾನ್ ಸಿಟಿ ಬೆಂಗಳೂರಿನ ಮೂಲಸೌಕರ್ಯ ವೃದ್ಧಿಗೆ ಸಂಬಂಧಿಸಿದ ಯೋಜನೆಗಳಿಗೆ ಹಣ ಕೊಡಬೇಕಿದೆ, ಫ್ಲೈಓವರ್, ವಿವಿಧ ಯೋಜನೆಗಳು ನಿಧಾನಗತಿಯಲ್ಲಿ ಸಾಗುತ್ತಿವೆ. ಅವುಗಳಿಗೆ ಹೆಚ್ಚು ಅನುದಾನ ನೀಡಿ ಹೆಚ್ಚು ಒತ್ತು ಕೊಡಬೇಕೆಂದು ಕೋರಿರುವುದಾಗಿ ವಿವರಿಸಿದರು.

ಮೆಟ್ರೋ ದರ ಇಳಿಕೆಗೆ ಒತ್ತಾಯ: ಸಂಸದರಾದ ಪಿ.ಸಿ.ಮೋಹನ್, ತೇಜಸ್ವಿ ಸೂರ್ಯ, ಮೆಟ್ರೊ ಪ್ರಯಾಣ ದರದಲ್ಲಿ ಕಡಿತ ಮಾಡುವಂತೆ ಸಲಹೆ ನೀಡಿದರು.

ಅಭಿವೃದ್ಧಿಗೆ ಅನುದಾನವಲ್ಲದೆ, ಮೊದಲ ಬಾರಿ ಗೆದ್ದ ಶಾಸಕರಿಗೂ ಅನುದಾನ ಕೊಡುವಂತೆ ಮನವಿ ಮಾಡಲಾಯಿತು.

ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ ಪ್ರತಿಸಾರಿಯೂ ಬಿಬಿಎಂಪಿಗೆ 6ರಿಂದ 8 ಸಾವಿರ ಕೋಟಿ ರೂ. ಅನುದಾನ ಬಜೆಟ್‌ನಲ್ಲಿ ಮೀಸಲಿಡಲಾಗುತ್ತಿತ್ತು, ಕಳೆದೆರಡು ವರ್ಷಗಳಿಂದ ಬೆಂಗಳೂರು ಅಭಿವೃದ್ಧಿಗೆ ಅನುದಾನ ನೀಡಿಲ್ಲ ಎಂಬುದನ್ನು ಗಮನಕ್ಕೆ ತರಲಾಗಿದೆ.

ನಗರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅವೈಜ್ಞಾನಿಕ ಟನೆಲ್ ಮಾರ್ಗ ವಿಷಯವನ್ನೂ ವಿಧಾನಮಂಡಲದ ಅಧಿವೇಶನದಲ್ಲಿ ಪ್ರಸ್ತಾಪಿಸಲಿದ್ದೇವೆ. ಈ ಹಿಂದೆ ಬೆಂಗಳೂರು ನಗರಕ್ಕೆ ಇಂಥ ದುಸ್ಥಿತಿ ಬಂದಿರಲಿಲ್ಲ, ಯಡಿಯೂರಪ್ಪ ಅಧಿಕಾರದಲ್ಲಿದ್ದಾಗ ಬಿಜೆಪಿ ಅಲ್ಲದೆ ಕಾಂಗ್ರೆಸ್ ಶಾಸಕರಿಗೂ ಹೆಚ್ಚಿನ ಅನುದಾನ ನೀಡಿದ್ದರು ಎಂದರು.

ಆರ್.ಅಶೋಕ್ ಮಾತನಾಡಿ, ನಗರದ ರಸ್ತೆಗಳ ಅವ್ಯವಸ್ಥೆ, ಪಾರ್ಕ್ ವಾಚ್ ಮನ್‌ಗಳಿಗೂ ಹಣ ನೀಡಲೂ ಸಾಧ್ಯವಾಗದ ಪರಿಸ್ಥಿತಿ ನೋಡಿ, ಎರಡು ವರ್ಷ ಕಾದು ವಿಧಿಯಿಲ್ಲದೆ ಮುಖ್ಯಮಂತ್ರಿ ಭೇಟಿ ಮಾಡಿದ್ದೇವೆ.

ಒಂದೆಡೆ ಬೆಲೆ ಏರಿಕೆ, ಇನ್ನೊಂದೆಡೆ ಅಭಿವೃದ್ಧಿ ಕುಂಠಿತವಾಗಿದೆ, ಬಿಜೆಪಿ ಆಡಳಿತದಲ್ಲಿ ಪ್ರತೀ ವರ್ಷ ಅನುದಾನ ಕೊಡಲಾಗುತ್ತಿತ್ತು, ಪ್ರಸ್ತುತ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 120 ರಿಂದ 150 ಕೋಟಿ ರೂ. ನೀಡಲು ಮನವಿ ಮಾಡಿರುವುದಾಗಿ ತಿಳಿಸಿದರು.

ಸಿಎಂ ಸಿದ್ದರಾಮಯ್ಯ ಸಕಾರಾತ್ಮಕ ಸ್ಪಂದನೆ

ಇತಿ–ಮಿತಿಯೊಳಗೆ ಎಷ್ಟು ಸಾಧ್ಯವೋ ಅಷ್ಟು ಅನುದಾನ ಒದಗಿಸುವುದಾಗಿ ಭರವಸೆ ನೀಡಿದ್ದಾರೆ, ಗ್ರೇಟರ್ ಬೆಂಗಳೂರು ನೆಪದಲ್ಲಿ ಬಿಬಿಎಂಪಿ ಚುನಾವಣೆ ಮುಂದೂಡದೆ, ಶೀಘ್ರ ಚುನಾವಣೆ ನಡೆಸಬೇಕೆಂಬ ಒತ್ತಾಯಕ್ಕೂ ಮುಖ್ಯಮಂತ್ರಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಸಿಎಂ ಸಿದ್ದರಾಮಯ್ಯ ಅಧಿಕೃತ ನಿವಾಸ ಕಾವೇರಿಗೆ 2.6 ಕೋಟಿ ವೆಚ್ಚದಲ್ಲಿ ಹೈಟೆಕ್ ಸ್ಪರ್ಶ

ಡಿಸಿಎಂ ಡಿ.ಕೆ.ಶಿವಕುಮಾರ್ ನಿವಾಸವೂ ನವೀಕರಣ

ಬೆಂಗಳೂರು: ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಮುಖ್ಯಮಂತ್ರಿಗಳ ಕೊಠಡಿಯನ್ನು ಅಂದಾಜು 2.50 ಕೋಟಿ ರೂ. ಮೊತ್ತದಲ್ಲಿ ನವೀಕರಿಸಿದ ಬೆನ್ನಲ್ಲೇ ಇದೀಗ ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿ ವಸತಿ ಗೃಹವನ್ನು 2.65 ಕೋಟಿ ರೂ ವೆಚ್ಚದಲ್ಲಿ ನವೀಕರಿಸಲು ಸರ್ಕಾರ ಮುಂದಾಗಿದೆ.

ಅದೇ ರೀತಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಕುಮಾರಕೃಪ ರಸ್ತೆಯಲ್ಲಿ ಹಂಚಿಕೆ ಮಾಡಿರುವ ವಸತಿ ಗೃಹಕ್ಕೆ ಅಗತ್ಯ ಪೀಠೋಪಕರಣ, ಆಪ್ತ ಕಾರ್ಯದರ್ಶಿ ಕೊಠಡಿ ನವೀಕರಣಕ್ಕೆ 45.10 ಲಕ್ಷ ರೂ. ವೆಚ್ಚ ಮಾಡಲು ಅನುಮತಿ ನೀಡಿದೆ.

ಕಾವೇರಿ ನಿವಾಸ ನವೀಕರಣದ ವೇಳೆ ಸಹಾಯಕರಿಗೆ ಶೌಚಾಲಯ ಸಹಿತ ರೂಂ ನಿರ್ಮಾಣ, ಸ್ಟೋರ್ ರೂಂಗಳು, ಅಡುಗೆ ಸಾಮಾನುಗಳು, ಪಾತ್ರೆಗಳು ಮತ್ತು ಪಾತ್ರೆಗಳ ಪೂರೈಕೆ ಸೇವೆಗಳು ಕೂಡ ಸೇರಿವೆ.

ಇನ್ನು ನಿವಾಸದೊಳಗಿನ ಲೈಟಿಂಗ್ ನವೀಕರಣ, ವೈರಿಂಗ್ ಕೆಲಸಗಳು, ಲೈಟಿಂಗ್ ಪಾಯಿಂಟ್‌ಗಳು, ನೀರಿನ ಪಾಯಿಂಟ್‌ಗಳನ್ನು ಸರಿಪಡಿಸುವುದು, ವಾಟರ್ ಹೀಟರ್‌ಗಳು, ಹವಾನಿಯಂತ್ರಣ ಮತ್ತು ಇತರ ಸಂಬಂಧಿತ ಕಾರ್ಯಗಳನ್ನು ಸಹ ಕೈಗೊಳ್ಳಲಾಗುತ್ತದೆ. 1.7 ಕೋಟಿ ರೂ. ಅಂದಾಜು ವೆಚ್ಚವಾಗಿದ್ದು, 89 ಲಕ್ಷ ರೂ. ವಿದ್ಯುದ್ದೀಕರಣ ಮತ್ತು ಹವಾನಿಯಂತ್ರಣಕ್ಕೆ ಖರ್ಚು ಮಾಡಲಾಗುತ್ತಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕೆಟಿಪಿಪಿ ಕಾಯ್ದೆಯಡಿ ಸರ್ಕಾರ 4ಜಿ ವಿನಾಯಿತಿ ನೀಡಿದೆ. ಇದು ಪಿಡಬ್ಲ್ಯುಡಿಗೆ ಟೆಂಡರ್ ಪ್ರಕ್ರಿಯೆ ಇಲ್ಲದೆ ನೇರವಾಗಿ ಕೆಲಸ ಕಾರ್ಯ ಮಾಡಬಹುದಾಗಿದೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಅಧಿಕೃತ ನಿವಾಸ (ಕೆಕೆ ಸೌತ್–1)ದಲ್ಲಿ ಕೂಡಾ ವಿದ್ಯುತ್ ಕಾಮಗಾರಿ ಗಳು ಮತ್ತು ಪೀಠೋಪಕರಣಗಳ ಹಾಕಲು ಪಿಡಬ್ಲ್ಯುಡಿಗೆ ಇದೇ ರೀತಿಯ 4ಜಿ ವಿನಾಯಿತಿ ನೀಡಲಾಗಿದೆ ಇಲಾಖೆಯು ಸಿಸಿಟಿವಿ ಕ್ಯಾಮೆರಾಗಳು, ಹವಾನಿಯಂತ್ರಣಗಳು ಮತ್ತು ಇತರ ವಿದ್ಯುತ್ ವ್ಯವಸ್ಥೆಗಳನ್ನು 16 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಅಳವಡಿಸಲಿದೆ. ಪೀಠೋಪಕರಣಗಳು ಮತ್ತು ಉಪ ಮುಖ್ಯಮಂತ್ರಿಯವರ ವೈಯಕ್ತಿಕ ಕಾರ್ಯದರ್ಶಿಯ ಕೊಠಡಿಯ ನವೀಕರಣಕ್ಕೆ ಹೆಚ್ಚುವರಿಯಾಗಿ 45 ಲಕ್ಷ ರೂ. ಖರ್ಚು ಮಾಡಲಾಗುವುದು.

ಗ್ಯಾರಂಟಿ ಅನುಷ್ಠಾನ ಸಮಿತಿಗಳ ಮುಖ್ಯಸ್ಥರಿಗೆ ಸಂಪುಟ ದರ್ಜೆ ಸ್ಥಾನಮಾನ: ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಬೆಂಗಳೂರು, ಫೆ.28– ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ರಚನೆ ಮಾಡಲಾಗಿರುವ ಸಮಿತಿ ಮುಖ್ಯಸ್ಥರಿಗೆ ಸಂಪುಟ ದರ್ಜೆ ಸ್ಥಾನಮಾನ ನೀಡಿರುವುದನ್ನು ಪ್ರಶ್ನಿಸಿ ಸಲ್ಲಿಸುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಕಾಂಗ್ರೆಸ್‌ನ ಹೆಚ್.ಎಂ.ರೇವಣ್ಣ, ಎಸ್. ಆರ್.ಪಾಟೀಲ್ ಬ್ಯಾಡಗಿ, ಡಾ. ಪುಷ್ಪ ಅಮರನಾಥ್, ಮೆಹರೋಝ್ ಖಾನ್, ಸೂರಜ್ ಹೆಗ್ಡೆ ಅವರ ನೇಮಕ ಪ್ರಶ್ನಿಸಿ ಪಿ.ರಾಜೀವ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದಿಸಿದ ಎಂ.ಅರುಣ್ ಶ್ಯಾಮ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗೆ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಕ ಮಾಡಲಾಗಿದೆ. ಇದು ಸಂವಿಧಾನದ 164 (1ಎ) ವಿಧಿಗೆ ವಿರುದ್ಧವಾಗಿದೆ ಎಂದು ಆಕ್ಷೇಪಿಸಿದರು.

ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಿಗೆ ಸಂಪುಟ ದರ್ಜೆ ಸ್ಥಾನಮಾನ ನೀಡಲಾಗಿದ್ದು, ಉಪಾಧ್ಯಕ್ಷರಿಗೆ ರಾಜ್ಯ ಸಚಿವರ ಸ್ಥಾನಮಾನ ನೀಡಲಾಗಿದೆ. ಅನುಷ್ಠಾನ ಸಮಿತಿಗೆ ನೇಮಕವಾಗಿರುವವರು (ಕಾಂಗ್ರೆಸ್) ಪಕ್ಷವೊಂದರ ಪ್ರತಿನಿಧಿಗಳಾಗಿದ್ದಾರೆ. ಸಂಪುಟ ದರ್ಜೆ ಮತ್ತು ರಾಜ್ಯ ಸಚಿವರಿಗೆ ದೊರೆಯುವ ವೇತನ, ಸೌಲಭ್ಯ ಕಲ್ಪಿಸಲಾಗಿದೆ. ಈ ನೇಮಕಾತಿ ಮಾತ್ರ ಆಕ್ಷೇಪಾರ್ಹವಲ್ಲ. ನೇಮಕಗೊಂಡಿರುವವರು ಪ್ರಮುಖ ಪಾತ್ರವನ್ನು ನಿಭಾಯಿಸಲಿದ್ದು, ಕಾರ್ಯಾಂಗಕ್ಕೆ ನಿರ್ದೇಶನ ನೀಡುತ್ತಿದ್ದಾರೆ. ಅಲ್ಲದೇ, ನೇಮಕಗೊಂಡಿರುವವರ ಶೈಕ್ಷಣಿಕ ಅರ್ಹತೆಯನ್ನು ನೋಡಿದರೆ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ. ಇಷ್ಟು ಮಾತ್ರವಲ್ಲದೇ, ಜಿಲ್ಲಾ ಮತ್ತು ತಾಲೂಕು ಮಟ್ಟ ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲೂ ಗ್ಯಾರಂಟಿ ಅನುಷ್ಠಾನ ಸಮಿತಿ ರಚಿಸಲಾಗಿದೆ ಎಂದು ಆಕ್ಷೇಪಿಸಿದರು.

ವಾದ ಆಲಿಸಿದ ನ್ಯಾಯಪೀಠ, ಅರ್ಜಿದಾರರ ವಾದದಲ್ಲಿ ಸತ್ಯಾಂಶ ಇದ್ದರೆ, ಸರ್ಕಾರದ ಕ್ರಮ ಸ್ವಾಗತಾರ್ಹವಲ್ಲ ಎಂಬ ಅಭಿಪ್ರಾಯವ್ಯಕ್ತಪಡಿಸಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಸೇರಿದಂತೆ ಇತರೆ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಬಳಿಕ ವಿಚಾರಣೆಯನ್ನು ಮಾರ್ಚ್ 27ಕ್ಕೆ ಮುಂದೂಡಿತು.

ಟ್ರೋಫಿ ಮತ್ತು ಚಿನ್ನದ ಪದಕ ವಿಜೇತರು



ತುಮಕೂರಿನಲ್ಲಿ ನಡೆದ ಡಿ ನಾಯಕ್ ಕಪ್ ಟೇಕ್‌ವುಂಡೋ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಸಾಯಿ ಟೇಕ್‌ವುಂಡೋ ಅಕಾಡೆಮಿ ಟ್ರೋಫಿ ಮತ್ತು ಚಿನ್ನದ ಪದಕಗಳನ್ನು ಗೆದ್ದುಕೊಂಡಿತು. ಚಿನ್ನದ ಪದಕ ವಿಜೇತರು–ಅದ್ವಿಕಾ, ಆದ್ಯ, ಕಾರ್ತಿಕ್, ಕುಶಾಲಿ ಜಿ., ತರುಣ್ ಎಂ., ಚಾಯಂಕ್ ಎಸ್., ಸಮೀಕ್ಷಾ ಎಂ., ಯಶಸ್ ಸುರ್ವೆ ಎಸ್., ಸನ್ವಿತ್ ಸುರ್ವೆ ಎಸ್., ದಿವ್ಯಾಂಶಿ ಐಹಿತ್, ನಕ್ಷತ್ರ ಎಂ., ಅನ್ಸ್‌ಪ್ರೀತ್ ಸಿಂಗ್, ತರಬೇತುದಾರ ವಿ.ಎಸ್.ಪ್ರತಾಪ್ ಬಾಬು ಅವರನ್ನು ಕಾಣಬಹುದು.

ಜೆಇಇ–2025 ಪರೀಕ್ಷೆಯಲ್ಲಿ ಬಿಜಿಎಸ್ ಪಿಯು ಕಾಲೇಜು ವಿದ್ಯಾರ್ಥಿಗಳ ಸಾಧನೆ



ಚಿನ್ಮಯ್ ಓಂಕಾರೇಶ್ ಸರ್ವೇಶ್ ನಿಮಿಷ್ ಆದಿತ್ಯ



ಶರಥ್ ಸುಧನ್ವ ಮನಸ್ವಿ ಮೀಥ್ ಮೆಹ್ತಾ ಅಭಿನಂದನಾ



ಬ್ರಿಜೇಶ್ ಶರಣ್ಯಾ



ಎಂ.ಧನ್ಯಾ

ಮೈಸೂರು, ಫೆ.28– ಜೆಇಇ–2025ರ ಪರೀಕ್ಷೆಯಲ್ಲಿ ಮೈಸೂರು ಕುವೆಂಪು ನಗರದ ಬಿಜಿಎಸ್ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಕಾಲೇಜಿನ ಆರ್.ಚಿನ್ಮಯ್ ಗೌಡ (ಶೇ.99.91 ಐಎಲ್‌ಇ), ಎಸ್.ಜಿ.ಓಂಕಾರೇಶ್(ಶೇ.99.45), ಕೆ.ಎನ್.ಸರ್ವೇಶ್ ಕುಮಾರ್(ಶೇ.98.12), ನಿಮಿಷ್ ಪ್ರಜ್ವಲ್.ಬಿ(ಶೇ.98.08), ಆದಿತ್ಯ ಎ.ಕುಲಕರ್ಣಿ(ಶೇ.98), ಹೆಚ್.ಶರಥ್ (ಶೇ.97.39), ಸಿ.ಎ.ಸುಧನ್ವ ರಾವ್(ಶೇ.96.38), ಮನಸ್ವಿ ಎಂ.ದೇಮಹಟ್ಟಿ(ಶೇ.96.26), ಮೀಥ್ ಮೆಹ್ತಾ (ಶೇ.95.97), ಎಂ.ಅಭಿನಂದನಾ (ಶೇ.95.90), ಸಿ.ಕೆ.ಬ್ರಿಜೇಶ್(ಶೇ.95.86), ಶರಣ್ಯಾ ಎಸ್.ಕುಮಾರ್(ಶೇ.95.37) ಹಾಗೂ ಎಂ.ಧನ್ಯಾ(ಶೇ.95.20) ಉತ್ತಮ ಅಂಕ ಗಳಿಸಿದ್ದು, ಇವರನ್ನು ಸಂಸ್ಥೆಯ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಆಡಳಿತಾಧಿಕಾರಿ ಡಾ.ಆರ್. ಎಸ್. ನರಸೇಗೌಡ, ಶೈಕ್ಷಣಿಕ ಸಂಯೋಜಕ ಆರ್.ರಂಗನಾಥಬಾಬು, ಪ್ರಾಂಶುಪಾಲರು ಹಾಗೂ ಉಪನ್ಯಾಸಕರು ಅಭಿನಂದಿಸಿದ್ದಾರೆ.

ಹಿಂದೂಸ್ತಾನ್ ಕಾಲೇಜು ವತಿಯಿಂದ ಅಂತರ ಕಾಲೇಜು ಟ್ರೋಫಿ ಸ್ಪೆಕ್ಟ್ರಾ–2025

ಮೈಸೂರು, ಫೆ.28– ಮೈಸೂರಿನ ಹಿಂದೂಸ್ತಾನ್ ಕಾಲೇಜು ವತಿಯಿಂದ ಡಾ.ಕೆಸಿಜಿ ವರ್ಘೀಸ್ ಸ್ಮರಣಾರ್ಥ 'ಸ್ಪೆಕ್ಟ್ರಾ(SPECTRA)–2025' ಅಂತರ ಕಾಲೇಜು ಟ್ರೋಫಿ ಆಯೋಜಿಸಲಾಗಿತ್ತು.



ಈ ಅದ್ಧೂರಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ನಕ್ಷಾ ಬಿಲ್ಡರ್ಸ್ ನಿರ್ದೇಶಕಿ ಪ್ರತಿಭಾ ನಾಯಕ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮಲ್ಲಿರುವ ಆಸಕ್ತಿಗಳನ್ನು ಅನ್ವೇಷಿಸಿ, ಹೊಸತನ ಮೆರೆದಿದ್ದೀರಿ. ಪ್ರತಿಯೊಬ್ಬರೂ ಪ್ರತಿಭಾವಂತರಾಗಿದ್ದೀರಿ. ನಿಮ್ಮ ಗುರಿ ಸಾಧನೆಯಷ್ಟೇ ಯಶಸ್ಸು ಎನ್ನುವ ಭಾವನೆ ಇರಬಾರದು. ನಿಮ್ಮಿಂದ ಸಮಾಜದ ಮೇಲೆ ಉತ್ತಮ ಪ್ರಭಾವ ಉಂಟಾಗಬೇಕು ಆ ನಿಟ್ಟಿನಲ್ಲಿ ನೀವೆಲ್ಲಾ ಮುಂದಡಿ ಇಡಬೇಕು ಎಂದು ಸಲಹೆ ನೀಡಿದರು.

ಈ ಸುಂದರ ಕಾರ್ಯಕ್ರಮಕ್ಕೆ ನಮ್ಮ ಸಂಸ್ಥೆಯಿಂದ ಪ್ರಾಯೋಜಕತ್ವ ನೀಡಿರುವುದಕ್ಕೆ ಹೆಮ್ಮೆ ಎನಿಸಿದೆ. ವಿದ್ಯಾರ್ಥಿಗಳ ಪ್ರತಿಭೆ ಹಾಗೂ ಅವರು ಪ್ರದರ್ಶಿಸಿದ ಗುಣಮಟ್ಟದ ಪ್ರಾಜೆಕ್ಟ್‌ಗಳು ಆಕರ್ಷಕವಾಗಿದ್ದವು. ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಆಯೋಜನಾ ಸಮಿತಿ, ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಇದೇ ವೇಳೆ ತಿಳಿಸಿದರು. ಬಳಿಕ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ನಗದು ಪುರಸ್ಕಾರ ನೀಡಿ, ಅಭಿನಂದಿಸಿದರು.

'ಸ್ಪೆಕ್ಟ್ರಾ–2025' ಒಂದು ತಂತ್ರಜ್ಞಾನ, ನಿರ್ವಹಣೆ, ನಾವೀನ್ಯತೆ ಮತ್ತು ಸಾಂಸ್ಕೃತಿಕ ಪ್ರತಿಭೆಗಳ ಆಗರವಾಗಿತ್ತು. ಯುವಜನರ ಉತ್ಸಾಹ ಮತ್ತು ಪ್ರತಿಭೆಯನ್ನು ಅನಾವರಣಗೊಳಿಸುವ ಪ್ರಮುಖ ವೇದಿಕೆಯಾಗಿತ್ತು. ಮುಂದಿನ ವರ್ಷವೂ ಮತ್ತಷ್ಟು ನಾವಿನ್ಯತೆಯೊಂದಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಕಾರ್ಯಕ್ರಮದ ಆಯೋಜಕರು ತಿಳಿಸಿದರು.

ಮಹಾರಾಜ 10ನೇ ಚಾಮರಾಜೇಂದ್ರ ಒಡೆಯರ್ ಜಯಂತಿ; ಕಾವ್ಯವಾಚನ

ಮೈಸೂರು, ಫೆ.28(ಎಂಕೆ)– ಮೈಸೂರಿನ ಗೋಕುಲಂನಲ್ಲಿರುವ ಶ್ರೀ ಕೃಷ್ಣಗಾನ ಸಭಾದ 23ನೇ ವಾರ್ಷಿಕೋತ್ಸವದ ಹಿನ್ನಲೆಯಲ್ಲಿ ಶ್ರೀ ಕೃಷ್ಣ ಚಾರಿಟಬಲ್ ಟ್ರಸ್ಟ್ ಸಹಯೋಗದೊಂದಿಗೆ ಹಮ್ಮಿಕೊಂಡಿರುವ ಸಂಗೀತ, ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವದ ಅಂಗವಾಗಿ ಮಹಾರಾಜ 10ನೇ ಚಾಮರಾಜೇಂದ್ರ ಒಡೆಯರ್ ಅವರ ಜಯಂತಿ ಹಾಗೂ ಕಾವ್ಯ ವಾಚನ ಕಾರ್ಯಕ್ರಮ ನಡೆಯಿತು.



ಶ್ರೀ ಕೃಷ್ಣಗಾನ ಸಭಾದಲ್ಲಿ ಮಹಾರಾಜ 10ನೇ ಚಾಮರಾಜೇಂದ್ರ ಒಡೆಯರ್ ಅವರ ಜಯಂತಿ ಹಾಗೂ ಕಾವ್ಯ ವಾಚನ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜ ರಾವ್ ಮಾತನಾಡಿ, ನನಗೆ ವಿದ್ಯೆಕೊಟ್ಟ ಸಂಸ್ಕೃತ ಪಾಠ ಶಾಲೆ, ಅನ್ನ ಕೊಟ್ಟ ಪ್ರಾಚ್ಯ ವಿದ್ಯಾ ಸಂಶೋಧನಾಲಯ ಸ್ಥಾಪಿಸಿದ್ದು 10ನೇ ಚಾಮರಾಜೇಂದ್ರ ಒಡೆಯರ್, 1868ರವರೆಗೆ ಆಳ್ವಿಕೆ ನಡೆಸಿದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು, ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದರು. ಸಂಸ್ಕೃತದಲ್ಲಿ ಅದ್ಭುತ ಗ್ರಂಥಗಳನ್ನು ರಚಿಸಿದರು. 9 ಸಂಪುಟಗಳಲ್ಲಿರುವ ಅವರ 'ಶ್ರೀತತ್ವನಿಧಿ' ಗ್ರಂಥದ ಮೊದಲ ನಾಲ್ಕು ಸಂಪುಟಗಳನ್ನು ಸಂಸ್ಕೃತದಿಂದ ಇಂಗ್ಲಿಷ್‌ಗೆ ಭಾಷಾಂತರಿಸುವ ಕೆಲಸವನ್ನು ನಾನು ಮಾಡಿದ್ದು, ಪ್ರಾಚ್ಯವಿದ್ಯಾ ಸಂಶೋಧನಾಲಯ ಪ್ರಕಟಿಸಲಿದೆ ಎಂದರು.

ಮುಂದಿನ ದಿನಗಳಲ್ಲಿ ಭಾರತದಲ್ಲಿ ಪ್ರಜಾಪ್ರಭುತ್ವ ಜಾರಿಗೆ ಬರಲಿದೆ ಎಂಬುದನ್ನು ಮನಗಂಡು ಪ್ರಜಾಪ್ರಭುತ್ವದ ಬೀಜ ಬಿತ್ತಿದ 10ನೇ ಚಾಮರಾಜೇಂದ್ರ ಒಡೆಯರ್, ಸಾಹಿತ್ಯ, ಸಂಗೀತ, ಕಲೆಗೆ ಅಪಾರ ಪ್ರೋತ್ಸಾಹ ನೀಡಿದ್ದಾರೆ. 1883ರಲ್ಲಿ ನಮ್ಮ ದೇಶದ ಆಧ್ಯಾತ್ಮಿಕ ಪ್ರತಿನಿಧಿಯಾಗಿದ್ದ ಸ್ವಾಮಿ ವಿವೇಕಾನಂದರು ಅಮೆರಿಕ ಚಿಕಾಗೋ ಸರ್ವಧರ್ಮ ಸಮ್ಮೇಳನಕ್ಕೆ ತೆರಳಲು ಆರ್ಥಿಕವಾಗಿ ಹಾಗೂ ಇತರೆ ಸೌಲಭ್ಯಗಳ ಸಹಕಾರ ನೀಡಿದ ಅವರು, 1894ರವರೆಗೆ ಆಳ್ವಿಕೆ ನಡೆಸಿ, ನಾಲ್ವಡಿ ಕೃಷ್ಣರಾಜ ಒಡೆಯರೆಂಬ ದೊಡ್ಡ ಕಾಣಿಕೆಯನ್ನು ನೀಡಿದರು. ಇಂತಹ 10ನೇ ಚಾಮರಾಜೇಂದ್ರ ಒಡೆಯರ್ ಅವರನ್ನು ಕೃತಜ್ಞತೆಯಿಂದ ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ನಂತರ ಭೀಷ್ಮ ಪರ್ವ ಗಮಕ ವಾಚನ ಕಾರ್ಯಕ್ರಮ ನಡೆಯಿತು. ವಿದುಷಿ, ಖ್ಯಾತ ಗಮಕಿ ಡಾ.ಪದ್ಮಾವತಿ ನರಸಿಂಹನ್ ವಾಚಿಸಿದರೆ, ವಿದ್ವಾನ್ ಡಾ.ಹೆಚ್.ವಿ.ನಾಗರಾಜ ರಾವ್ ಗಮಕ ವ್ಯಾಖ್ಯಾನಿಸಿದರು. ಶ್ರೀ ಕೃಷ್ಣಗಾನ ಸಭಾ ಅಧ್ಯಕ್ಷ ಬಿ.ಎಸ್.ಶ್ರೀಧರ ರಾಜೇ ಅರಸ್ ಉಪಸ್ಥಿತರಿದ್ದರು.

ಹಾಸನ ಮಿತ್ರ

9 ವಿವಿ ಮುಚ್ಚುವ ತೀರ್ಮಾನ ಹಿಂಪಡೆಯಲು ಒತ್ತಾಯಿಸಿ ಎಸ್‌ಎಫ್‌ಐ ಪ್ರತಿಭಟನೆ



ಹಾಸನ: ರಾಜ್ಯದ 9 ವಿಶ್ವವಿದ್ಯಾಲಯಗಳನ್ನು ಮುಚ್ಚಲು ಮುಂದಾಗಿರುವ ರಾಜ್ಯ ಸರ್ಕಾರದ ನಡೆಯನ್ನು ವಿರೋಧಿಸಿ ಹಾಗೂ ವಿವಿಗಳನ್ನು ಯಾವುದೇ ಕಾರಣಕ್ಕೂ ಮುಚ್ಚಬಾರದು ಎಂದು ಆಗ್ರಹಿಸಿ ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.

ನಗರದ ಗಂಧದ ಕೋಠಿ ಆವರಣದಿಂದ ಹೊರಟ ಪ್ರತಿಭಟನಾ ಮೆರವಣಿಗೆಯು ಆರ್‌ಸಿ ರಸ್ತೆ, ಬಿ.ಎಂ. ರಸ್ತೆ ಮೂಲಕ ಜಿಲ್ಲಾಧಿಕಾರಿ ಕಛೇರಿ ಆವರಣಕ್ಕೆ ತಲುಪಿತು. ಈ ವೇಳೆ ಜಿಲ್ಲಾ ಕಾರ್ಯದರ್ಶಿ ರಮೇಶ್ ಮಾತನಾಡಿ, ರಾಜ್ಯದಲ್ಲಿ 9 ಹೊಸ ವಿಶ್ವವಿದ್ಯಾಲಯಗಳನ್ನು ಮುಚ್ಚಲು ರಾಜ್ಯ ಸರಕಾರದ ಸಚಿವ ಸಂಪುಟದ ಉಪ ಸಮಿತಿ ತೀರ್ಮಾನಿಸಿದೆ. ಸರಕಾರದ ಈ ನಡೆ ವಿದ್ಯಾರ್ಥಿ ವಿರೋಧಿ ನಡೆಯಾಗಿದೆ. ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಸ್ಥಾಪನೆಗೊಂಡಿರುವ ವಿಶ್ವವಿದ್ಯಾಲಯಗಳು ಮುಚ್ಚುವುದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ, ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕೆ ಅಷ್ಟೇ ಅಲ್ಲದೆ ಪ್ರಾದೇಶಿಕವಾಗಿ ಆಯಾ ಜಿಲ್ಲೆಗಳ ಸರ್ವಾಂಗೀಣ ಅಭಿವೃದ್ಧಿಗೆ ಮಾರಕವಾಗಬಹುದು. ಹಾಗಾಗಿ ರಾಜ್ಯ ಸರಕಾರ ವಿ.ವಿ ಗಳನ್ನು ಮುಚ್ಚುವ ತೀರ್ಮಾನವನ್ನು ಕೈಬಿಟ್ಟು ಯಥಾ ಸ್ಥಿತಿಯಲ್ಲಿ ವಿ.ವಿಗಳನ್ನು ಮುಂದುವರೆಸಬೇಕೆಂದು ಒತ್ತಾಯಿಸಿದರು. ಉಪನ್ಯಾಸಕರಾದ ಡಾ. ಮಹೇಶ್ ಮಾತನಾಡಿ, ಸರಕಾರ ಮುಚ್ಚಲು ಹೊರಟಿರುವ ಈ ವಿ.ವಿಗಳಿಗೆ ಖಾಯಂ ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ ನೇಮಕ, ಗ್ರಂಥಾಲಯ, ಪ್ರಯೋಗಾಲಯ, ಹಾಸ್ಟೆಲ್, ಅನುದಾನ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಸರಕಾರ ಒದಗಿಸಬೇಕಿತ್ತು. ಈ ಸೌಕರ್ಯಗಳನ್ನು ಒದಗಿಸದಿರುವ ಸ್ಥಿತಿಯಲ್ಲಿಯೂ ಹಲವು ಪ್ರಮುಖ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ವಿದ್ಯಾರ್ಥಿಗಳಿಗೆ ಅಗತ್ಯವಿರುವ ಉನ್ನತ ಶಿಕ್ಷಣ ಪಡೆಯಲು ವಿವಿಧ ಶೈಕ್ಷಣಿಕ ಚಟುವಟಿಕೆಗಳೊಂದಿಗೆ ಮುನ್ನಡೆಯುತ್ತಿವೆ. ಈಗಾಗಲೇ ಈ ವಿವಿಯಲ್ಲಿ ಓದುತ್ತಿರುವ ಸಾವಿರಾರು ವಿದ್ಯಾರ್ಥಿಗಳು, ನೂರಾರು ಬೋಧಕ ಮತ್ತು ಬೋಧಕೇತರ ವರ್ಗ ಮತ್ತು ಈ ವಿ.ವಿಗಳಿಗೆ ಸೇರ್ಪಡೆಯಾಗಿರುವ ನೂರಾರು ಪದವಿ ಕಾಲೇಜುಗಳು ಮತ್ತು ಸಾವಿರಾರು ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಅತಂತ್ರವಾಗಲಿದೆ ಎಂದರು.

ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ಸಹ ಕಾರ್ಯದರ್ಶಿ ವಿವೇಕ್, ರಾಜ್ಯ ಉಪಾಧ್ಯಕ್ಷ ಬಸವರಾಜ ಗುಳೇದಾಳ್, ಡಿವೈಎಫ್‌ಐ, ಎಂ.ಜಿ. ಪೃಥ್ವಿ, ಮುಖಂಡರು ಜಯಲಕ್ಷ್ಮಿ, ಸೌಮ್ಯ ಧರ್ಮ, ಉಪನ್ಯಾಸಕರಾದ ಡಾ. ಮಹೇಶ್, ಡಾ.ಲೋಕೇಶ್ ಇನ್ನಿತರು ಉಪಸ್ಥಿತರಿದ್ದರು.

ಮಾ.3, ಬೆಂಗಳೂರಿನಲ್ಲಿ ಸಿಐಟಿಯು ಧರಣಿ



ಹಾಸನ: ಜನಪರ ಆರ್ಥಿಕ ನೀತಿಗಳ ಜಾರಿಗೆ ಹಾಗೂ ಕಾರ್ಮಿಕ ವರ್ಗದ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸಿಐಟಿಯು ನೇತೃತ್ವದಲ್ಲಿ ಮಾ.3 ರಿಂದ 7 ರವರೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕಾರ್ಮಿಕರ ಬೃಹತ್ ಅಹೋರಾತ್ರಿ ಅನಿರ್ದಿಷ್ಟ ಧರಣಿ ನಡೆಸಲಾಗುವುದು ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಧರ್ಮೇಶ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಕಾರ್ಮಿಕ ವರ್ಗದ ಪ್ರಮುಖ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿಸಿ ಹಾಗೂ ಜನಪರ ಪರ್ಯಾಯ ಆರ್ಥಿಕ ನೀತಿಗಳ ಜಾರಿಗೆ ಒತ್ತಾಯಿಸಿ ಕಾರ್ಮಿಕರು ಈ ಅಹೋರಾತ್ರಿ ಅನಿರ್ದಿಷ್ಟ ಧರಣಿ ನಡೆಸಲು ಸಿಐಟಿಯು ರಾಜ್ಯ ಸಮಿತಿಯು ತೀರ್ಮಾನಿಸಿದೆ ಎಂದರು. ಮಾ.3 ರಂದು ಗ್ರಾಮ ಪಂಚಾಯಿತಿ ನೌಕರರು, ಮಾ.4 ರಂದು ಅಕ್ಷರ ದಾಸೋಹ ನೌಕರರು, ಮಾ.5 ರಂದು ಕಟ್ಟಡ ನಿರ್ಮಾಣ ಕಾರ್ಮಿಕರು, ಮಾ.6 ರಂದು ಪ್ಲಾಂಟೇಷನ್ ಕಾರ್ಮಿಕರು, ಪೌರ ಕಾರ್ಮಿಕರು, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುವ ಗುತ್ತಿಗೆ ಮತ್ತು ಹೊರ ಗುತ್ತಿಗೆ ಕಾರ್ಮಿಕರು ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಖಾಯಂ ಹಾಗೂ ಗುತ್ತಿಗೆ ಕಾರ್ಮಿಕರು ಮತ್ತು ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಅಸಂಘಟಿತ ಕಾರ್ಮಿಕರು, ಸಾರಿಗೆ ಕಾರ್ಮಿಕರಾದ ಆಟೋ, ಟ್ಯಾಕ್ಸಿ ಚಾಲಕರು ಹೋರಾಟದಲ್ಲಿ ಭಾಗ ವಹಿಸುತ್ತಿದ್ದಾರೆ ಎಂದರು.

ಮಾ.7ರಂದು ಅಂಗನವಾಡಿ ನೌಕರರು ಈ ಬೃಹತ್ ಅಹೋರಾತ್ರಿ ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ. ಕರ್ನಾಟಕ ರಾಜ್ಯದ ಕಾರ್ಮಿಕರ ಹಲವು ಪ್ರಮುಖ ಬೇಡಿಕೆಗಳು ದೀರ್ಘಕಾಲದಿಂದ ಇತ್ಯರ್ಥವಾಗದೇ ಉಳಿದಿದೆ. ಶ್ರಮಶಕ್ತಿಯ ಸಮರ್ಪಕ ನಿರ್ವಹಣೆ ಹಾಗೂ ಶ್ರಮಿಕರನ್ನು ಮಾರುಕಟ್ಟೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು ಅಗತ್ಯ ಆರ್ಥಿಕ ಕ್ರಮಗಳನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳುವ ಅಗತ್ಯವಿದೆ. ಈ ಕ್ರಮಗಳ ಮೂಲಕ ರಾಜ್ಯ ಆರ್ಥಿಕತೆಯು ಸರ್ವೋನ್ಮುಖ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಆದರೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರ ಅನುಸರಿಸುವ ಕಾರ್ಪೋರೇಟ್ ಪರ ನೀತಿಗಳನ್ನೇ ಅನುಸರಿಸುತ್ತಿದೆ ಎಂದು ಅವರು ಹೇಳಿದರು.

ಖಾಲಿ ನಿವೇಶನದ ಕಾಂಪೌಂಡ್ ಧ್ವಂಸ: ಸ್ಥಳೀಯರ ಆಕ್ರೋಶ



ಹಾಸನ: ನಗರದಲ್ಲಿ ಖಾಸಗಿ ಖಾಲಿ ನಿವೇಶನದ ಸುತ್ತ ನಿರ್ಮಿಸಿದ್ದ ಕಾಂಪೌಂಡ್ ಧ್ವಂಸಗೊಳಿಸಿರುವ ಪ್ರಕರಣ ನಡೆದಿದೆ. ಈ ಬಗ್ಗೆ ನಿವೇಶನದ ಮಾಲೀಕರು ಸ್ಥಳೀಯ ಪೊಲೀಸರಿಗೆ ದೂರು ನೀಡಿದ್ದಾರೆ.

ಅಬಿದ್ ಸಲೀಂ ಪ್ರಕಾರ, ಹಾಸನ ನಗರದ ಎಂ.ಜಿ. ರಸ್ತೆ, ಪತಾಂಜಲಿ ವೃತ್ತ, ರವೀಂದ್ರನಗರ (ಸತ್ಯಮಂಗಲ) ನಗರಸಭೆ ವಾರ್ಡ್ ನಂ–9 ರಲ್ಲಿರುವ ನಿವೇಶನದ ಸುತ್ತ ಸುಮಾರು 2.50 ಲಕ್ಷ ವೆಚ್ಚದಲ್ಲಿ ಕಾಂಪೌಂಡ್ ನಿರ್ಮಿಸಲಾಗಿತ್ತು. ಈ ಸ್ವತ್ತು ಹಾಲಿ ಅವರ ಹೆಸರಿನಲ್ಲಿಯೇ ಮುಂದುವರಿದಿತ್ತು. ಕಳೆದ ಭಾನುವಾರ ರಾತ್ರಿ ಸುಮಾರು 12:30ರ ವೇಳೆಗೆ, ಅಪರಿಚಿತರು ಜೆ.ಸಿ.ಬಿ. ವಾಹನದ ಸಹಾಯದಿಂದ ಸುಮಾರು 80 ಅಡಿ ಉದ್ದದ ಕಾಂಪೌಂಡ್ ಅನ್ನು ಧ್ವಂಸಗೊಳಿಸಿದ್ದಾರೆ. ಈ ಬಗ್ಗೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಮರ್ಪಕ ಬಸ್ಸುಗಳಿಲ್ಲದೆ ಹಳ್ಳ ಹಿಡಿಯುತ್ತಿರುವ ಶಕ್ತಿ ಗ್ಯಾರಂಟಿ ಯೋಜನೆ

ಎಲ್ಲೆಂದರಲ್ಲಿ ಕೆಟ್ಟು ನಿಲ್ಲುತ್ತಿರುವ ಬಸ್ಸುಗಳು, ಬದಲಿ ಬಸ್ಸುಗಳಿಲ್ಲದೆ ಪರದಾಟ

ಶ್ರೀರಂಗಪಟ್ಟಣ, ಫೆ.28– ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಗ್ಯಾರಂಟಿ ಯೋಜನೆಗಳಲ್ಲೊಂದಾದ ಶಕ್ತಿ ಯೋಜನೆ ಹಳ್ಳ ಹಿಡಿದಂತಿದೆ. ಸ್ವತಃ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರೇ ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಶುಕ್ರವಾರ ತುರ್ತು ಸಭೆ ನಡೆಸಿದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಲ್. ದಿನೇಶ್, ಶಕ್ತಿ ಯೋಜನೆ ಬಗ್ಗೆ ಸಾರ್ವಜನಿಕರಿಂದ ದೂರುಗಳು ಕೇಳಿಬರುತ್ತಿದ್ದು, ಸಮರ್ಪಕ ಬಸ್‌ಗಳಿಲ್ಲದೆ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಪುರಸಭಾ ಸಭಾಂಗಣದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆಯಲ್ಲಿ ಈ ಬಗ್ಗೆ ವ್ಯಾಪಕ ಚರ್ಚೆಗಳಾದವು. ತಾಲೂಕಿನ ಟಿ.ಎಂ ಹೊಸೂರು ಗ್ರಾಮಕ್ಕೆ ತೆರಳುವ ಬಸ್ಸೊಂದು ಇತ್ತೀಚೆಗೆ ಕೆಟ್ಟು ನಿಂತಿತು. ಬದಲಿ ಬಸ್ ವ್ಯವಸ್ಥೆ ಕಲ್ಪಿಸುವಂತೆ ಸಾರ್ವಜನಿಕರು ಒತ್ತಾಯಿಸಿದರೂ ಬದಲಿ ಬಸ್ ವ್ಯವಸ್ಥೆ ಕಲ್ಪಿಸಲಿಲ್ಲ. ಜೊತೆಗೆ ಶ್ರೀರಂಗಪಟ್ಟಣ– ಮಂಡ್ಯ ಮಾರ್ಗವಾಗಿ ತೆರಳಲು, ಗಂಜಾಂ ಸೇರಿದಂತೆ ಇತರೆ ಗ್ರಾಮಗಳಿಗೆ ಸಂಜೆ 5 ನಂತರ ಬಸ್ಸುಗಳಿಲ್ಲ ಎಂಬ ದೂರುಗಳು ಕೇಳಿಬರುತ್ತಿವೆ. ಶೀಘ್ರ ಬದಲಿ ವ್ಯವಸ್ಥೆ ಕಲ್ಪಿಸುವಂತೆ ಕೆಎಸ್‌ಆರ್‌ಟಿಸಿ ನಿಗಮ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಲ್ಲದೆ ಬಸ್ಸಿನ ಕೆಲ ನಿರ್ವಾಹಕರು ಪ್ರಯಾಣಿಕರೊಂದಿಗೆ ಅಸಭ್ಯವಾಗಿ ವರ್ತಿಸುತ್ತಿರುವ ಬಗ್ಗೆ ಸಮಿತಿ ಸದಸ್ಯರು ಸಭೆಯ ಗಮನ ತಂದರು. ಈ ವೇಳೆ ಅಧ್ಯಕ್ಷ ದಿನೇಶ್ ಮಧ್ಯಪ್ರವೇಶಿಸಿ, ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ವಹಿಸಲು ನಿಗಮದ ಅಧಿಕಾರಿಗೆ ತಾಕೀತು ಮಾಡಿದರು.

ಯುವ ನಿಧಿಗೆ ಅರ್ಜಿ ಸಲ್ಲಿಸುವವರ ಸಂಖ್ಯೆ ಬಹಳ ಕಡಿಮೆಯಾಗಿದ್ದು, ಯೋಜನೆಗಳ ಸದಸ್ಯರು ಹಾಗೂ ಅಧಿಕಾರಿಗಳು ಜೊತೆಗೂಡಿ ಪದವಿ ಹಾಗೂ ಡಿಪ್ಲೊಮಾ ಕಾಲೇಜುಗಳಿಗೆ ತೆರಳಿ ವಿದ್ಯಾರ್ಥಿಗಳಿಗೆ ಯುವನಿಧಿ ಬಗ್ಗೆ ಜಾಗೃತಿ ಮೂಡಿಸುವಂತೆ ತಿಳಿಸಿದರು.

ಇದೇ ವೇಳೆ ಪಟ್ಟಣದ ಮುಮ್ತಾಜ್ ಎಂಬ ವೃದ್ಧೆಯೊಬ್ಬರು ಆಗಮಿಸಿ, ಸರ್ಕಾರದ ಗ್ಯಾರಂಟಿ ಯೋಜನೆಯ ಗೃಹಲಕ್ಷ್ಮಿ ಯೋಜನೆ ಸಿಗದೆ, ಎರಡು ವರ್ಷಗಳಿಂದ ಅಲೆದಾಡುತ್ತಿದ್ದೇನೆ. ವೃದ್ಧೆಯಾದ ನನಗೆ ಹೆಬ್ಬೆಟ್ಟಿನ ತೊಂದರೆಯಿಂದಾಗಿ ಇ-ಕೆವೈಸಿ ಆಗುತ್ತಿಲ್ಲ. ನನಗೆ ಗೃಹಲಕ್ಷ್ಮಿ ಹಣ ಕೊಡಿಸಿ ಎಂದು ಅಧ್ಯಕ್ಷರ ಮುಂದೆ ತಮ್ಮ ಅಳಲು ತೋಡಿಕೊಂಡರು. ಈ ಸಂಬಂಧ ಯೋಜನೆಗಳ ಅನುಷ್ಠಾನಕ್ಕಾಗಿ ಪತ್ರ ಬರೆದು ವೃದ್ಧೆ ಮುಮ್ತಾಜ್ ಅವರಿಗೆ ಯೋಜನೆಯ ಹಣ ಸಿಗುವಂತೆ ಕ್ರಮವಹಿಸಲು ಸ್ಥಳದಲ್ಲಿದ್ದ ತಾಪಂ ಇಒ ಅವರಿಗೆ ಅಧ್ಯಕ್ಷರು ಸೂಚನೆ ನೀಡಿದರು.

ಸಭೆಯಲ್ಲಿ ತಾಲೂಕು ಪಂಚಾಯತ್ ಇಒ ವೇಣು, ಯೋಜನಾಧಿಕಾರಿ ಎಂ.ಎಂ ತ್ರಿವೇಣಿ, ಆಹಾರ ಶಿರಸ್ತೇದಾರ್ ರಮಾ, ಜಿಲ್ಲಾ ಸದಸ್ಯ ಅನ್ಸರ್, ತಾಲೂಕು ಸದಸ್ಯ ಬೆಳಗೊಳ ರವಿಕುಮಾರ್, ಸಂಜಯ್, ಟಿ.ಕೃಷ್ಣ, ಗಣಂಗೂರು ಕೃಷ್ಣಕುಮಾರ್ ಸೇರಿದಂತೆ ಗ್ಯಾರಂಟಿ ಯೋಜನೆಯ ಪದಾಧಿಕಾರಿಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.



ಶ್ರೀರಂಗಪಟ್ಟಣದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆ

ಮಂಡ್ಯ ಜಿಲ್ಲೆಯಲ್ಲಿ 360 ವೈನ್‌ಶಾಪ್, 24 ಲಕ್ಷ ಲೀಟರ್ ಮದ್ಯ ಖರ್ಚು



ಕಾರ್ಯಾಗಾರವನ್ನು ಜಿಲ್ಲಾ ಅಬಕಾರಿ ಅಧಿಕಾರಿ ಡಾ.ನಾಗಶಯನ ಉದ್ಘಾಟಿಸಿದರು.

ಮಂಡ್ಯ, ಫೆ.28– ಯುವ ಸಮುದಾಯ ಮಾದಕ ವಸ್ತುಗಳ ಸೇವನೆ ಮತ್ತು ಬಳಕೆಯಿಂದ ದೂರವಿದ್ದು ಆರೋಗ್ಯಕರ ಅಭ್ಯಾಸಗಳನ್ನು ರೂಢಿ ಮಾಡಿಕೊಳ್ಳಬೇಕು. ಈ ಬಗೆಗೆ ವಿದ್ಯಾರ್ಥಿಗಳಲ್ಲಿ ಮತ್ತು ಜನಸಾಮಾನ್ಯರಲ್ಲಿ ಅರಿವು ಮೂಡಿಸಬೇಕು ಎಂದು ಜಿಲ್ಲಾ ಅಬಕಾರಿ ಅಧಿಕಾರಿ ಡಾ.ನಾಗಶಯನ ತಿಳಿಸಿದರು.

ಪಾಂಡವಪುರ ಎಕ್ಸಲೆನ್ಸ್ ಪಿಯು ಕಾಲೇಜಿನಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಮಂಡ್ಯ ಜಿಲ್ಲಾ ಶಾಖೆ, ಮಂಡ್ಯ ಜಿಲ್ಲಾ ಅಬಕಾರಿ ನಿರೀಕ್ಷಕರ ಕಛೇರಿ ವತಿಯಿಂದ ನಡೆದ ಅಬಕಾರಿ ಕಾಯ್ದೆ ಮತ್ತು ಮಾದಕ ವಸ್ತುಗಳ ಸಂಬಂಧ ಅರಿವು ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆ 20 ಲಕ್ಷ ಜನಸಂಖ್ಯೆ ಹೊಂದಿದ್ದು, 360 ವೈನ್ ಶಾಪ್‌ಗಳಿಂದ 24 ಲಕ್ಷ ಲೀಟರ್ ಮದ್ಯ ಸೇವನೆ ಆಗುತ್ತಿದೆ ಎಂದು ಹೇಳಿದರು.

ಸಾರ್ವಜನಿಕ ವಲಯದಲ್ಲಿ ಮಾದಕ ವಸ್ತುಗಳ ಬಳಕೆ, ಮಾರಾಟ ಮತ್ತು ಶೇಖರಣೆಗೆ ಸಂಬಂಧಿಸಿದಂತೆ ಮಾಹಿತಿ ಕಂಡು ಬಂದಲ್ಲಿ ಡ್ರಗ್ ಫ್ರೀ ಕರ್ನಾಟಕ ಆ್ಯಪ್ ಮೂಲಕ ಮಾಹಿತಿ ನೀಡಬಹುದು. ಮಾಹಿತಿ ನೀಡಿದವರ ವಿವರವನ್ನು ಗೌಪ್ಯವಾಗಿಡಲಾಗುವುದು. ಇಂತಹ ಕೃತ್ಯಗಳಲ್ಲಿ ಭಾಗಿಯಾದವರನ್ನು ಎನ್‌ಡಿಪಿಎಸ್ ಕಾಯ್ದೆಯಡಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮಾದಕ ವಸ್ತುಗಳ ಉತ್ಪತ್ತಿ, ಶೇಖರಣೆ, ಸಾಗಾಣಿಕೆ, ಮಾರಾಟ ಇವುಗಳು ಕಾನೂನಿಗೆ ವಿರುದ್ಧವಾದದ್ದು ಇಂತಹ ಪ್ರಕರಣಗಳು ಕಂಡುಬಂದಲ್ಲಿ ಅಬಕಾರಿ ಇಲಾಖೆ ಪ್ರಕರಣ ದಾಖಲು ಮಾಡಿ ಕ್ರಮ ತೆಗೆದುಕೊಳ್ಳುವುದು ಇಲಾಖೆಯ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರೆಡ್ ಕ್ರಾಸ್ ಸಂಸ್ಥೆಯ ಸಭಾಧ್ಯಕ್ಷೆ ಡಾ.ಮೀರಾ ಶಿವಲಿಂಗಯ್ಯ, ಅಬಕಾರಿ ಅಧೀಕ್ಷಕ ಎನ್.ರವೀಶ್, ಉಪ ಅಬಕಾರಿ ಅಧೀಕ್ಷಕ ಸೋಮಶೇಖರ್, ವಿನಯ ಕುಮಾರ್, ಉಪ ಪ್ರಾಂಶುಪಾಲ ಪ್ರೊಮಹೇಶ್ ಸೇರಿದಂತೆ ಇತರರು ಹಾಜರಿದ್ದರು.

ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ವಿಜ್ಞಾನ ವಸ್ತುಪ್ರದರ್ಶನ



ವಿಜ್ಞಾನ ವಸ್ತು ಪ್ರದರ್ಶನವನ್ನು ಸಂಸ್ಥೆ ಕಾರ್ಯದರ್ಶಿ ಡಾ.ಜೆ.ಎನ್.ರಾಮಕೃಷ್ಣೇಗೌಡ ಉದ್ಘಾಟಿಸಿ ಮಕ್ಕಳ ವಿಜ್ಞಾನ ವಸ್ತು ಪ್ರದರ್ಶನವನ್ನು ವೀಕ್ಷಿಸಿದರು.

ಪಾಂಡವಪುರ, ಫೆ.28– ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರತರುವ ಮೂಲಕ ಭಾರತೀಯ ಭೌತ ವಿಜ್ಞಾನಿ ಸಿ.ವಿ.ರಾಮನ್ ವಿಶಿಷ್ಟ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು ಎಂದು ಬಿಜಿಎಸ್ ಹೇಮಗಿರಿ ಶಾಖಾಮಠದ ಕಾರ್ಯದರ್ಶಿ ಡಾ. ಜೆ.ಎನ್.ರಾಮ ಕೃಷ್ಣೇಗೌಡ ಹೇಳಿದರು.

ಪಟ್ಟಣದ ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ವಿಶ್ವವಿಜ್ಞಾನ ದಿನಾಚರಣೆಯ ಅಂಗವಾಗಿ ವಿಜ್ಞಾನ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿ ಬಳಿಕ ಮಕ್ಕಳ ವಸ್ತು ಪ್ರದರ್ಶನಗಳನ್ನು ವೀಕ್ಷಣೆ ಮಾಡಿ ನಂತರ ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಹಲವಾರು ರೀತಿಯ ಪ್ರತಿಭೆಗಳು ಅಡಗಿರುತ್ತವೆ, ಅವುಗಳನ್ನು ಹೊರ ತೆಗೆದು ಪ್ರೋತ್ಸಾಹ ನೀಡಿದರೆ ಮುಂದೆ ಆ ಮಕ್ಕಳು ದೇಶದ ಆಸ್ತಿಯಾಗಿ ರೂಪುಗೊಳ್ಳಲಿದ್ದಾರೆ ಎಂದರು.

ಶಾಲೆಯಲ್ಲಿ ಎಲ್‌ಕೆಜಿಯಿಂದ ಪಿಯುಸಿಯವರೆಗೂ ಮಕ್ಕಳು ವಿಜ್ಞಾನದ ವಿವಿಧ ವಸ್ತು ಪ್ರದರ್ಶನಗಳನ್ನು ಪ್ರದರ್ಶಿಸಿದ್ದಾರೆ. ಮಕ್ಕಳ ಈ ಪ್ರತಿಭೆಯನ್ನು ನೋಡಿದರೆ ಮುಂದೆ ಮಕ್ಕಳು ದೇಶನಕ್ಕೆ ಅನುಕೂಲವಾಗುವ ಹೊಸಹೊಸ ಅವಿಸ್ಕಾರಗಳನ್ನು ಮಾಡಲಿದ್ದಾರೆ ಎನ್ನುವ ವಿಶ್ವಾಸ ಮೂಡುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಶಾಲೆಯ ಎಲ್‌ಕೆಜಿಯಿಂದ ಪಿಯುಸಿವರೆಗೆ ವಿದ್ಯಾರ್ಥಿಗಳು ವಿವಿಧ ಬಗೆಯ ವಿಜ್ಞಾನದ ಅವಿಷ್ಕಾರಗಳನ್ನು ಪ್ರದರ್ಶಿಸುವ ಮೂಲಕ ಗಮನ ಸೆಳೆದರು.

ಸಮಾರಂಭದಲ್ಲಿ ಮುಖ್ಯ ಶಿಕ್ಷಕ ರಘು, ಗೃಹ ನಿರ್ಮಾಣ ಮಂಡಳಿ ನಿರ್ದೇಶಕ ಬಿ.ಎಸ್.ಜಯರಾಮು, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್.ರಮೇಶ್, ಎಸ್.ರಾಜು, ಕುಮಾರಸ್ವಾಮಿ, ಎಸ್.ನಾಗಸುಂದರ್, ಚನ್ನಮಾದೇಗೌಡ, ಎಸ್.ರವಿಕುಮಾರ್, ವಿಶ್ವನಾಥ್, ಸೇರಿದಂತೆ ಶಿಕ್ಷಕರು, ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ವಿಜೃಂಭಣೆ ರಥೋತ್ಸವ



ಭಾರತೀನಗರ ಸಮೀಪದ ಹನುಮಂತನಗರದ ಶ್ರೀಆತ್ಮಲಿಂಗೇಶ್ವರ ಕ್ಷೇತ್ರದ ದೇವಸ್ಥಾನದ ಆವರಣದಲ್ಲಿ ಶಿವರಾತ್ರಿ ಹಬ್ಬದ ಪ್ರಯುಕ್ತ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಕಾವೇರಿ ಎಜುಕೇಷನ್ ಟ್ರಸ್ಟ್‌ನಲ್ಲಿ ಹೊಸ ಕೋರ್ಸ್, ರಿಸರ್ಚ್ ಸೆಂಟರ್ ಆರಂಭ

ಮಂಡ್ಯ, ಫೆ.28– ಕಾವೇರಿ ಎಜುಕೇಷನ್ ಅಂಡ್ ರಿಸರ್ಚ್ ಟ್ರಸ್ಟ್‌ನ ಕಾವೇರಿ ತಾಂತ್ರಿಕ ಕಾಲೇಜು ದಶಮಾನೋತ್ಸವ ಸಂಭ್ರಮವನ್ನು ಆಚರಿಸಿಕೊಳ್ಳುತ್ತಿದ್ದು, 2025–26ನೇ ಸಾಲಿನಲ್ಲಿ ಹೊಸ ಕೋರ್ಸ್‌ಗಳು ಹಾಗೂ ರಿಸರ್ಚ್ ಸೆಂಟರ್‌ನ್ನು ಆರಂಭಿಸಲಾಗಿದೆ ಎಂದು ಟ್ರಸ್ಟ್‌ನ ಕಾರ್ಯದರ್ಶಿ ಪ್ರೊ.ಬಿ.ನಾಗೇಂದ್ರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2014ರಲ್ಲಿ ನಾಲ್ಕು ಕೋರ್ಸ್‌ಗಳ ಮೂಲಕ ಪ್ರಾರಂಭಗೊಂಡ ಕಾಲೇಜಿನಲ್ಲಿ 2021ರಲ್ಲಿ ಬಿ.ಸಿ.ಎ ಮತ್ತು ಬಿ.ಕಾಂ ಪ್ರಾರಂಭದ ಮೂಲಕ ಕಾವೇರಿ ಪದವಿ ಕಾಲೇಜನ್ನು ಆರಂಭಿಸಲಾಯಿತು ಎಂದರು.

ಕಾಲೇಜಿನ ಬೆಳವಣಿಗೆ ಹಾಗೂ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಇನ್ನಷ್ಟು ಕೋರ್ಸ್‌ಗಳನ್ನು ಒದಗಿಸುವ ಉದ್ದೇಶದಿಂದ 2023ರಲ್ಲಿ ಎಂ.ಸಿ.ಎ, 2024ರಲ್ಲಿ ಇನ್ಫಾರ್ಮೇಷನ್ ಸೈನ್ ಅಂಡ್ ಇಂಜಿನಿಯರಿಂಗ್ ಕೋರ್ಸ್‌ಗಳು ಪರಿಚಯಿಸಲಾಯಿತು. ಇದೀಗ ಗ್ರಾಮೀಣ ಭಾಗದ ಮಕ್ಕಳಿಗೆ ಮತ್ತಷ್ಟು ಕೋರ್ಸ್‌ಗಳನ್ನು ಒದಗಿಸುವ ನಿಟ್ಟಿನಲ್ಲಿ ಪ್ರಸಕ್ತ ಸಾಲಿನಲ್ಲಿ ಬಿ.ಸಿ.ಎ, ಬಿ.ಎಸ್ಸಿ(ಪಿ.ಎಂ.ಸಿ.ಎಸ್), ಬ್ಯಾಚುಲರ್ ಆಫ್ ಹೋಟೆಲ್ ಅಂಡ್ ಟೂರಿಸಂ ಮ್ಯಾನೇಜ್‌ಮೆಂಟ್ ಪ್ರಾರಂಭಿಸಲಾಗಿದೆ ಎಂದು ಹೇಳಿದರು.



ಗೋಷ್ಠಿಯಲ್ಲಿ ನಾಗೇಂದ್ರ ಮಾತನಾಡಿದರು.


ಕಾಲೇಜಿನ ಆವರಣದಲ್ಲಿ ಹಾಲಿ ಇರುವ ರಿಸರ್ಚ್ ಸೆಂಟರ್‌ನಲ್ಲಿ ಐವರು ಪಿ.ಎಚ್.ಡಿ ಪದವಿ ಪಡೆದಿದ್ದು, ಪ್ರಸಕ್ತ ಸಾಲಿನಲ್ಲಿ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್ ವಿಭಾಗ ಮತ್ತು ರಾಸಾಯನ ಶಾಸ್ತ್ರ ವಿಭಾಗದ ನೂತನ ರಿಸರ್ಚ್ ಸೆಂಟರ್ ಅನ್ನು ಪ್ರಾರಂಭಿಸುತ್ತಿದ್ದೇವೆ. ನಮ್ಮಲ್ಲಿ ವಿದ್ಯಾಭ್ಯಾಸ ಪಡೆದ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ಹಲವು ಸಂಸ್ಥೆಗಳೊಂದಿಗೆ ಎಂ.ಓ.ಯು ಸಹಿ ಮಾಡಿದ್ದು ಹತ್ತು ವರ್ಷಗಳಲ್ಲಿ 845 ವಿದ್ಯಾರ್ಥಿಗಳಿಗೆ ಪ್ಲೇಸ್‌ಮೆಂಟ್ ಸೆಲೆಕ್ಷನ್ ಮೂಲಕ ಉದ್ಯೋಗ ಒದಗಿಸಲಾಗಿದೆ ಎಂದು ವಿವರಿಸಿದರು. ಗೋಷ್ಠಿಯಲ್ಲಿ ಅಧ್ಯಕ್ಷ ಡಾ.ಹೆಚ್.ಪಿ.ರಾಜು, ಕಾಲೇಜು ಪ್ರಾಂಶುಪಾಲ ಪ್ರೊ.ಶ್ರೀಕಂಠಪ್ಪ ಇದ್ದರು.

ಕೆಪಿಟಿಸಿಎಲ್ ನೌಕರರ ಸಂಘಕ್ಕೆ ಶಿವಶಂಕರಮೂರ್ತಿ ಅಧ್ಯಕ್ಷ

ಕೆ.ಆರ್.ಪೇಟೆ, ಫೆ.28– ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ(ಕೆಪಿಟಿಸಿಎಲ್) ನೌಕರರ ಸಂಘದ ಕೆ.ಆರ್.ಪೇಟೆ ತಾಲೂಕು ಘಟಕದ ನೂತನ ಅಧ್ಯಕ್ಷರಾಗಿ ಮಂದಗೆರೆ ಶಾಖೆಯ ಕಿರಿಯ ಇಂಜಿನಿಯರ್ ಹೆಚ್.ಸಿ.ಶಿವಶಂಕರಮೂರ್ತಿ, ಪ್ರಧಾನ ಕಾರ್ಯದರ್ಶಿಯಾಗಿ ಉಗ್ರಾಣ ವಿಭಾಗದ ಅನಿಲ್.ಪಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಅನಿಲ್



ಶಿವಶಂಕರಮೂರ್ತಿ

ಉಳಿದಂತೆ ಉಪಾಧ್ಯಕ್ಷರಾಗಿ ಹರ್ಷಿತ್.ಆರ್, ಸಹ ಕಾರ್ಯದರ್ಶಿಯಾಗಿ ಹೆಚ್.ಎಲ್.ಅರುಣ್, ಖಜಾಂಚಿಯಾಗಿ ಟಿ.ಡಿ.ಪರಮೇಶ್, ಕಾರ್ಯಕಾರಿ ಸಮಿತಿ ನಿರ್ದೇಶಕರಾಗಿ ಹರೀಶ್.ಡಿ.ಎಂ, ಮಹೇಶ್.ಕೆ.ಕೆ, ಸ್ವಾಮೀಗೌಡ.ಟಿ, ಕಿರಣ್.ಎಂ.ಡಿ ಅವರು ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾಗಿ ಚೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪುಟ್ಟಸ್ವಾಮಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೂತನ ಅಧ್ಯಕ್ಷರು–ಉಪಾಧ್ಯಕ್ಷರು, ಕಾರ್ಯದರ್ಶಿ ಸೇರಿದಂತೆ ಎಲ್ಲಾ ಪದಾಧಿಕಾರಿಗಳನ್ನು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ(ಕೆಪಿಟಿಸಿಎಲ್) ನೌಕರರ ಸಂಘದ ಕೇಂದ್ರ ಸಮಿತಿ ಸದಸ್ಯರಾದ ಕೆ.ಮಧುಸೂಧನ್ ಸೇರಿದಂತೆ ಹಲವು ಗಣ್ಯರು ಅಭಿನಂದಿಸಿದ್ದಾರೆ.

ಒಂದನೇ ಪುಟದಿಂದ

ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ಇಲ್ಲ

ಬೇಡಿಕೆ ಹೆಚ್ಚಾಗಿ ಓವರ್ ಲೋಡ್ ಆಗುತ್ತಿದೆ. ಇನ್ನು ಕೆಲವು ಉಪ ಕೇಂದ್ರಗಳ ವ್ಯಾಪ್ತಿಯಲ್ಲಿ ಬೇಡಿಕೆಗಿಂತ ಹೆಚ್ಚು ವಿದ್ಯುತ್ ಲಭ್ಯವಿದ್ದು, ಅಂಡರ್ ಲೋಡ್ ಆಗುತ್ತಿದೆ. ಈ ಸಮಸ್ಯೆ ತಪ್ಪಿಸಲು ಅಂಡರ್ ಲೋಡ್ ಇರುವ ಉಪಕೇಂದ್ರಗಳಿಂದ ಓವರ್ ಲೋಡ್ ಇರುವ ಉಪಕೇಂದ್ರಗಳಿಗೆ ವಿದ್ಯುತ್ ಒದಗಿಸಲು ಲಿಂಕ್ ಲೈನ್ ವ್ಯವಸ್ಥೆಗೆ ಆದ್ಯತೆ ನೀಡಲಾಗುತ್ತಿದೆ. ಈಗಾಗಲೇ ಕೆಲವು ಕಡೆ ಲಿಂಕ್ ಲೈನ್ ಕಲ್ಪಿಸುವ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಹೇಳಿದರು. ರಾಜ್ಯದಲ್ಲಿ ಸಾಕಷ್ಟು ವಿದ್ಯುತ್ ಲಭ್ಯವಿದ್ದರೂ ಅದರ ಪ್ರಸರಣ ಮತ್ತು ವಿತರಣೆಯೇ ಸಮಸ್ಯೆ ಯಾಗಿದೆ. ಇದನ್ನು ತಪ್ಪಿಸಲು ಸಬ್ ಸ್ಟೇಷನ್ ಗಳ ಸಂಖ್ಯೆ ಹೆಚ್ಚಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ 100 ಹೊಸ ಸಬ್ ಸ್ಟೇಷನ್ ಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಮುಂದಿನ ಎರಡು ವರ್ಷದಲ್ಲಿ ಪ್ರಸರಣ ಮತ್ತು ವಿತರಣೆಯಲ್ಲಿ ಇರುವ ಸಮಸ್ಯೆಗಳನ್ನು ಬಹುತೇಕ ಬಗೆಹರಿಸಲು ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಸಿಂಗಲ್ ಫೇಸ್‌ನಲ್ಲಿ ಐಪಿಸೆಟ್ ಹಾಕಬೇಡಿ: ಗೃಹ ಬಳಕೆಗೆ ದಿನದ 24 ಗಂಟೆಯೂ ವಿದ್ಯುತ್ ಪೂರೈಸಬೇಕು ಎಂಬ ಉದ್ದೇಶದಿಂದ ಸಿಂಗಲ್ ಫೇಸ್ ವಿದ್ಯುತ್ ಒದಗಿಸಲು ರಾಜ್ಯ ಸರ್ಕಾರ ನಿರಂತರ ಜ್ಯೋತಿ ಯೋಜನೆ ಜಾರಿಗೆ ತಂದಿದೆ. ಅಲ್ಲದೆ, ತೋಟದ ಮನೆಗಳಲ್ಲಿ ವಾಸಿಸುವವರು ಅನುಕೂಲ ಕ್ಕಾಗಿ ರಾತ್ರಿ ವೇಳೆ ಸಿಂಗಲ್ ಫೇಸ್ ವಿದ್ಯುತ್ ಪೂರೈಸಲಾಗುತ್ತಿದೆ. ಆದರೆ, ಸಿಂಗಲ್ ಫೇಸ್ ವಿದ್ಯುತ್ ಪೂರೈಸುವ ಸಂದರ್ಭದಲ್ಲಿ ರೈತರು ಕನ್ವರ್ಟರ್‌ಗಳನ್ನು ಬಳಸಿ ಕೃಷಿ ಪಂಪ್‌ಸೆಟ್‌ಗಳನ್ನು ಬಳಸುತ್ತಿದ್ದಾರೆ. ಇದರಿಂದ ಟ್ರಿಪ್ ಆಗಿ ಇಡೀ ಪ್ರದೇಶ ದಲ್ಲೇ ವಿದ್ಯುತ್ ಪೂರೈಕೆ ಸ್ಥಗಿತ ಗೊಂಡು ಜನರು ತೊಂದರೆಗೊಳಗಾಗುತ್ತಾರೆ. ಆದ್ದರಿಂದ ಯಾವುದೇ ಕಾರಣಕ್ಕೂ ಸಿಂಗಲ್ ಫೇಸ್ ವಿದ್ಯುತ್ ಪೂರೈಕೆಗೆ ಕನ್ವರ್ಟರ್ ಅಳವಡಿಸಿ ಐಪಿಸೆಟ್‌ಗಳನ್ನು ಬಳಸಬಾರದು ಎಂದು ಕೆ.ಜೆ.ಜಾರ್ಜ್ ಮನವಿ ಮಾಡಿದರು.

ದಾಖಲಾತಿಗೆ ಕನಿಷ್ಟ ವಯಸ್ಸು 6 ವರ್ಷ

ಎಂದು ಹೇಳಿದೆ. ರಾಜ್ಯ ಸರ್ಕಾರ ನಿಗದಿಗೊಳಿಸಿರುವುದಕ್ಕಿಂತ ಹೆಚ್ಚಿನ ವಯೋಮಿತಿಯನ್ನು ಆರು ತಿಂಗಳು ಕೇಂದ್ರ ಸರ್ಕಾರ ಹೆಚ್ಚಿಸಿದೆ. ಈ ಕುರಿತಂತೆ ಎಲ್ಲಾ ರಾಜ್ಯಗಳಿಗೆ ಪತ್ರ ಬರೆದಿರುವ ಕೇಂದ್ರ ಶಿಕ್ಷಣ ಇಲಾಖೆ, ಈ ಹೊಸ ನಿಯಮದ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಬಹುದು ಎಂದು ತಿಳಿಸಿದೆ. ಅಲ್ಲದೆ, 2025–26ರ ಶೈಕ್ಷಣಿಕ ವರ್ಷದಿಂದಲೇ ಈ ನಿಯಮವನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು ಎಂದು ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ಸಮಾಲೋಚನಾ ಸಭೆ ನಡೆಸಿ, ಇದರಿಂದ ಪೋಷಕರಲ್ಲಿ ಹಾಗೂ ಶಾಲಾ ಸಿಬ್ಬಂದಿಯಲ್ಲಿ ಗೊಂದಲವಾಗುತ್ತದೆ. ಹಾಗಾಗಿ, 2025–26ರ ಶೈಕ್ಷಣಿಕ ವರ್ಷದಲ್ಲಿ ಮಕ್ಕಳ ದಾಖಲಾತಿ ಬಗ್ಗೆ ಮತ್ತಷ್ಟು ಸ್ಪಷ್ಟನೆ ನೀಡಬೇಕೆಂದು ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲು ನಿರ್ಧರಿಸಿದ್ದಾರೆ.

ಈ ಕುರಿತಂತೆ ಸ್ಪಷ್ಟೀಕರಣ ನೀಡಿದ ರಾಜ್ಯ ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು, 2022ರ ನ.15ರಂದು ಹೊರಡಿಸಲಾಗಿದ್ದ ರಾಜ್ಯ ಸರ್ಕಾರದ ಸುತ್ತೋಲೆಯಲ್ಲಿ ಮಕ್ಕಳ ಒಂದನೇ ತರಗತಿಯ ದಾಖಲಾತಿಗಾಗಿ ಮಕ್ಕಳಿಗೆ 5.5 ವಯಸ್ಸನ್ನು ನಿಗದಿಪಡಿಸಲಾಗಿತ್ತು. ಅದೇ ನಿಯಮದಡಿ 2023–24, 24–25ರ ಶೈಕ್ಷಣಿಕ ವರ್ಷಗಳಲ್ಲಿ ದಾಖಲಾತಿ ಮಾಡಿಕೊಳ್ಳಲಾಗಿದೆ. ಆದರೀಗ ಕೇಂದ್ರ ಸರ್ಕಾರ 2025ರ ಜೂನ್‌ನಿಂದ ಹೊಸ ಶೈಕ್ಷಣಿಕ ವರ್ಷಕ್ಕೆ ಮಾಡಿಕೊಳ್ಳುವ ದಾಖಲಾತಿಯ ವೇಳೆ 6 ವರ್ಷ ಮೇಲ್ಪಟ್ಟ ಮಕ್ಕಳಿಗೆ ಮಾತ್ರ 1ನೇ ತರಗತಿಯ ದಾಖಲಾತಿ ಕೊಡಬೇಕಾಗುತ್ತದೆ. ಈ ಕುರಿತಂತೆ ಕೇಂದ್ರಕ್ಕೆ ಸ್ಪಷ್ಟನೆಯನ್ನು ಕೋರಲಿದ್ದೇವೆ. ಅವರಿಂದಲೂ 6ನೇ ವರ್ಷ ವಯೋಮಿಯನ್ನೇ ನಿಗದಿಗೊಳಿಸಿದರೆ ಅದಕ್ಕೆ ಬದ್ಧರಾಗಬೇಕಾಗುತ್ತದೆ ಎಂದು ಹೇಳಿದ್ದಾರೆ.

ಗೊಂದಲಕಾರಿ: ಮಕ್ಕಳನ್ನು ಒಂದನೇ ತರಗತಿಗೆ ಸೇರಿಸುವಾಗ 5.5 ವರ್ಷ ದಾಟಿದ ಕೂಡಲೇ (ರಾಜ್ಯ ಸರ್ಕಾರದ ಈ ಹಿಂದಿನ ಸುತ್ತೋಲೆಯಂತೆ) ಸೇರಿಸಬೇಕೋ ಅಥವಾ ಈಗ ಕೇಂದ್ರ ಸರ್ಕಾರದ ಸುತ್ತೋಲೆಯಂತೆ 6 ವರ್ಷ ದಾಟಿದ ನಂತರವೇ ಸೇರಿಸಬೇಕೋ ಎಂಬ ಗೊಂದಲಕ್ಕೆ ತೆರೆ ಎಳೆಯಲು ಪ್ರಯತ್ನಿಸುವುದಾಗಿ ಕರ್ನಾಟಕ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಖಾಸಗಿ ಶಾಲೆಗಳ ನಿರ್ವಹಣಾ ಸಂಘದ ಕಾರ್ಯದರ್ಶಿಯಾಗಿರುವ ಡಿ.ಶಶಿ ಕುಮಾರ್ ತಿಳಿಸಿದ್ದಾರೆ. ಈ ಕುರಿತಂತೆ ಕೇಂದ್ರ ಶಿಕ್ಷಣ ಇಲಾಖೆಗೆ ನಾವೂ ಪತ್ರ ಬರೆಯುತ್ತೇವೆ. ಕನಿಷ್ಟ ವಯೋಮಿತಿಯ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಕೋರುತ್ತೇವೆ. ಅವರು ಸ್ಪಷ್ಟೀಕರಣ ಕೊಟ್ಟರೆ ಮಾತ್ರ 2025–26ರ ಶೈಕ್ಷಣಿಕ ವರ್ಷದಲ್ಲಿ ಜೂನ್ ತಿಂಗಳ ನಂತರದ ದಾಖಲಾತಿ ವೇಳೆ ಅದನ್ನೇ ಪಾಲಿಸುತ್ತೇವೆ ಎಂದು ತಿಳಿಸಿದ್ದಾರೆ.

ಕ್ಯಾನ್ಸರ್ ಬರುತ್ತೆ...!

ಸರ್ಕಾರಕ್ಕೆ ಪತ್ರ ಬರೆಯಲಾಗುವುದು. ನಂತರ ಟ್ಯಾಟೂ ಪಾರ್ಲರ್‌ಗಳನ್ನು ನಿಯಂತ್ರಿಸಲು ಕಾನೂನು ರೂಪಿಸಲಾಗುವುದು ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಚರ್ಮದ ಕ್ಯಾನ್ಸರ್, ಹೆಚ್‌ಐವಿ ಹಾಗೂ ಚರ್ಮ ರೋಗ, ಹೆಪಟೈಟಿಸ್ ಬಿ, ಹೆಪಟೈಟಿಸ್ ಸಿಯಂತಹ ಮಾರಣಾಂತಿಕ ಸೋಂಕುಗಳು ಜನರಲ್ಲಿ ಹೆಚ್ಚಾಗುತ್ತಿವೆ. ಇಂತಹ ಸೋಂಕುಗಳು ಹೆಚ್ಚಾಗಲು ಟ್ಯಾಟೂ ಹಾಕಿಸುವುದು ಕೂಡ ಒಂದು ಕಾರಣ ಎಂಬುದು ಆರೋಗ್ಯ ಇಲಾಖೆ ನಡೆಸಿರುವ ತಪಾಸಣೆಯಿಂದ ತಿಳಿದುಬಂದಿದೆ. ಅಷ್ಟೇ ಅಲ್ಲದೆ ಟ್ಯಾಟೂವನ್ನು ಹಾಕುವಾಗ ಬಳಸುವ ಇಂಕ್‌ನಲ್ಲಿ ಅಪಾಯಕಾರಿ ಮೆಟಲ್ ಬಳಕೆಯಾಗುತ್ತಿರುವುದು ಕಂಡುಬಂದಿದೆ. ಇದು ಸಹ ಮನುಷ್ಯನ ದೇಹಕ್ಕೆ ಅಪಾಯಕಾರಿಯಾಗಿದೆ. ಈ ಹಿನ್ನಲೆಯಲ್ಲಿ ಸರ್ಕಾರ ಟ್ಯಾಟೂ ನಿಯಂತ್ರಿಸಲು ಹೊಸ ಕಾನೂನು ಜಾರಿಗೆ ಮುಂದಾಗಿದೆ.

ಲಿಪ್‌ಸ್ಟಿಕ್‌ನ್ನು ಅಪಾಯಕಾರಿ ರಾಸಾಯನಿಕ: ಸೌಂದರ್ಯವರ್ಧಕಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷಿಸಿದಾಗ ಕೆಲವು ಲಿಪ್‌ಸ್ಟಿಕ್‌ಗಳನ್ನು ಅಪಾಯಕಾರಿ ರಾಸಾಯನಿಕವನ್ನು ಬಳಸಿರುವುದು ಪತ್ತೆಯಾಗಿದೆ. ಇಂತಹ ಲಿಪ್‌ಸ್ಟಿಕ್‌ನಿಂದ ಮಾರಕ ರೋಗಗಳು ಬರುವ ಅಪಾಯವಿದೆ. ಬಹುತೇಕ ಮಧ್ಯಮ ವರ್ಗದವರು ಬಳಸುವ ಕಡಿಮೆ ಬೆಲೆಯ ಲಿಪ್‌ಸ್ಟಿಕ್‌ನಿಂದ ಆರೋಗ್ಯ ಸಮಸ್ಯೆ ಉಂಟಾಗುತ್ತದೆ. ಶ್ರೀಮಂತರು ಉಪಯೋಗಿಸುವ ಲಿಪ್‌ಸ್ಟಿಕ್‌ಗಳ ಬಣ್ಣಕ್ಕೆ ಬಳಸುವ ರಾಸಾಯನಿಕವು ಅಪಾಯಕಾರಿಯಾಗಿದ್ದು, ಬ್ಯೂಟಿಪಾರ್ಲರ್‌ಗಳ ಮೇಲೆ ನಿಗಾ ವಹಿಸಲಾಗುವುದು ಎಂದರು.

26 ಆಹಾರ ಮಾದರಿ ಅಸುರಕ್ಷಿತ: ಇನ್ನು ಜನವರಿಯಿಂದ ಒಟ್ಟು 3608 ಆಹಾರ ಪದಾರ್ಥಗಳ ಮಾದರಿ ಸಂಗ್ರಹಿಸಲಾಗಿದೆ. ಈ ಪೈಕಿ 26 ಮಾದರಿಗಳು ಅಸುರಕ್ಷಿತವಾಗಿವೆ ಎಂಬುದು ತಿಳಿದುಬಂದಿದೆ. 28 ಕಳಪೆಯಾಗಿವೆ. ಇದೇ ಜನವರಿಯಲ್ಲಿ 681ರಷ್ಟು ಇಡ್ಲಿ ಸ್ಯಾಂಪಲ್ಸ್ ಪಡೆಯಲಾಗಿದೆ. ಇಡ್ಲಿ ಮಾಡುವಾಗ ಪ್ಲಾಸ್ಟಿಕ್ ಬಳಸುತ್ತಿರುವುದು ಗಮನಕ್ಕೆ ಬಂದಿದೆ. ಘಟನೆ ಸಂಬಂಧ 52 ಆಹಾರ ಉತ್ಪಾದಕರಿಗೆ ನೋಟಿಸ್ ನೀಡಲಾಗಿದೆ. ಪ್ಲಾಸ್ಟಿಕ್ ಬಳಕೆ ಮಾಡದಂತೆ ಈಗಾಗಲೇ ನಾವು ಎಚ್ಚರಿಕೆ ನೀಡಿದ್ದೇವೆ ಎಂದು ಗುಂಡೂರಾವ್ ತಿಳಿಸಿದರು.

1133ರಲ್ಲಿ 938 ಔಷಧ ಉತ್ತಮ: ಔಷಧಗಳ ಗುಣಮಟ್ಟದ ಬಗ್ಗೆಯೂ ಮಾಹಿತಿ ನೀಡಿದ ಅವರು, 1133 ಔಷಧ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಈ ಪೈಕಿ, 938 ಔಷಧಗಳು ಗುಣಮಟ್ಟ ಹೊಂದಿವೆ ಎಂದು ಸಚಿವರು ಹೇಳಿದ್ದಾರೆ.

ಮಾ.22 ಕರ್ನಾಟಕ ಬಂದ್

ಹೋಗಬೇಕು. ಕೇಂದ್ರ ಸರ್ಕಾರ ರಾಜ್ಯಕ್ಕೆ ಮಲತಾಯಿ ಧೋರಣೆ ಮಾಡುತ್ತಿರುವುದನ್ನು ನಿಲ್ಲಿಸಬೇಕು. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮೂಲೆಗುಂಪಾಗಿದ್ದು, ಇದಕ್ಕೆ ಶಕ್ತಿ ತುಂಬಬೇಕು ಎಂದು ಆಗ್ರಹಿಸಿ ಮಾ.22ರಂದು ಕರ್ನಾಟಕ ಬಂದ್‌ಗೆ ಕರೆ ನೀಡಲಾಗಿದೆ ಎಂದರು.

ಮಾರ್ಚ್ 3 –ಬೆಳಿಗ್ಗೆ 11 ಗಂಟೆಗೆ ರಾಜಭವನ ಮುತ್ತಿಗೆ, ಮಾರ್ಚ್ 7–ರಂದು ಬೆಳಗಾವಿ ಚಲೋ, ಮಾರ್ಚ್ 11–ಅತ್ತಿಬೆಲೆ ತಮಿಳುನಾಡು ಗಡಿ ಬಂದ್, ಮಾರ್ಚ್ 14 – ಮಂಡ್ಯ ಮೈಸೂರು, ರಾಮನಗರ ರಾಷ್ಟ್ರೀಯ ಹೆದ್ದಾರಿ ಬಂದ್, ಮಾರ್ಚ್ 16–ಹೊಸಕೋಟೆ ರಾಷ್ಟ್ರೀಯ ಹೆದ್ದಾರಿ ಬಂದ್, ಮಾರ್ಚ್ 22 – ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ಅಖಂಡ ಕರ್ನಾಟಕ ಬಂದ್ ನಡೆಸಲಾಗುವುದು ಎಂದರು

ಕರ್ನಾಟಕ ಬಂದ್‌ಗೆ ಕರೆ ನೀಡಿರುವುದಕ್ಕೆ ಯಾರೊಬ್ಬರೂ ನನ್ನನ್ನು ಕರೆದಿಲ್ಲ ಅಂತ ಮಾತನಾಡಬೇಡಿ. ನಾನು ಪ್ರವೀಣ್ ಶೆಟ್ಟಿ ಅವರನ್ನು ಕರೆದಿದ್ದೆ. ಆದರೆ ಪಾಪ ಅವರು ಎಲ್ಲಿ ಹೋಗಿದ್ದಾರೋ ಗೊತ್ತಿಲ್ಲ. ನಾನು ನಾರಾಯಣಗೌಡರಿಗೂ ಬಹಿರಂಗವಾಗಿ ಕರೆಯುತ್ತೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯಗೆ ನಾವು ಕಳಕಳಿಯಿಂದ ಮನವಿ ಮಾಡುತ್ತೇನೆ. ಇದು ರಾಜಕೀಯವಲ್ಲ ಸಂಪೂರ್ಣ ಬೆಂಬಲ ನೀಡಬೇಕು. ರಾಮಲಿಂಗಾರೆಡ್ಡಿ ಅವರು ನಿಮ್ಮ ಇಲಾಖೆಯ ಎಲ್ಲ ಬಸ್ಸುಗಳನ್ನು ನಿಲ್ಲಿಸಿ ಬೆಂಬಲ ಸೂಚಿಸಬೇಕು. ಹೋಟೆಲ್ ಅವರು ಬಂದ್ ಮಾಡಿ ಬೆಂಬಲ ನೀಡಬೇಕು ಎಂದು ಆಗ್ರಹಿಸಿದರು.

ಬೆಂಗಳೂರು ಸೇರಿದಂತೆ ರಾಜ್ಯದೆಲ್ಲೆಡೆ ಇರುವ ಶಾಪಿಂಗ್ ಮಾಲ್‌ಗಳೆಲ್ಲ ಮುಚ್ಚುತ್ತಾರೆ ನಾವು ಮಾತನಾಡಿದ್ದೇವೆ. ಸರ್ಕಾರಿ ನೌಕರರ ಸಂಘ ಗೌರವದಿಂದ ಹೇಳುತ್ತೇನೆ ಬೆಂಬಲ ನೀಡಿ. ಖಾಸಗಿ ಶಾಲೆ, ಸರ್ಕಾರಿ ಶಾಲೆ ರಜೆ ಘೋಷಣೆ ಮಾಡಿ. ಎಲ್ಲಾ ಐಟಿ ಕಂಪನಿಗಳು ಕೂಡ ರಜೆ ಕೊಡಬೇಕು. ಎಲ್ಲಾ ಅಂಗಡಿ– ಮುಂಗಟ್ಟುಗಳನ್ನು ಮುಚ್ಚಿ ವ್ಯಾಪಾರ, ವ್ಯವಹಾರ ನಿಲ್ಲಿಸಬೇಕು. ಉಳಿದಂತೆ ಎಲ್ಲ ಜನಸಾಮಾನ್ಯರು ಇದಕ್ಕೆ ಬೆಂಬಲ ನೀಡಲಿದ್ದಾರೆ ಎಂದು ವಾಟಾಳ್ ನಾಗರಾಜ್ ಹೇಳಿದರು.

ಮಾ.21ರಿಂದ SSLC ಪರೀಕ್ಷೆ

ಪರೀಕ್ಷೆ ಎದುರಿಸಲಿದ್ದಾರೆ. ಸರ್ಕಾರ ನೀಡುವ ಎಲ್ಲಾ ಆದೇಶಗಳನ್ನು ಪರಿಪಾಲನೆ ಮಾಡುವ ಮೂಲಕ ಪರೀಕ್ಷೆ ಸುವ್ಯವಸ್ಥೆ ನಡೆಯುವಂತೆ ನೋಡಿಕೊಳ್ಳಬೇಕು ಹಾಗೂ ನಿಯಮಗಳನ್ನು ಸರಿಯಾಗಿ ಪಾಲಿಸುವಂತೆ ಜಿಲ್ಲಾಧಿಕಾರಿ ಸೂಚಿಸಿದರು.

ಪರೀಕ್ಷಾ ಕೇಂದ್ರಗಳು: ಜಿಲ್ಲೆಯ ಹೆಚ್.ಡಿ.ಕೋಟೆ 12, ಹುಣಸೂರು 15, ಕೆ.ಆರ್.ನಗರ 11, ಮೈಸೂರು ಉತ್ತರ 19, ಮೈಸೂರು ದಕ್ಷಿಣ 15, ಮೈಸೂರು ಗ್ರಾಮಾಂತರ 18, ನಂಜನಗೂಡು 1, ಪಿರಿಯಾಪಟ್ಟಣ 12, ಟಿ.ನರಸೀಪುರ 13 ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 133 ಪರೀಕ್ಷಾ ಕೇಂದ್ರಗಳಿವೆ. ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಅಧೀಕ್ಷಕರು 133, ಉಪಮುಖ್ಯ ಅಧೀಕ್ಷಕರು 24, ಮಾರ್ಗಾಧಿಕಾರಿಗಳು 54, ಸ್ಥಾನಿಕ ಜಾಗೃತ ದಳದ ಕಾರ್ಯಕ್ಕೆ ಅಧಿಕಾರಿಗಳು 133, ಮೊಬೈಲ್ ಫೋನ್ ಸ್ವಾಧಿನಾಧಿಕಾರಿಗಳು 133, ತಾಲ್ಲೂಕು ಹಂತದ ಜಾಗೃತಿ ದಳ 03 ಹಾಗೂ ಜಿಲ್ಲಾ ಹಂತದ ಜಾಗೃತ ದಳ 03 ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಮುನ್ನೆಚ್ಚರಿಕಾ ಕ್ರಮ: ಜಿಲ್ಲೆಯ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದ್ದು, ಅಭ್ಯರ್ಥಿಗಳ ಅನುಕೂಲಕ್ಕಾಗಿ ಸೂಕ್ತ ಸೂಚನಾ ಫಲಕಗಳ ವ್ಯವಸ್ಥೆ ಮಾಡಲಾಗಿದೆ, ಅಭ್ಯರ್ಥಿಗಳಿಗೆ ಅಗತ್ಯ ಆಸನದ ವ್ಯವಸ್ಥೆ ಮಾಡಲಾಗಿದ್ದು, ಕುಡಿಯುವ ನೀರು, ಶೌಚಾಲಯ ಹಾಗೂ ಇತರ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಲು ಮೊಬೈಲ್ ಸ್ವಾಧೀನಾಧಿಕಾರಿಯನ್ನು ನೇಮಕ ಮಾಡಲಾಗಿದೆ. ಜಿಲ್ಲೆಯ ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಹಾಗೂ ಪ್ರಶ್ನಾಪತ್ರಿಕೆ ಪಾಲಕರನ್ನು ಆಯೋಜಿಸಲಾಗಿದೆ. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಹುಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಅಪರ ಜಿಲ್ಲಾಧಿಕಾರಿ ಡಾ ಪಿ.ಶಿವರಾಜು, ಡಿಸಿಪಿ ಮುತ್ತು ರಾಜ್, ಡಿಡಿಪಿಐ ಜವರೇಗೌಡ ಹಾಗೂ ಡಿಡಿ ಪಿಯು ಮರಿಸ್ವಾಮಿ ಹಾಗೂ ಶಾಲೆಯ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಇಂದಿನಿಂದ ದ್ವಿತೀಯ ಪಿಯು ಪರೀಕ್ಷೆ

ಅವರು ಇಂದು ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಇಲಾಖೆ ಅಧಿಕಾರಿಗಳು ಹಾಗೂ ಪರೀಕ್ಷಾ ಕರ್ತವ್ಯಕ್ಕೆ ನಿಯೋಜನೆಗೊಂಡ ಸಿಬ್ಬಂದಿಗಳೊಂದಿಗೆ ಸಭೆ ನಡೆಸಿ, ಪರೀಕ್ಷಾ ಅಕ್ರಮಗಳು ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಮೈಸೂರು ತಾಲೂಕಿನ 27, ನಂಜನಗೂಡು ತಾಲೂಕಿನ 5, ತಿ.ನರಸೀಪುರ, ಹುಣಸೂರು ಹಾಗೂ ಪಿರಿಯಾಪಟ್ಟಣ ತಾಲೂಕಿನ ತಲಾ 4, ಹೆಚ್.ಡಿ.ಕೋಟೆಯ 3, ಕೆ.ಆರ್.ನಗರದ 2 ಹಾಗೂ ಸಾಲಿಗ್ರಾಮ ತಾಲೂಕಿನ 1 ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, ಜಿಲ್ಲೆಯಾದ್ಯಂತ 10 ಮಾರ್ಗಗಳಾಗಿ ವಿಭಾಗಿಸಿ, ಜಿಲ್ಲಾ ಖಜಾನೆಯಿಂದ ಪ್ರಶ್ನೆ ಪತ್ರಿಕೆಗಳನ್ನು ತೆಗೆದುಕೊಂಡು ಹೋಗಿ ವಿತರಿಸಲು ತಹಶೀಲ್ದಾರ್, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಪ್ರಾಂಶುಪಾಲರನ್ನು ಒಳಗೊಂಡ ಮಾರ್ಗಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಪ್ರಶ್ನೆ ಪತ್ರಿಕೆಗಳನ್ನು ಜಿಲ್ಲಾ ಖಜಾನೆಯಿಂದ ತೆಗೆದುಕೊಂಡು ಹೋಗುವ ವಾಹನಗಳಿಗೆ ಜಿಪಿಎಸ್ ಅಳವಡಿಸಲಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಡಿಸಿಪಿ ಮುತ್ತು ರಾಜ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮರಿಸ್ವಾಮಿ, ಡಿಡಿಪಿಐ ಜವರೇಗೌಡ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿದ್ದರು.

ಜಿಲ್ಲಾ ಖಜಾನೆಯಿಂದ ಪ್ರಶ್ನೆ ಪತ್ರಿಕೆಗಳನ್ನು ತೆಗೆದುಕೊಂಡು ಹೋಗುವ ಅಧಿಕಾರಿಗಳ ತಂಡ ನಿಗದಿತ ಸಮಯಕ್ಕೆ ಹಾಜರಿರಬೇಕು. ಪರೀಕ್ಷೆ ದಿನಗಳಲ್ಲಿ ವಿದ್ಯುತ್ ಕಡಿತವಾಗದಂತೆ ಸೆಸ್ಕ್ ಅಧಿಕಾರಿಗಳು ನಿಗಾ ವಹಿಸಬೇಕು. ಪರೀಕ್ಷೆಗೆ ನಿಯೋಜಿಸಿರುವ ಅಧಿಕಾರಿಗಳು, ಶಿಕ್ಷಕರು ಹಾಗೂ ಸಿಬ್ಬಂದಿ ಸಮಯ ಪಾಲನೆ ಸರಿಯಾಗಿ ಮಾಡಬೇಕು.
–ಡಾ.ಪಿ.ಶಿವರಾಜು
ಅಪರ ಜಿಲ್ಲಾಧಿಕಾರಿ

ಪರೀಕ್ಷಾ ಕೇಂದ್ರಗಳ ವ್ಯಾಪ್ತಿಯ ಸಬ್ ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್ ಹಾಗೂ ಡಿವೈಎಸ್ಪಿ ಮೊಬೈಲ್ ನಂಬರ್‌ಗಳನ್ನು ಅಧಿಕಾರಿಗಳು ಸಂಗ್ರಹಿಸಿಟ್ಟುಕೊಳ್ಳಿ, ಪರೀಕ್ಷಾ ಕೇಂದ್ರಗಳಿಗೆ ಹಾಗೂ ರೂಟ್ ಮ್ಯಾಪ್ ಪ್ರಕಾರ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.
– ಎನ್.ವಿಷ್ಣುವರ್ಧನ್,
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಅಪಾಯಕಾರಿ ಕೃತಕ ಬಣ್ಣಗಳ ಬಳಕೆ


ತಲುಪಿಸುತ್ತಾರೆ. ಈ ಮಧ್ಯವರ್ತಿಗಳಲ್ಲಿ ಕೆಲವರು ಹಣ್ಣುಗಳಿಗೆ ಕೃತಕ ಬಣ್ಣದ ಇಂಜೆಕ್ಷನ್ ನೀಡುತ್ತಾರೆ. ಅದರಿಂದ ಕಲ್ಲಂಗಡಿ ಹಣ್ಣನ್ನು ಕೊಯ್ದಾಗ ಅದು ಅತ್ಯಂತ ಕೆಂಪಾಗಿ, ಆಕರ್ಷಣೀಯವಾಗಿ ಕಾಣುತ್ತದೆ. ಇನ್ನೂ ಕೆಲವರು ಕೆಂಪು ಬಣ್ಣದ ಜೊತೆಗೆ ರುಚಿಯನ್ನು ತರುವಂಥ ರಾಸಾಯನಿಕಗಳನ್ನು ಇಂಜೆಕ್ಟ್ ಮಾಡಿರುತ್ತಾರೆ. ಹಾಗಾಗಿ, ಕಲ್ಲಂಗಡಿ ಹಣ್ಣನ್ನು ಕೊಳ್ಳುವಾಗ ಅಂಗಡಿಯವರು ನೀಡುವ ಸ್ಯಾಂಪಲ್ ಹಣ್ಣು ಕೆಂಪು ಬಣ್ಣದ್ದಾಗಿರುತ್ತದೆ ಹಾಗೂ ರುಚಿಕರವಾಗಿರುತ್ತದೆ. ಅದರಿಂದಾಗಿ, ಗ್ರಾಹಕರು ಮರುಳಾಗಿ ಹಣ್ಣುಗಳನ್ನು ಕೊಳ್ಳುತ್ತಾರೆ. ಇಂತಹ ಹಣ್ಣುಗಳ ಸೇವನೆ ಆರೋಗ್ಯಕ್ಕೆ ಹಾನಿಕರವಾಗಿರುವ ಕಾರಣ ದನ್ನು ತಡೆಯಲು ಹಾಗೂ ಗ್ರಾಹಕರನ್ನು ಕೃತಕ ರಾಸಾಯನಿಕಗಳಿಂದ ಪಾರು ಮಾಡಲು ಅಧಿಕಾರಿಗಳು ಪ್ರಥಮ ಹಂತದಲ್ಲಿ ಬೆಂಗಳೂರು, ಮೈಸೂರು ಮುಂತಾದ ನಗರಗಳಲ್ಲಿ ಕಾರ್ಯಾಚರಣೆಗೆ ಇಳಿದಿದ್ದಾರೆ.

ಹಸಿ ಬಟಾಣಿ: ತರಕಾರಿ ಅಂಗಡಿಗಳಲ್ಲಿ ಸಿಗುವ ಹಸಿ ಬಟಾಣಿ ಕೂಡ ಅಪಾಯಕಾರಿ ಎಂದು ಹೇಳಲಾಗಿದೆ. ಈ ಬಟಾಣಿಗಳು ಮತ್ತಷ್ಟು ಹಸಿರಾಗಿ ಕಾಣಲೆಂಬ ಉದ್ದೇಶದಿಂದ ಆ ಬಟಾಣಿಗಳನ್ನು ಬಿಡಿಸಿದ ಕೂಡಲೇ ಬಣ್ಣಗಳಲ್ಲಿ ಅದ್ದಿ ತೆಗೆದು ಅವುಗಳನ್ನು ವಾಷ್ ಮಾಡಿ ಪ್ಯಾಕ್ ಮಾಡಿ ತಂದು ಗ್ರಾಹಕರಿಗೆ ತಲುಪಿಸಲಾಗುತ್ತಿದೆ. ಇದನ್ನು ತಡೆಯಲು ಸಹ ಆರೋಗ್ಯ ಇಲಾಖೆ ಮುಂದಾಗಿದೆ. ಈಗಾಗಲೇ ಹಲವಾರು ಹಣ್ಣುಗಳ ಅಂಗಡಿಗಳಿಂದ ಕಲ್ಲಂಗಡಿ, ಹಸಿ ಬಟಾಣಿ, ಚೀಪ್ ಕಾಸ್ಮೆಟಿಕ್ಸ್‌ಗಳ ಸ್ಯಾಂಪಲ್ ತೆಗೆದುಕೊಂಡು ಹೋಗಿದ್ದು ಶೀಘ್ರದಲ್ಲೇ ಅವುಗಳನ್ನು ಲ್ಯಾಬ್‌ನಲ್ಲಿ ಪರೀಕ್ಷಿಸಿ ಅದರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಹಿಂದೆ ರೆಡ್‌ವೈಲೈಟ್ ಮತ್ತು ಬ್ಲಾಕ್ ಫೆರೆಸ್ಟ್ ನಂತಹ ಜನಪ್ರಿಯ ಕೇಕ್ ಸೇರಿದಂತೆ 12 ಮಾದರಿಯ ಕೇಕ್‌ಗಳಲ್ಲಿ ಕ್ಯಾನ್ಸರ್ ಉಂಟುಮಾಡಲು ಅಂಶಗಳು ಪತ್ತೆಯಾಗಿದ್ದವು. ಹೀಗಾಗಿ ಕೇಕ್‌ಗಳ ಮೇಲೂ ಕೂಡ ಆರೋಗ್ಯ ಇಲಾಖೆ ನಿಗಾವಹಿಸಿದೆ.

ಫೋಕ್ಸೋ ಪ್ರಕರಣದಲ್ಲಿ ಮಾಜಿ ಸಿಎಂ ಬಿಎಸ್‌ವೈಗೆ ಸಮನ್ಸ್

ಬೆಂಗಳೂರು, ಫೆ. 28(ಕೆಎಂಶಿ)–ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ನ್ಯಾಯಾಲಯ ಸಮನ್ಸ್ ಜಾರಿ ಮಾಡಿದೆ.



ಬೆಂಗಳೂರಿನ 1ನೇ ತ್ವರಿತಗತಿ ನ್ಯಾಯಾಲಯದಲ್ಲಿ ಮಾರ್ಚ್ 15 ರಂದು ಖುದ್ದು ಹಾಜರಾಗಿ ವಿಚಾರಣೆ ಎದುರಿಸುವಂತೆ ಸೂಚಿಸಲಾಗಿದೆ. ಯಡಿಯೂರಪ್ಪ ಅಲ್ಲದೆ, ಸಹ ಆರೋಪಿಗಳಾದ ಅರುಣಾ, ರುದ್ರೇಶ್, ಮರುಳುಸಿದ್ದಯ್ಯ, ಜೆ.ಮರಿಸ್ವಾಮಿ ಅವರಿಗೂ ಸಮನ್ಸ್ ಜಾರಿ ಮಾಡಲಾಗಿದೆ. ಪೋಕ್ಸೋ ಪ್ರಕರಣದಲ್ಲಿ ಯಡಿಯೂರಪ್ಪ ಅವರಿಗೆ ಕೆಲವು ದಿನಗಳ ಹಿಂದಷ್ಟೇ ಕರ್ನಾಟಕ ಹೈಕೋರ್ಟ್‌ನಿಂದ ತಾತ್ಕಾಲಿಕ ರಿಲೀಫ್ ನೀಡಲಾಗಿತ್ತು. ಪ್ರಕರಣ ರದ್ದತಿ ಕೋರಿ ಯಡಿಯೂರಪ್ಪ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್‌ನ ಧಾರವಾಡ ಪೀಠ, ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು.

ಪ್ರಕರಣ ರದ್ದು ಮಾಡಲು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಪೀಠ ನಿರಾಕರಿಸಿತ್ತಾದರೂ, ಬಂಧನದಿಂದ ರಿಲೀಫ್ ದೊರೆತಿತ್ತು ಆದರೆ, ಇದೀಗ ಯಡಿಯೂರಪ್ಪ ವಿಚಾರಣೆ ಎದುರಿಸಲೇಬೇಕಿದೆ.

ಪ್ರಕರಣದ ಹಿನ್ನೆಲೆ ನೋಡಿದಾಗ, 17 ವರ್ಷದ ಬಾಲಕಿ ಮೇಲೆ ಯಡಿಯೂರಪ್ಪ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂಬ ಆರೋಪವನ್ನು 2024ರ ಮಾರ್ಚ್‌ನಲ್ಲಿ ಹೊರಿಸಲಾಗಿತ್ತು.

ಮೈಸೂರು ಮಿತ್ರ ಶನಿವಾರ 1 ಮಾರ್ಚ್ 2025

ಮೈಸೂರಿನ ಎಸ್.ಟಿ.ರವಿಕುಮಾರ್, ಎಂ.ಆರ್.ಸತ್ಯನಾರಾಯಣ ಸೇರಿ ರಾಜ್ಯದ 33 ಪತ್ರಕರ್ತರಿಗೆ ಕೆಯುಡಬ್ಲ್ಯೂಜೆ ದತ್ತಿ ಪ್ರಶಸ್ತಿ

ಮೈಸೂರು, ಫೆ.28(ಆರ್‌ಕೆ)– ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಕೊಡಮಾಡುವ ಕೆಯುಡಬ್ಲ್ಯೂಜೆ ವಾರ್ಷಿಕ ಪ್ರಶಸ್ತಿಗೆ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಮುಖ್ಯ ವರದಿಗಾರ ಎಸ್.ಟಿ. ರವಿಕುಮಾರ್ ಹಾಗೂ ವಿಜಯವಾಣಿ ಪತ್ರಿಕೆಯ ಸ್ಥಾನಿಕ ಸಂಪಾದಕ ಎಂ.ಆರ್. ಸತ್ಯನಾರಾಯಣ ಸೇರಿ ರಾಜ್ಯದ ಒಟ್ಟು 33 ಪತ್ರಕರ್ತರು ಆಯ್ಕೆಯಾಗಿದ್ದಾರೆ.



ಎಸ್.ಟಿ.ರವಿಕುಮಾರ್ ಸತ್ಯನಾರಾಯಣ

ಎಸ್.ಟಿ.ರವಿಕುಮಾರ್ ಅವರು ಪಿ.ರಾಮಯ್ಯ ಪ್ರಶಸ್ತಿ ಹಾಗೂ ಸತ್ಯನಾರಾಯಣ ಗೊಮ್ಮಟ ಮಾಧ್ಯಮ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅದೇ ರೀತಿ ಮಂಡ್ಯದ ಬಸವರಾಜ ಹೆಗ್ಗಡೆ ಅವರಿಗೆ ಹೆಚ್.ಕೆ.ವೀರಣ್ಣಗೌಡ ಸ್ಮಾರಕ ಪ್ರಶಸ್ತಿ, ಕೊಡಗಿನ ಕೆ.ಕೆ.ಬೋಪಣ್ಣರಿಗೆ ರಾಜಶೇಖರ ಕೋಟಿ ಪ್ರಶಸ್ತಿ ಲಭಿಸಿದೆ.

ಕೊಪ್ಪಳದಲ್ಲಿ ಮಾರ್ಚ್ 9ರಂದು ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗುವುದು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ತಿಳಿಸಿದ್ದಾರೆ.

ಆರು ಮಂದಿ ದರೋಡೆಕೋರರಿಗೆ 7 ವರ್ಷಗಳ ಕಠಿಣ ಶಿಕ್ಷೆ

ಮೈಸೂರು, ಫೆ.28(ಆರ್‌ಕೆ)–ಬೈಕ್‌ನಲ್ಲಿ ಬಂದು ಮೈಸೂರಿನ ಮಹದೇವಪುರದ ಮನೆಯೊಂದಕ್ಕೆ ನುಗ್ಗಿ ಚಿನ್ನಾಭರಣ, ನಗದು ಹಾಗೂ ಮೊಬೈಲ್ ಫೋನ್‌ಗಳನ್ನು ದೋಚಿದ್ದ 6 ಮಂದಿಗೆ ಮೈಸೂರು ನ್ಯಾಯಾಲಯವು 7 ವರ್ಷಗಳ ಕಠಿಣ ಶಿಕ್ಷೆ ವಿಧಿಸಿದೆ.


ಶಿವಕುಮಾರ್ ಅಲಿಯಾಸ್ ಟಗರು ಶಿವ(30), ಹರೀಶ ಯಾದವ್ ಅಲಿಯಾಸ್ ಹಾವಳಿ(23), ಶರತ್ ಅಲಿಯಾಸ್ ಶರತ್ ಕುಮಾರ್(26), ಸುನಿಲ್ ಕುಮಾರ್ (23), ಎಸ್.ಶಶಾಂಕ್ ಅಲಿಯಾಸ್ ತೇಜಸ್(22) ಹಾಗೂ ಕಾರ್ತಿಕ(22) ಶಿಕ್ಷೆಗೊಳಗಾದ ದರೋಡೆಕೋರರು.

2020ರ ಆಗಸ್ಟ್ 20ರಂದು ಮಧ್ಯಾಹ್ನ 3.30 ಗಂಟೆಗೆ ಬೈಕ್‌ಗಳಲ್ಲಿ ಬಂದ ಆರೋಪಿಗಳು, ಕುಡಿಯಲು ನೀರು ಕೇಳುವ ನೆಪದಲ್ಲಿ ಮೈಸೂರಿನ ಮಹದೇವಪುರ ಬಿ–ಬ್ಲಾಕ್‌ನ ನಾಗರತ್ನಮ್ಮ ಎಂಬುವರ ಮನೆಗೆ ನುಗ್ಗಿ ಆಕೆ ನೀರು ತರಲೆಂದು ಒಳಗೆ ಹೋದಾಗ ಬಾಗಿಲ ಚಿಲಕ ಹಾಕಿ, ಚಾಕು ತೋರಿಸಿ ಬೀರುವಿನಲ್ಲಿದ್ದ ಚಿನ್ನಾಭರಣ, 17,000 ರೂ. ನಗದು, 2 ಮೊಬೈಲ್ ಫೋನುಗಳನ್ನು ಕಿತ್ತುಕೊಂಡು ಪರಾರಿಯಾಗಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ವಿದ್ಯಾರಣ್ಯಪುರಂ ಠಾಣೆಯ ಅಂದಿನ ಇನ್ಸ್‌ಪೆಕ್ಟರ್ ಡಿ.ಮಂಜುನಾಥ್, ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಎಂ.ರಮೇಶ್, ವಾದ–ಪ್ರತಿವಾದ ಆಲಿಸಿ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಎಲ್ಲಾ 6 ಮಂದಿ ಆರೋಪಿಗಳಿಗೆ 7 ವರ್ಷಗಳ ಕಠಿಣ ಶಿಕ್ಷೆ ಹಾಗೂ ತಲಾ 10,000 ರೂ. ದಂಡ ಮತ್ತು ಐಪಿಸಿ ಸೆಕ್ಷನ್ 397ರಡಿ ಅಪರಾಧಕ್ಕೆ 7 ವರ್ಷ ಸಾದಾ ಸಜೆ ಹಾಗೂ ತಲಾ 5 ಸಾವಿರ ದಂಡ ವಿಧಿಸಿ ಗುರುವಾರ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಕೆ.ನಾಗರಾಜ್ ವಾದ ಮಂಡಿಸಿದ್ದರು.

ರಾಜ್ಯ ಸರ್ಕಾರ–ರಾಜಭವನ ಜಟಾಪಟಿ: ಮತ್ತೆ ಎರಡು ವಿಧೇಯಕ ವಾಪಸ್

ಬೆಂಗಳೂರು: ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಮಸೂದೆ–2024 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಮಸೂದೆ- 2024 ಅನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಗುರುವಾರ ರಾಜ್ಯ ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದಾರೆ. ಜೊತೆಗೆ ಸ್ಪಷ್ಟನೆಯನ್ನೂ ಕೇಳಿದ್ದಾರೆ.



ಕೆಲವು ದಿನಗಳ ಹಿಂದಷ್ಟೇ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆ –2024 ಅನ್ನು ಸಹಿ ಹಾಕದೆ ಹಿಂದೆ ವಾಪಸ್ ಕಳುಹಿಸಿದ್ದ ರಾಜ್ಯಪಾಲರು ಇದೀಗ ಮತ್ತೆರಡು ವಿಧೇಯಕಗಳನ್ನು ವಾಪಸ್ ಕಳುಹಿಸಿದ್ದಾರೆ. ಇದರೊಂದಿಗೆ ಕರ್ನಾಟಕ ಕಾಂಗ್ರೆಸ್ ಸರ್ಕಾರ ಮತ್ತು ರಾಜ್ಯಪಾಲರ ನಡುವಣ ಸಂಘರ್ಷ ಮುಂದುವರಿದಂತಾಗಿದೆ.

ಕರ್ನಾಟಕ ಸಹಕಾರಿ ಸಂಘಗಳ ತಿದ್ದುಪಡಿ ಮಸೂದೆಗೆ ರಾಜ್ಯಪಾಲರು ಹಲವು ಆಕ್ಷೇಪಗಳನ್ನು ಮಾಡಿದ್ದಾರೆ. ಸಹಕಾರಿ ಸಂಘಗಳಿಗೆ ಮೀಸಲಾತಿ ಆಧಾರದ ಮೇಲೆ ನಾಮನಿರ್ದೇಶನ ಮಾಡುವ ಬಗ್ಗೆ ಸರ್ಕಾರವು ತಿದ್ದುಪಡಿ ಮಾಡಿತ್ತು. ಆದರೆ ಈ ತಿದ್ದುಪಡಿಗೆ ರಾಜ್ಯಪಾಲರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ನಾಮನಿರ್ದೇಶಿತರಿಗೆ ಮತದಾನದ ಹಕ್ಕುಗಳನ್ನು ನೀಡಿದರೆ ಸಂಘದ ನಿಯಂತ್ರಣಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಚುನಾಯಿತ ಸದಸ್ಯರ ಹಕ್ಕುಗಳನ್ನು ಹಿಂಬಾಗಿಲಿನ ಮೂಲಕ ಕಸಿದುಕೊಳ್ಳಲಾಗುತ್ತದೆ. ಇದು ಸಹಕಾರಿ ಕ್ಷೇತ್ರದ ಸ್ವಾಯತ್ತತೆಯನ್ನು ದುರ್ಬಲಗೊಳಿಸುವ ಹೆಜ್ಜೆಯಾಗಿದೆ ಎಂದು ರಾಜ್ಯಪಾಲರು ಹೇಳಿದ್ದಾರೆ.

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ– 2024ಕ್ಕೂ ಆಕ್ಷೇಪ ವ್ಯಕ್ತಪಡಿಸಿರುವ ರಾಜ್ಯಪಾಲರು, ಸೌಹಾರ್ದ ಸಹಕಾರಿ ಮಸೂದೆಗೆ ಸಂಬಂಧಿಸಿದಂತೆ, ಅಧಿಕಾರಿಗಳು ನೀಡಿದ ಸ್ಪಷ್ಟನೆಗಳು ತೃಪ್ತಿಕರವಾಗಿಲ್ಲ. ಎಲ್ಲಾ ಸುಸ್ತಿದಾರರಿಗೆ ಮತದಾನದ ಹಕ್ಕು ನೀಡುವ ಬದಲು, ಅವರು ಮತದಾನ ಮಾಡದಂತೆ ತಡೆಯಲು ಸರಿಯಾದ ವಿಧಾನವನ್ನು ಜಾರಿಗೆ ತರಬೇಕು' ಎಂದು ರಾಜ್ಯಪಾಲರು ಸಲಹೆ ನೀಡಿದ್ದಾರೆ.

ಶೀಘ್ರದಲ್ಲೇ 'ಧರ್ಮಿಷ್ಟ' ಚಿತ್ರೀಕರಣ ಆರಂಭ

ಮೈಸೂರು, ಫೆ.28(ಜಿಎ)–ರಾಗಶ್ರೀ ಫಿಲಂಸ್ ಪ್ರೊಡಕ್ಷನ್ ಅಡಿಯಲ್ಲಿ ನಿರ್ಮಾಣಗೊಳ್ಳಲು ಸಿದ್ಧವಿರುವ 'ಧರ್ಮಿಷ್ಟ' ಚಿತ್ರೀಕರಣ ಶೀಘ್ರದಲ್ಲೇ ಶ್ರೀರಂಗಪಟ್ಟಣದ ಕ್ಷಣಾಂಬಿಕಾ ದೇವಸ್ಥಾನದ ಬಳಿ ನಡೆಯಲಿದೆ ಎಂದು ಚಿತ್ರದ ನಿರ್ದೇಶಕ ಹೆಚ್.ವಿ. ಪುಟ್ಟಸ್ವಾಮಿ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ್ಯೂನಿಯರ್ ರಾಜ್‌ಕುಮಾರ್ ಎಂದೇ ಖ್ಯಾತರಾದ ಅಜಿತ್‌ಕುಮಾರ್ ಚಿತ್ರದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಚಿತ್ರಕ್ಕೆ ತಾವೇ ಕಥೆ, ಸಾಹಿತ್ಯ ನೀಡಿ ಚಿತ್ರ ನಿರ್ಮಿಸಿ ನಿರ್ದೇಶಿಸುತ್ತಿದ್ದೇನೆ ಎಂದರು.

ಚಿತ್ರದ ಎರಡು ಹಾಡುಗಳಿಗೆ ರವಿಶಂಕರ್ ಸಂಗೀತ ನೀಡಿದ್ದಾರೆ. ಭಾಸ್ಕರ್ ಕೃಷ್ಣ ಚಿತ್ರಕಥೆ, ಸಂಭಾಷಣೆ ಹೊಣೆ ಹೊತ್ತಿದ್ದಾರೆ. ಹೊಸದಾಗಿ ಈ ಚಿತ್ರದ ಮೂಲಕ ಕವಿತ ಎಂಬ ಕಲಾವಿದೆಯನ್ನು ಪರಿಚಯಿಸಲಾಗುತ್ತಿದೆ. ಎ.ಜಿ.ರಾಮಚಂದ್ರರಾವ್, ಡಾ.ಮೀನ್ಕರೆ ಆಂಜಿನಪ್ಪ, ಸುಮಂತ್, ಪೂರ್ಣಿಮಾ, ಗೋಲ್ಡ್ ಸುರೇಶ್, ಮಂಜುಳಾ, ಶೆಟ್ಟಿಹಳ್ಳಿ ಸುರೇಶ್, ಲಕ್ಷ್ಮಿ ಹಾಸನ್ ಮತ್ತಿತರರು ನಟಿಸಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗೋಲ್ಡ್ ಸುರೇಶ್ ಹಾಗೂ ತಂಡದ ಕಲಾವಿದರು ಉಪಸ್ಥಿತರಿದ್ದರು.

ಗುಣಮಟ್ಟದ ಕೌಶಲ್ಯಾಧಾರಿತ ಶಿಕ್ಷಣ ಪ್ರಸ್ತುತ ಅವಶ್ಯ

ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ|| ಎಂ.ಆರ್.ಗಂಗಾಧರ್ ಪ್ರತಿಪಾದನೆ

ಮೈಸೂರು,ಫೆ.28(ಎಂಟಿವೈ)–ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಕೌಶಲ್ಯಾಧಾರಿತ ಶಿಕ್ಷಣ ನೀಡಬೇಕು ಎಂದು ಚಾಮರಾಜನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಅಭಿಪ್ರಾಯಪಟ್ಟರು.

ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಭಾಂಗಣದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ವತಿಯಿಂದ ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ 10 ದಿನಗಳ ಸಂಶೋಧನಾ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ವರ್ಷ 25 ಕೋಟಿ ವಿದ್ಯಾರ್ಥಿಗಳು ಶಾಲೆಗೆ ಸೇರುತ್ತಿದ್ದಾರೆ. ಆದರೆ ಇದರಲ್ಲಿ ನಾಲ್ಕು ಕೋಟಿ ವಿದ್ಯಾರ್ಥಿಗಳು ಮಾತ್ರ ಉನ್ನತ ಶಿಕ್ಷಣಕ್ಕೆ ಸೇರುತ್ತಿದ್ದಾರೆ. ಏಕೆಂದರೆ ಉನ್ನತ ಶಿಕ್ಷಣಕ್ಕೆ ನಾವು ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಿಲ್ಲ. ನಾಮಕಾವಸ್ತೆ ಶಿಕ್ಷಣ ಯಾರಿಗೂ ಬೇಕಾಗಿಲ್ಲ. ಕೌಶಲ್ಯಾಧಾರಿತ ಶಿಕ್ಷಣ ಎಲ್ಲರಿಗೂ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.


ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಭಾಂಗಣದಲ್ಲಿ ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಿರುವ 10 ದಿನಗಳ ಕಾರ್ಯಾಗಾರಕ್ಕೆ ಚಾಮರಾಜನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಚಾಲನೆ ನೀಡಿದರು

ಪ್ರತಿವರ್ಷ ವಿಶ್ವವಿದ್ಯಾಲಯಗಳಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಪದವಿ ಪಡೆದು ಹೊರಬರುತ್ತಿದ್ದಾರೆ. ಆದರೆ ಕೈಗಾರಿಕೆಗಳಲ್ಲಿ ಸ್ಕಿಲ್ ಇರುವ ಜನ ಸಿಗುತ್ತಿಲ್ಲ ಎನ್ನುತ್ತಾರೆ. ಆದ್ದರಿಂದ ರಾಜ್ಯ ಸರ್ಕಾರ ಹೆಚ್ಚಾಗಿ ಸ್ಕಿಲ್ ಡೆವಲಪ್‌ಮೆಂಟ್ ತರಬೇತಿ ನೀಡಬೇಕು. ಚಾಮರಾಜನಗರದಿಂದ ಪ್ರತಿದಿನ 4 ರಿಂದ 5 ಸಾವಿರ ಜನ ಕೂಲಿ ಕೆಲಸಕ್ಕೆ ಬೆಂಗಳೂರು, ಮೈಸೂರಿಗೆ ಹೋಗುತ್ತಿದ್ದಾರೆ. ಇಂತಹವರ ಮಕ್ಕಳನ್ನು ಗುರುತಿಸಿ ಶಿಕ್ಷಣದ ಜೊತೆಗೆ ಕೌಶಲ್ಯ ತರಬೇತಿ ನೀಡಬೇಕು. ಸಂಶೋಧನಾ ವಿದ್ಯಾರ್ಥಿಗಳು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಇದೊಂದು ಉತ್ತಮ ಕಾರ್ಯಕ್ರಮವಾಗಿದ್ದು ಸಂಶೋಧನಾ ವಿದ್ಯಾರ್ಥಿಗಳ ಭವಿಷ್ಯಕ್ಕೆ ಅನುಕೂಲವಾಗುತ್ತದೆ. ಇಂತಹ ತರಬೇತಿ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು. ಈ ತರಬೇತಿಯನ್ನು ಸದುಪಯೋಗಪಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಇದೇ ವೇಳೆ ನಿವೃತ್ತ ಪ್ರಾಧ್ಯಾಪಕ ಪ್ರೊ ರಮಣಯ್ಯ ಮಾತನಾಡಿ, ಸಂಶೋಧನೆ ಜನರಿಗೆ ಮತ್ತು ಸಮಾಜಕ್ಕೆ ಉಪಯೋಗವಾಗುವ ಸಂಶೋಧನೆಯಾಗಿರಬೇಕು. ನಿಮ್ಮ ಸಂಶೋಧನೆ ಪಾಠಪ್ರವಚನಗಳಿಗೆ ಉಪಯೋಗವಾಗಬೇಕು. ನೀವು ಪಾಠ ಮಾಡುವಾಗ ಸಾಕ್ಷ್ಯಾಧಾರಿತ ಪಾಠ ಮಾಡಿದರೆ ಉತ್ತಮ ಶಿಕ್ಷಕರಾಗಬಹುದು. ನಿಮ್ಮ ಸಂಶೋಧನೆ ಗುಣಮಟ್ಟದಿಂದ ಕೂಡಿರಬೇಕು ಎಂದರು.

ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್, ಸಂಶೋಧನಾಕಾರಿ ಕೆ.ಶ್ರೀನಿವಾಸ್, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಸಮಾಜಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ ಶೌಕತ್ ಅಜೀಮ್, ಡಾ. ಮೋಹನ್, ಅರುಣ್‌ಪ್ರಭು, ಮಂಜುನಾಥ್, ಭವ್ಯ ಬಿ.ಆರ್., ಗುಣಧರ್, ಹೇಮಚಂದ್ರ, ದಾಕ್ಷಾಯಿಣಿ ಎಂ.ಆರ್., ಪುಷ್ಪಲತಾ, ಮಮತಾ ಆರ್., ವೆಂಕಟೇಶ ಪ್ರಸಾದ್ ಉಪಸ್ಥಿತರಿದ್ದರು.

ಆರು ತಿಂಗಳ ಮಗುವಿನ ಶ್ವಾಸಕೋಶದಲ್ಲಿದ್ದ ಟೀಕಿಯೋಸ್ಟೋಮಿ ಟ್ಯೂಬ್ ಹೊರಕ್ಕೆ

ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಯಿಂದ ಯಶಸ್ವಿ ಚಿಕಿತ್ಸೆ

ಮೈಸೂರು, ಫೆ.28(ಜಿಎ)–ಆರು ತಿಂಗಳ ಮಗುವಿನ ಶ್ವಾಸಕೋಶದಲ್ಲಿ ಸಿಕ್ಕಿಕೊಂಡಿದ್ದ ಟೀಕಿಯೋಸ್ಟೋಮಿ ಟ್ಯೂಬ್ ಅನ್ನು ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯ ವೈದ್ಯರ ತಂಡವು ಆಧುನಿಕ ವೈದ್ಯಕೀಯ ತಂತ್ರಜ್ಞಾನದ ಮೂಲಕ ಹೊರ ತೆಗೆದಿದ್ದಾರೆ.

ಆರು ತಿಂಗಳ ಮಗುವನ್ನು ಅಪೋಲೊ ಬಿಜಿಎಸ್ ಆಸ್ಪತ್ರೆಯ ತುರ್ತು ವಿಭಾಗಕ್ಕೆ ತ್ವರಿತವಾಗಿ ಕರೆದೊಯ್ಯಲಾಯಿತು. ಮಗು ಹುಟ್ಟಿದಾಗಿನಿಂದಲೇ ಶ್ವಾಸನಾಳ ಸಂಪೂರ್ಣ ಮುಚ್ಚಿದ ಸ್ಥಿತಿಯಲ್ಲಿತ್ತು (ಸಬ್‌ಗ್ಲೋಟಿಕ್ ಸ್ಟೆನೋಸಿಸ್), ಇದರಿಂದ ಉಸಿರಾಟಕ್ಕೆ ಟ್ರಾಕಿಯೊಸ್ಟೋಮಿ ಟ್ಯೂಬ್ ಬಳಸಲಾಗಿತ್ತು. ಅದು ಆಕಸ್ಮಿಕವಾಗಿ ಮುರಿದು, ಬಲ ಶ್ವಾಸಕೋಶಕ್ಕೆ ಆಳವಾಗಿ ಸೇರಿಕೊಂಡಿತ್ತು. ಆಸ್ಪತ್ರೆಗೆ ತಲುಪುವ ಮೊದಲೇ, ಮಗುವಿನ ಆಮ್ಲಜನಕ ಮಟ್ಟವು ಅಪಾಯಕಾರಿಯಾಗಿ ಶೇ.70ರಷ್ಟು ಇಳಿದಿತ್ತು. ಹೃದಯ ಸ್ಥಗಿತಗೊಳ್ಳುವ ಸಾಧ್ಯತೆ ಹೆಚ್ಚಾಗಿತ್ತು.

ತುರ್ತು ಚಿಕಿತ್ಸಾ ಕೊಠಡಿಗೆ ತಲುಪಿದ ಮೂರು ನಿಮಿಷಗಳೊಳಗೆ, ಮಗುವಿನ ಸ್ಥಿತಿಯನ್ನು ಸುಧಾರಿಸಿ ಶಸ್ತ್ರಚಿಕಿತ್ಸಾ ಕೊಠಡಿಗೆ ಕರೆದೊಯ್ಯಲಾಯಿತು. ಟ್ಯೂಬ್ ಸಾಮಾನ್ಯ ಸಾಧನಗಳಿಂದ ತೆಗೆದುಹಾಕಲು ತುಂಬಾ ಆಳದಲ್ಲಿ ಸಿಕ್ಕಿಹಾಕಿಕೊಂಡಿತ್ತು. ಅಪೋಲೊ ಬಿಜಿಎಸ್ ಆಸ್ಪತ್ರೆಯಲ್ಲಿ ಆಧುನಿಕ ವೈದ್ಯಕೀಯ ತಂತ್ರಜ್ಞಾನವಿದ್ದ ಹಿನ್ನೆಲೆಯಲ್ಲಿ ಇಎನ್‌ಟಿ ತಂಡದ ಡಾ.ಕವಿತಾ ಪಳ್ಳೇಡ್ ಮತ್ತು ಡಾ. ಹರ್ಷಿತಾ ಎನ್, ಅರಿವಳಿಕೆ ತಂಡದ ಡಾ.ಶೀಮಾ ಅವರ ಸಹಯೋಗದಿಂದ, ಆಧುನಿಕ ಸಾಧನಗಳಾದ ಫೋಗಾರ್ಟಿ ಕ್ಯಾಥೆಟರ್ ಮತ್ತು ಪೀಡಿಯಾಟ್ರಿಕ್ ಎಂಡೋಸ್ಕೋಪ್ ಬಳಸಿ, ಯಾವುದೇ ಹಾನಿ ಮಾಡದೇ ಟ್ಯೂಬ್ ಅನ್ನು ಯಶಸ್ವಿಯಾಗಿ ತೆಗೆದುಹಾಕಲಾಯಿತು.

ಆಮ್ಲಜನಕದ ತೀವ್ರ ಕೊರತೆಯ ಕಾರಣ, ಮೆದುಳಿಗೆ ತೀವ್ರ ಹಾನಿಯಾಗುವ ಅಪಾಯವಿತ್ತು. ಆದರೆ, ತುರ್ತು ವೈದ್ಯಕೀಯ ತಂಡ, ಅರವಳಿಕೆ ತಂಡ, ಮಕ್ಕಳ ತೀವ್ರ ನಿಗಾ ಘಟಕದ ತಂಡ ಮತ್ತು ಕಿವಿ, ಮೂಗು, ಗಂಟಲು ತಜ್ಞರ ತಕ್ಷಣದ ಪ್ರತಿಕ್ರಿಯೆಯ ಫಲವಾಗಿ ಮಗುವಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಲಾಯಿತು. 24 ಗಂಟೆಗಳ ತೀವ್ರ ನಿಗಾ ಘಟಕದಲ್ಲಿ ಬಳಿಕ, ಮಗುವನ್ನು ಸ್ಥಿರವಾದ ಸ್ಥಿತಿಯಲ್ಲಿ, ಸಾಮಾನ್ಯ ಆಮ್ಲಜನಕ ಮಟ್ಟ ಮತ್ತು ಆರೋಗ್ಯಕರ ಶ್ವಾಸಕೋಶಗಳೊಂದಿಗೆ ಡಿಸ್ಚಾರ್ಜ್ ಮಾಡಲಾಯಿತು.


ಯಶಸ್ವಿಯಾಗಿ ಚಿಕಿತ್ಸೆ ನೀಡಿದ ವೈದ್ಯರ ತಂಡ

ಅಪೋಲೊ ಬಿಜಿಎಸ್ ಆಸ್ಪತ್ರೆ ತುರ್ತು ಚಿಕಿತ್ಸೆಯಲ್ಲಿ ತನ್ನ ವಿಶ್ವಮಟ್ಟದ ಸೇವೆಯನ್ನು ನಿರಂತರವಾಗಿ ಮುಂದುವರಿಸಿಕೊಂಡು ಗಂಭೀರ ರೋಗಿಗಳಿಗೆ ಉತ್ತಮ ಫಲಿತಾಂಶಗಳನ್ನು ಒದಗಿಸುತ್ತಿದೆ ಎಂದು ಅಪೋಲೊ ಬಿಜಿಎಸ್ ಆಸ್ಪತ್ರೆಯ ಉಪಾಧ್ಯಕ್ಷ ಎನ್.ಜಿ.ಭರತೀಶ ರೆಡ್ಡಿ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ರೇಣುಕಸ್ವಾಮಿ ಹತ್ಯೆ ಪ್ರಕರಣ

ನಟ ದರ್ಶನ್ ಜಾಮೀನು ಷರತ್ತು ಸಡಿಲಿಕೆ

ದೇಶಾದ್ಯಂತ ಸಂಚರಿಸಲು ಹೈಕೋರ್ಟ್ ಅನುಮತಿ

ಬೆಂಗಳೂರು: ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್ ಮತ್ತು ಸಹಚರರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಅದರಲ್ಲಿ ಅವರು ಬೆಂಗಳೂರು ಬಿಟ್ಟು ಹೊರಹೋಗಬೇಕಾದರೆ ಕೋರ್ಟ್ ಅನುಮತಿ ಪಡೆಯಬೇಕಿತ್ತು ಈಗ ಹೈಕೋರ್ಟ್ ನಿಯಮಗಳನ್ನು ಸಡಿಲಿಸಿದೆ.



ಈ ಮೊದಲು ಸೆಷನ್ಸ್ ಕೋರ್ಟ್ ವ್ಯಾಪ್ತಿ ಬಿಟ್ಟು ತೆರಳುವಂತಿರಲಿಲ್ಲ ಎಂಬ ಷರತ್ತನ್ನು ಕೋರ್ಟ್ ಹಾಕಿತ್ತು. ಷರತ್ತು ಸಡಿಲಿಕೆ ಕೋರಿ ಹೈಕೋರ್ಟ್‌ಗೆ ನಟ ದರ್ಶನ್ ಅರ್ಜಿ ಸಲ್ಲಿಕೆ ಮಾಡಿದ್ದರು. ಅರ್ಜಿಗೆ ಎಸ್‌ಪಿಪಿ ಪ್ರಸನ್ನಕುಮಾರ್ ಆಕ್ಷೇಪಿಸಿದ್ದರು.

ಜಾಮೀನು ಪಡೆಯುವಾಗ ಅನಾರೋಗ್ಯದ ಕಾರಣ ನೀಡಿದ್ದರು. ಈಗ ದೇಶದೆಲ್ಲೆಡೆ ಸುತ್ತಾಡಲು ಬಯಸುತ್ತಿದ್ದಾರೆ ಎಂದು ಪ್ರಸನ್ನ ಕುಮಾರ್ ಆಕ್ಷೇಪಿಸಿದ್ದರು. ಆದರೂ, ಹೈಕೋರ್ಟ್ ದರ್ಶನ್ ಅವರ ಜಾಮೀನು ಷರತ್ತುಗಳನ್ನು ಸಡಿಲಿಸಿದೆ. ದೇಶಾದ್ಯಂತ ಸಂಚಾರ ಮಾಡಬಹುದು, 'ಕೋರ್ಟ್ ಅನುಮತಿಯಿಲ್ಲದೇ ದೇಶ ಬಿಟ್ಟು ತೆರಳುವಂತಿಲ್ಲ ಎಂದು ಹೇಳುವ ಮೂಲಕ ಬಿಗ್ ರಿಲೀಫ್ ನೀಡಿದೆ.

ಜಾಮೀನು ಷರತ್ತುಗಳ ಪ್ರಕಾರ ದರ್ಶನ್, ಅವರ ಗೆಳತಿ ಪವಿತ್ರಾ ಗೌಡ ಮತ್ತು ಇತರ 15 ಆರೋಪಿಗಳು ಫೆಬ್ರವರಿ 25 ರಂದು ಬೆಂಗಳೂರು ಸ್ಥಳೀಯ ನ್ಯಾಯಾಲಯದ ಮುಂದೆ ಹಾಜರಾದರು. ಈ ವೇಳೆ ಇತರ ಆರೋಪಿಗಳು ಪೊಲೀಸರು ತಮ್ಮ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂದು ಹೇಳಿಕೊಂಡರು. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ 131 ದಿನಗಳನ್ನು ಕಸ್ಟಡಿಯಲ್ಲಿ ಕಳೆದ ನಂತರ, ಅ.30, 2024 ರಂದು ದರ್ಶನ್ ಜೈಲಿನಿಂದ ಬಿಡುಗಡೆಯಾದರು.

ದರ್ಶನ್ ಮತ್ತು ಇತರರಿಗೆ ನೀಡಲಾದ ಜಾಮೀನನ್ನು, ಕರ್ನಾಟಕ ಪೊಲೀಸರು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾರೆ. ಸರ್ಕಾರ ಸಲ್ಲಿಸಿದ ಮೇಲ್ಮನವಿ ಅರ್ಜಿಗೆ ಸಂಬಂಧಿಸಿದಂತೆ ಜನವರಿ 24 ರಂದು ಸುಪ್ರೀಂ ಕೋರ್ಟ್ ದರ್ಶನ್, ಪವಿತ್ರಾ ಮತ್ತು ಇತರ ಐದು ಜನರಿಗೆ ನೋಟಿಸ್ ಜಾರಿ ಮಾಡಿತ್ತು. ಜಾಮೀನು ನೀಡುವಾಗ, ನ್ಯಾಯಾಲಯವು ಅವರು ಮತ್ತು ಪ್ರಕರಣದ ಇತರ ಆರೋಪಿಗಳು ಪ್ರತಿ ತಿಂಗಳು ತನ್ನ ಮುಂದೆ ಹಾಜರಾಗುವಂತೆ ಕೇಳಿಕೊಂಡಿತು.

ದರ್ಶನ್ ಅವರು ಇಂದಿನಿಂದ 'ಡೆವಿಲ್' ಸಿನಿಮಾದ ಶೂಟಿಂಗ್‌ನಲ್ಲಿ ಭಾಗಿ ಆಗಲಿದ್ದಾರೆ ಎಂದು ಸುದ್ದಿ ಹರಡಿತ್ತು. ಆದರೆ, ಈ ಸುದ್ದಿಯಲ್ಲಿ ಸತ್ಯವಿಲ್ಲ. ದರ್ಶನ್ ಅವರಿಗೆ ಬೆನ್ನು ನೋವು ಬಹುವಾಗಿ ಕಾಡುತ್ತಿದೆ. ಹೀಗಾಗಿ, ಇದಕ್ಕೆ ಅವರು ಫಿಸಿಯೋಥೆರಪಿ ಚಿಕಿತ್ಸೆ ಪಡೆಯುತ್ತಿದ್ದು, ಬೆನ್ನು ನೋವು ಪೂರ್ಣ ಗುಣಮುಖವಾದ ಬಳಿಕವಷ್ಟೆ ಅವರು ಚಿತ್ರೀಕರಣಕ್ಕೆ ಹೋಗಲಿದ್ದಾರೆ ಎಂದು ಅವರ ಆಪ್ತ ಬಳಗದವರು ಹೇಳಿದ್ದಾರೆ.

ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಂವಿಧಾನದಿಂದಾಗಿ ಸಮಾನ ಅವಕಾಶ ಲಭಿಸಿದೆ

ವಿಧಾನ ಪರಿಷತ್ ಸದಸ್ಯ ಡಾ|| ತಿಮ್ಮಯ್ಯ ಅಭಿಮತ

ಮೈಸೂರು,ಫೆ.28(ಎಂಟಿವೈ)– ಸಮಾಜದ ಕಟ್ಟಕಡೆಯ ಜನರಿಗೂ ಸಮಾನ ಅವಕಾಶಗಳನ್ನು ಸಂವಿಧಾನ ನೀಡಿದ್ದು, ಶೋಷಿತ ಸಮುದಾಯವನ್ನು ಮುಖ್ಯವಾಹಿನಿಗೆ ತರಲು ಡಾ.ಅಂಬೇಡ್ಕರ್ ದಾರಿದೀಪವಾಗಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾರಾಜ ಕಾಲೇಜಿನ ಕನ್ನಡ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಆಯೋಜಿಸಿದ್ದ 'ಭಾರತ ರತ್ನ ಡಾ. ಬಿ.ಆರ್ ಅಂಬೇಡ್ಕರ್ ಓದು' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನದಿಂದ ದಲಿತರಿಗೆ ಸಾಕಷ್ಟು ಉಪಯೋಗ ಆಗಿದೆ. ಅದಕ್ಕೆ ನಾವು ನೀವು ಸಾಕ್ಷಿಯಾಗಿದ್ದೇವೆ. ಶಿಕ್ಷಣ, ಅಭಿವೃದ್ಧಿ, ವೈಜ್ಞಾನಿಕ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳಿಗೂ ಸಂವಿಧಾನ ಅವಕಾಶಗಳನ್ನು ನೀಡಿದೆ.

ಸಂವಿಧಾನ ರಚನೆಯಿಂದ ದಲಿತರಿಗೆ ಹಾಗೂ ಅಸ್ಪೃಶ್ಯರಿಗೆ ಸಮಾನತೆ ಸಿಗುವುದಕ್ಕೆ ನೆರವಾಗಿದೆ. ಸಂವಿಧಾನಕ್ಕೆ ಅಂಬೇಡ್ಕರ್ ಶಕ್ತಿಯಾಗಿದ್ದಾರೆ. ಯುವಕರು ಇಂತಹ ಮಹಾನ್ ವ್ಯಕ್ತಿಗಳ ಚರಿತ್ರೆಯ ಬಗ್ಗೆ ಹಾಗೂ ಪುಸ್ತಕಗಳನ್ನು ಓದಿ ಹೆಚ್ಚಾಗಿ ಅವರ ಬಗ್ಗೆ ಜ್ಞಾನವನ್ನು ಬೆಳೆಸಿಕೊಳ್ಳಬೇಕು. ಅವರ ಆದರ್ಶ ಜೀವನದಿಂದ ಪ್ರೇರೇಪಿತರಾಗಿ ಭವಿಷ್ಯವನ್ನು ಉತ್ತಮವಾಗಿಸಿಕೊಳ್ಳಬೇಕು ಎಂದು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲ ಸಚಿವರಾದ ಎಂ.ಕೆ.ಸವಿತಾ ಮಾತನಾಡಿ, ಬಾಬಾ ಸಾಹೇಬರ ಬಗ್ಗೆ ಸಾಕಷ್ಟು ಪುಸ್ತಕಗಳಿವೆ. ಅವುಗಳನ್ನು ಯುವಕರು ಓದಿ ಅವರ ಬಗ್ಗೆ ತಿಳಿದುಕೊಳ್ಳುವುದರೊಂದಿಗೆ ಅವರ ದಾರಿಯಲ್ಲಿ ಸಾಗಬೇಕು. ಅಂಬೇಡ್ಕರ್ ಅವರು ಅಪಾರ ಜ್ಞಾನ ಸಂಪತ್ತು ಪಡೆದಿದ್ದರೂ, ಹೋದಲ್ಲೆಲ್ಲಾ ಅವಮಾನ, ಶೋಷಣೆ, ದೌರ್ಜನ್ಯಕ್ಕೆ ಒಳಗಾಗಿ ನೋವು ಅನುಭವಿಸಿದರು. ನಾನು ಪಟ್ಟ ಕಷ್ಟ ನನ್ನ ಮುಂದಿನ ಪೀಳಿಗೆ ಅನುಭವಿಸಬಾರದು ಎಂದು ಕಠಿಣ ಕಾನೂನು ಮೂಲಕ ಸಮಾನತೆ, ಸ್ವಾತಂತ್ರ್ಯ, ಹಕ್ಕು ಸಿಗಬೇಕು ಎಂದು ಹೋರಾಟ ಮಾಡಿದರು ಎಂದು ತಿಳಿಸಿದರು.


ಮೈಸೂರಿನ ಮಹಾರಾಜ ಕಾಲೇಜಿನ ಶತಮಾನತ್ಸೋವ ಭವನದಲ್ಲಿ ಆಯೋಜಿಸಿದ್ದ 'ಭಾರತ ರತ್ನ ಡಾ. ಬಿ.ಆರ್ ಅಂಬೇಡ್ಕರ್ ಓದು' ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಉದ್ಘಾಟಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್. ಅಂಬೇಡ್ಕರ್ ಕೇಂದ್ರದ ಪ್ರಾಧ್ಯಾಪಕ ಎಸ್.ನರೇಂದ್ರ ಕುಮಾರ್ ಮಾತನಾಡಿ, ಬಾಬಾ ಸಾಹೇಬರು ಬಾಲ್ಯದಿಂದಲೇ ಹಲವು ರೀತಿಯ ಹಿಂಸೆ, ಶೋಷಣೆಗಳಿಗೆ ಒಳಗಾಗಿದ್ದರು. ತರಗತಿಯ ಹೊರಗಡೆ ಕುಳಿತು ಕಲಿಯಬೇಕಾಯಿತು. ಇದರಿಂದ ಮನನೊಂದು ತನ್ನ ನಿರ್ಧಾರ ಬದಲಿಸಿ ಹೆಚ್ಚಿಗೆ ಓದಬೇಕೆಂದು ನಿರ್ಧರಿಸಿ ಓದುವ ಆಸೆ ಹೆಚ್ಚಿಸಿಕೊಳ್ಳುತ್ತಾರೆ. ನಂತರ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ತರಗತಿಯಲ್ಲಿ ಓದುತ್ತಿರುವಾಗ ಅಸ್ಪೃಶ್ಯರೆಂಬ ಕಾರಣಕ್ಕಾಗಿ ಎಲ್ಲ ಶಿಕ್ಷಕರು ಇವರನ್ನು ಕೀಳಾಗಿ ನೋಡುತ್ತಿದ್ದರು. ಆದರೆ, ಯಾರೂ ಇವರ ಪ್ರತಿಭೆ ಗುರುತಿಸಲಿಲ್ಲ ಎಂದು ವಿಷಾದಿಸಿದರು.

ದೇಶದಾದ್ಯಂತ ವರ್ಗ ಚಳುವಳಿಯನ್ನು ಕ್ರಾಂತಿಕಾರಿ ಚಳುವಳಿಯಾಗಿ ಪರಿವರ್ತಿಸುವಲ್ಲಿ ಅಂಬೇಡ್ಕರ್ ಯಶಸ್ವಿಯಾದರು. ಬ್ರಿಟಿಷ್ ಆಳ್ವಿಕೆಯಲ್ಲಿ, ಲಂಡನ್‌ನಲ್ಲಿ ನಡೆದ ದುಂಡುಮೇಜಿನ ಸಮ್ಮೇಳನದ ಪ್ರತಿನಿಧಿಗಳಲ್ಲಿ ಅವರು ಒಬ್ಬರಾಗಿದ್ದರು, ಅಲ್ಲಿ ಅವರು ದಲಿತ ಜನರಿಗೆ ಪ್ರತ್ಯೇಕ ಮತದಾನವನ್ನು ಒತ್ತಾಯಿಸಿದರು. ಸ್ವತಂತ್ರ ಭಾರತದಲ್ಲಿ ಹೊಸ ಸಂವಿಧಾನವನ್ನು ರಚಿಸಿದಾಗ, ಕರಡು ಸಮಿತಿಯ ಅಧ್ಯಕ್ಷರಾಗಿ ಅಂಬೇಡ್ಕರ್ ಭಾರತದಲ್ಲಿ ಹಿಂದುಳಿದ ಸಮುದಾಯದ ಕಲ್ಯಾಣ ಮತ್ತು ಅಭಿವೃದ್ಧಿಯನ್ನು ಖಾತರಿಪಡಿಸಿದರು. ಇದು ಉದ್ಯೋಗ, ಶಿಕ್ಷಣ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಹಿಂದುಳಿದ ಸಮುದಾಯಗಳಿಗೆ ಮೀಸಲಾತಿಯನ್ನು ಪರಿಚಯಿಸಿತು ಎಂದರು.

ಕಾರ್ಯಕ್ರಮದಲ್ಲಿ ಮಹಾರಾಜ ಕಾಲೇಜಿನ ಆಡಳಿತಾಧಿಕಾರಿಗಳಾದ ಕೆ.ತಿಮ್ಮಯ್ಯ, ಮಹಾರಾಜ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಿ.ವಿಜಯಲಕ್ಷ್ಮಿ, ಮಹಾರಾಜ ಕಾಲೇಜಿನ ಕನ್ನಡ ಸಂಘದ ಸಂಚಾಲಕ ಪ್ರೊ.ಸಿ.ಕೆ.ಪುಟ್ಟ ಸೋಮಾಚಾರ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ವಸಂತರಾಜು.ಎನ್, ಪಿರಿಯಾಪಟ್ಟಣ ತಾಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಂಬಿಕಾ. ಡಿ, ಹುಣಸೂರು ತಾಲೂಕಿನ ಶ್ರೀ ಡಿ ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಸಹ ಪ್ರಾಧ್ಯಾಪಕರಾದ ಎಚ್. ಎಲ್ .ದಿವ್ಯ, ಸರಗೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗ ಸಹಾಯಕ ಪ್ರಾಧ್ಯಾಪಕರಾದ ಶೃತಿ.ಕೆ, ಎಚ್.ಡಿ.ಕೋಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಪ್ರಾಧ್ಯಾಪಕರಾದ ರಾಜಶೇಖರ್.ಎಸ್ ಉಪಸ್ಥಿತರಿದ್ದರು.

ದೇಶ - ವಿದೇಶ

'ಆಸ್ಕರ್' ವಿಜೇತ ನಟ, ಪತ್ನಿ ಶವವಾಗಿ ಪತ್ತೆ

ನ್ಯೂ ಮೆಕ್ಸಿಕೋ: ಹಾಲಿವುಡ್‌ನ ಪ್ರಸಿದ್ಧ ಆಸ್ಕರ್ ಪ್ರಶಸ್ತಿ ವಿಜೇತ ನಟ ಜೀನ್ ಹ್ಯಾಕ್‌ಮನ್(95), ಅವರ ಪತ್ನಿ ಬೆಟ್ಸಿ ಅರಕಾವಾ(63)ಅವರುಗಳು ತಮ್ಮ ನಾಯಿಯೊಂದಿಗೆ ನ್ಯೂ ಮೆಕ್ಸಿಕೋದ ತಮ್ಮ ಮನೆಯಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ಜೀನ್ ಮತ್ತು ಅವರ ಪತ್ನಿಯ ಸಾವಿನ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.



ಜೀನ್ ಹ್ಯಾಕ್‌ಮನ್ ಮತ್ತು ಅವರ ಪತ್ನಿ ಬೆಟ್ಸಿ ಶವವಾಗಿ ಪತ್ತೆಯಾಗಿದ್ದಾರೆ. ಈ ವಿಷಯ ತನಿಖೆಯಲ್ಲಿದೆ. ಈ ಪ್ರಕರಣದಲ್ಲಿ ಯಾವುದೇ ಅಕ್ರಮದ ಲಕ್ಷಣಗಳಿಲ್ಲ ಎಂದು ಪೊಲೀಸ್ ಅಧಿಕಾರಿ ಶೆರಿಫ್ ಮೆಂಡೋಜ ಹೇಳಿದ್ದಾರೆ.

ಅಧಿಕಾರಿಗಳು ಸ್ಥಳದಿಂದ 95ರ ಹರೆಯದ ವೃದ್ಧ ಮತ್ತು 63ರ ಹರೆಯದ ವೃದ್ಧ ಮಹಿಳೆಯ ಶವಗಳನ್ನು ವಶಪಡಿಸಿಕೊಂಡರು. ನಾವು ಈಗ ಸಾವಿಗೆ ಕಾರಣವನ್ನು ನಿರ್ಧರಿಸಲು ಪ್ರಯತ್ನಿಸುತ್ತಿದ್ದೇವೆ ಸರ್ಚ್ ವಾರಂಟ್ ಅನುಮೋದನೆಗಾಗಿ ಕಾಯುತ್ತಿದ್ದೇವೆ ಎಂದಿದ್ದಾರೆ.

ಜೀನ್ ಹ್ಯಾಕ್‌ಮನ್ ಹಾಲಿವುಡ್‌ನಲ್ಲಿ ನಾಲ್ಕು ದಶಕಗಳ ವೃತ್ತಿಜೀವನದಲ್ಲಿ, ಹ್ಯಾಕ್‌ಮನ್ 'ದಿ ಫ್ರೆಂಚ್ ಕನೆಕ್ಷನ್', 'ಸೂಪರ್‌ಮ್ಯಾನ್' ಮತ್ತು 'ದಿ ರಾಯಲ್ ಟೆನೆನ್‌ಬಾಮ್ಸ್' ನಂತಹ ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಜೀನ್ ಅವರ ಪತ್ನಿ ಬೆಟ್ಸಿ ಶಾಸ್ತ್ರೀಯ ಪಿಯಾನೋ ವಾದಕಿಯಾಗಿದ್ದರು.

ಮಾಜಿ ವೈದ್ಯನಿಂದ 300 ಮಕ್ಕಳ ಮೇಲೆ ಅತ್ಯಾಚಾರ!

ಪ್ಯಾರಿಸ್: ಫ್ರಾನ್ಸ್‌ನ ಮಾಜಿ ವೈದ್ಯನೊಬ್ಬ 3 ದಶಕದಿಂದ ಆಸ್ಪತ್ರೆಗೆ ದಾಖಲಾಗುತ್ತಿದ್ದ 300 ಮಕ್ಕಳ ಮೇಲೆ ಅತ್ಯಾಚಾರ ಎಸಗಿರುವ ಅಮಾನವೀಯ ಘಟನೆ ಬೆಳಕಿಗೆ ಬಂದಿದೆ. ಕೋರ್ಟ್‌ನಲ್ಲಿ ವಿಚಾರಣೆ ವೇಳೆ ತಾನೊಬ್ಬ "ಶಿಶುಕಾಮಿ' ಎಂದು ಆತನೇ ಒಪ್ಪಿಕೊಂಡಿದ್ದಾನೆಂದು ಹೇಳಲಾಗಿದೆ.




ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ವೈದ್ಯ ಜೋಯೆಲ್ ಲೇ ಸ್ಕಾನರ್ಕ್ (74) ಅತ್ಯಾಚಾರವೆಸಗಿದ್ದಾನೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ವೈದ್ಯನ ಮನೆಯಲ್ಲಿ ಶೋಧ ನಡೆಸುತ್ತಿದ್ದಾಗ ಆತನೇ ಬರೆದಿರುವ ದಾಖಲೆಗಳು, ಫೋಟೋಗಳು, ವಿಡಿಯೋಗಳು ಸಿಕ್ಕಿವೆ. ಜತೆಗೆ ಗಂಡು–ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರವೆಸಗಿದ್ದ ಎಂದು ಆರೋಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಆತನನ್ನು ವೆನೆಸ್ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಲಾಗಿದೆ. ಈ ವೇಳೆ ಸ್ವತಃ ಆತನೇ ತಪ್ಪು ಒಪ್ಪಿಕೊಂಡಿದ್ದು, ಕಳೆದ 30 ವರ್ಷದಿಂದ ಈ ಕೃತ್ಯ ಎಸಗಿದ್ದಾಗಿ ಹೇಳಿದ್ದಾನೆ. 2020ರಲ್ಲಿಯೂ 4 ಮಕ್ಕಳ ಮೇಲೆ ಅತ್ಯಾಚಾರ ಎಸಗಿದ್ದಕ್ಕೆ ಆತನಿಗೆ 15 ವರ್ಷ ಜೈಲು ಶಿಕ್ಷೆ ವಿಧಿಸಲಾಗಿತ್ತು.

1,778 ಬಂಧಿತ ಪ್ಯಾಲೆಸ್ತೇನಿಗಳ ಬಿಡುಗಡೆ

ಟೆಲ್ ಅವಿವ್: ಕದನ ವಿರಾಮ ಒಪ್ಪಂದದ ಭಾಗವಾಗಿ ಇಸ್ರೇಲ್ ಅಧಿಕಾರಿಗಳು ಬುಧವಾರ 643 ಬಂಧಿತ ಪ್ಯಾಲೆಸ್ತೀನ್ ಭಯೋತ್ಪಾದಕರನ್ನು ಬಿಡುಗಡೆ ಮಾಡಿದ್ದಾರೆ ಎಂದು ಇಸ್ರೇಲ್‌ನ ಜೈಲು ಸೇವಾ ವಿಭಾಗ ಗುರುವಾರ ದೃಢಪಡಿಸಿದೆ.



ಜನವರಿ 19ರಿಂದ ಪ್ಯಾಲಿಸ್ತೀನ್ ಒಟ್ಟು 33 ಇಸ್ರೇಲ್‌ನ ಒತ್ತೆಯಾಳುಗಳನ್ನು ಹಂತ ಹಂತವಾಗಿ ಬಿಡುಗಡೆ ಮಾಡಿದೆ. ಇದಕ್ಕೆ ಬದಲಾಗಿ ಇಸ್ರೇಲ್, ಇದುವರೆಗೂ ಒಟ್ಟು 1,778 ಪ್ಯಾಲೆಸ್ತೇನಿಯನ್ನರನ್ನು ಬಿಡುಗಡೆ ಮಾಡಿದೆ.

ಬುಧವಾರ ರಾತ್ರಿ ಪರಸ್ಪರ ಒತ್ತೆಯಾಳುಗಳ ವಿನಿಮಯದ ಮೂಲಕ ಕದನ ವಿರಾಮ ಒಪ್ಪಂದದ ಮೊದಲ ಹಂತವನ್ನು ಯಶಸ್ವಿಯಾಗಿ ಪೂರೈಸಲಾಗಿದೆ. ಉಳಿದ 59 ಒತ್ತೆಯಾಳುಗಳ ಭವಿಷ್ಯವನ್ನು ಮಾತುಕತೆಯ ಮೂಲಕ ನಿರ್ಧರಿಸಲಾಗುತ್ತದೆ.

ಅಕ್ಟೋಬರ್ 7 ರಂದು ಗಾಜಾ ಗಡಿಯ ಸಮೀಪ ಇಸ್ರೇಲ್ ಮೇಲೆ ಹಮಾಸ್ ದಾಳಿ ಮಾಡಿ ಕನಿಷ್ಠ 1,200 ಜನರನ್ನು ಕೊಂದು ಹಾಕಿತ್ತು. ಅಷ್ಟೇ ಅಲ್ಲ 252 ಇಸ್ರೇಲಿಗಳು ಮತ್ತು ಕೆಲ ವಿದೇಶಿಯರನ್ನು ಒತ್ತೆಯಾಳುಗಳಾಗಿ ಇಟ್ಟುಕೊಂಡಿತ್ತು. ಇದಕ್ಕೆ ಪ್ರತೀಕಾರವಾಗಿ ಇಸ್ರೇಲ್, ಪ್ಯಾಲಿಸ್ತೇನ್ ಮೇಲೆ ಯುದ್ಧ ಘೋಷಿಸಿತ್ತು.

ಉತ್ತರಾಖಂಡದಲ್ಲಿ ಭಾರೀ ಹಿಮಪಾತ: 47 ಬಿಆರ್‌ಓ ಕಾರ್ಮಿಕರು ಸಿಲುಕಿರುವ ಶಂಕೆ

ಚಮೋಲಿ: ಉತ್ತರಾಖಂಡದ ಚಮೋಲಿ ಜಿಲ್ಲೆಯ ಮಾನಾ ಬಳಿ ಶುಕ್ರವಾರ ಸಂಭವಿಸಿದ ಭಾರೀ ಹಿಮಪಾತದಲ್ಲಿ ಗಡಿ ರಸ್ತೆ ಸಂಸ್ಥೆ(ಬಿಆರ್‌ಓ) ಕನಿಷ್ಠ 47 ಕಾರ್ಮಿಕರು ಹಿಮದಡಿಯಲ್ಲಿ ಸಿಲುಕಿಕೊಂಡಿರುವ ಶಂಕೆ ವ್ಯಕ್ತವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಮಾನಾದ ಗಡಿ ಪ್ರದೇಶದ ಗಡಿ ರಸ್ತೆ ಸಂಸ್ಥೆ ಶಿಬಿರದ ಬಳಿ ಭಾರೀ ಹಿಮಪಾತ ಸಂಭವಿಸಿದ್ದು, ರಸ್ತೆ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ 57 ಕಾರ್ಮಿಕರು ಸಿಲುಕಿಕೊಂಡಿದ್ದಾರೆ. ಅವರಲ್ಲಿ 10 ಕಾರ್ಮಿಕರನ್ನು ರಕ್ಷಿಸಿ ಮಾನಾ ಬಳಿಯ ಸೇನಾ ಶಿಬಿರಕ್ಕೆ ಕಳುಹಿಸಲಾಗಿದೆ ಎಂದು ಉತ್ತರಾಖಂಡ ಪೊಲೀಸ್ ವಕ್ತಾರ ನೀಲೇಶ್ ಆನಂದ್ ಭರ್ನೆ ತಿಳಿಸಿದ್ದಾರೆ. ಮೂರರಿಂದ ನಾಲ್ಕು ಆಂಬ್ಯುಲೆನ್ಸ್‌ಗಳನ್ನು ಕಳುಹಿಸಲಾಗಿದೆ. ಆದರೆ ಭಾರೀ ಹಿಮಪಾತದಿಂದಾಗಿ, ರಕ್ಷಣಾ ತಂಡ ಸ್ಥಳಕ್ಕೆ ತಲುಪಲು ಸಾಕಷ್ಟು ತೊಂದರೆಗಳನ್ನು ಎದುರಿಸುತ್ತಿದೆ ಎಂದು ಬಿಆರ್‌ಓ(ಗಡಿ ರಸ್ತೆ ಸಂಸ್ಥೆ) ಕಾರ್ಯನಿರ್ವಾಹಕ ಎಂಜಿನಿಯರ್ ಸಿಆರ್ ಮೀನಾ ಅವರು ಹೇಳಿದ್ದಾರೆ.

ಪುಣೆಯ ಬಸ್‌ನಲ್ಲಿ ಅತ್ಯಾಚಾರ ಪ್ರಕರಣ: ಆರೋಪಿ ಬಂಧನ

ಪುಣೆ: ಪುಣೆಯ ಸ್ವಾರ್ಗೇಟ್ ಬಸ್ ನಿಲ್ದಾಣದಲ್ಲಿ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.



ಬಂಧಿತ ಆರೋಪಿಯನ್ನು ಪುಣೆಯ ಗುನಾಟ್ ಗ್ರಾಮದ ದತ್ತಾತ್ರಯ ರಾಮದಾಸ್ ಗಡೆ (37) ಎಂದು ಗುರುತಿಸಲಾಗಿದೆ. ಆರೋಪಿಯನ್ನು ಶಿರೂರಿನಲ್ಲಿ ಬಂಧಿಸಿರುವ ಪೊಲೀಸರು, ಪುಣೆಗೆ ಕರೆತರುತ್ತಿದ್ದಾರೆ.

ಬಂಧಿತ ಆರೋಪಿ ಮಂಗಳವಾರ ಬೆಳಿಗ್ಗೆ ಪೊಲೀಸ್ ಠಾಣೆಯಿಂದ 100 ಮೀಟರ್ ದೂರದಲ್ಲಿದ್ದ ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸ್ವಾರ್ಗೇಟ್ ಬಸ್ ನಿಲ್ದಾಣದಲ್ಲಿ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ್ದ.

ಆರಂಭದಲ್ಲಿ ಮಹಿಳೆಯನ್ನು ಅಕ್ಕ ಎಂದು ಕರೆದು ಮಾತಾಡಿಸಿದ್ದ ಆರೋಪಿ, ಬಳಿಕ ಸತಾರಾಕ್ಕೆ ಹೋಗುವ ಬಸ್ ಮತ್ತೊಂದು ಪ್ಲಾಟ್‌ಫಾರ್ಮ್‌ಗೆ ಬಂದಿದೆ ಎಂದು ಹೇಳಿ, ನಿಲ್ಲಿಸಿದ್ದ ಖಾಲಿ ಬಸ್ ಬಳಿ ಕರೆದೊಯ್ದಿದ್ದ. ಮಹಿಳೆ ಬಸ್ಸಿನೊಳಗೆ ಲೈಟ್ ಆನ್ ಇರದ ಕಾರಣ ಬಸ್ ಹತ್ತಲು ಹಿಂಜರಿದಿದ್ದಳು. ಈ ವೇಳೆ ಇದೇ ಸರಿಯಾದ ಬಸ್ ಎಂದು ಹೇಳಿ ಒಳಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದಾನೆ ಎಂದು ಮಹಿಳೆ ಆರೋಪಿಸಿದ್ದಾಳೆ.

ಎಲ್ಲಾ ಭಾಷಿಕರೂ ಕೊಡಗಿನ ಇತಿಹಾಸ ತಿಳಿಯಬೇಕು

● ಮಾಜಿ ಸಿಎಂ ಸದಾನಂದಗೌಡ ಹೇಳಿಕೆ ● ಅರೆಭಾಷೆ ಸಾಹಿತ್ಯ ಅಕಾಡೆಮಿಯಿಂದ ಪ್ರಶಸ್ತಿ ಪ್ರದಾನ



ಮಡಿಕೇರಿ ಕೊಡಗು ಗೌಡ ಸಮಾಜದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಡಿಕೇರಿ, ಫೆ.28–ಕೊಡಗು ಜಿಲ್ಲೆಯಲ್ಲಿ ಕೊಡವ, ಅರೆಭಾಷಿಕರು ಸೇರಿದಂತೆ ಹಲವು ಸಣ್ಣ ಸಣ್ಣ ಭಾಷಿಕರು ಬದುಕಿನ ಬಂಡಿ ಸಾಗಿಸುತ್ತಿದ್ದು, ಎಲ್ಲಾ ಭಾಷಿಕರೂ ಕೊಡಗಿನ ಇತಿಹಾಸ ತಿಳಿದು, ಅಭಿವೃದ್ಧಿಯತ್ತ ಮುನ್ನಡೆಯಬೇಕು ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಹೇಳಿದರು.

ನಗರದ ಕೊಡಗು ಗೌಡ ಸಮಾಜದಲ್ಲಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ಶುಕ್ರವಾರ ನಡೆದ 2022–23ನೇ ಸಾಲಿನ ಪ್ರಶಸ್ತಿ ಪ್ರದಾನ, ಸಂಶೋಧನಾ ಪ್ರಬಂಧ ಮತ್ತು ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, 'ಜಾತಿ, ಭಾಷೆ ಮೇಲೆ ಸಂಘರ್ಷ ನಡೆಸದೆ ಸಾಮರಸ್ಯದ ಬದುಕು ಕಾಣಬೇಕು. ಜೊತೆಗೆ ಎಲ್ಲರೂ ಒಂದಾಗಿ ಸಾಗಬೇಕು. ಯಾವುದೇ ಸಣ್ಣ ಭಾಷೆಯಾದರೂ ಅದು ಉಳಿಯಬೇಕು ಎಂದು ಅಭಿಪ್ರಾಯಪಟ್ಟರು.

ಮಕ್ಕಳಿಗೆ ಅರೆಭಾಷೆ ಜೊತೆಗೆ ನಾಡಿನ ಭಾಷೆ ಕನ್ನಡ, ಸಂಪನ್ಮೂಲ ಭಾಷೆ ಇಂಗ್ಲಿಷ್ ಕಲಿಸೋಣ. ಆದರೆ, ಮನೆಯಲ್ಲಿ ಅರೆಭಾಷೆ ಕಲಿಸುವಂತಾಗಬೇಕು ಮತ್ತು ಮಾತನಾಡುವಂತಾಗಬೇಕು. ಅರೆಭಾಷೆ ಕಲೆ, ಸಂಸ್ಕೃತಿ, ಸಾಹಿತ್ಯ, ಆಚಾರ–ವಿಚಾರ ಬೆಳೆಸಬೇಕು. ವಿಶ್ವದಲ್ಲಿ ಏಳು ಸಾವಿರಕ್ಕೂ ಹೆಚ್ಚು ಸಣ್ಣ ಭಾಷೆಗಳಿದ್ದು, ಹಾಗೆಯೇ ಭಾರತದಲ್ಲಿ ಮೂರೂವರೆ ಸಾವಿರಕ್ಕೂ ಹೆಚ್ಚು ಸಣ್ಣ ಸಣ್ಣ ಭಾಷೆಗಳಿವೆ ಎಂದು ತಿಳಿಸಿದರು.

ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ನಾಡಿನಲ್ಲಿ ಕೊಡಗು ತನ್ನದೇ ವೈಶಿಷ್ಟತೆ ಹೊಂದಿದೆ. ಜಿಲ್ಲೆಯಲ್ಲಿ ಕೊಡವ ಮತ್ತು ಅರೆಭಾಷೆ ಸೇರಿದಂತೆ ಹಲವು ಸಣ್ಣ ಭಾಷಿಕರು ಇರುವುದು ಒಂದು ರೀತಿ ವೈಶಿಷ್ಟ್ಯವೇ. ಅರೆಭಾಷಿಗ ಜನಾಂಗದಲ್ಲಿರುವ ಸಂಸ್ಕೃತಿ, ಸಂಪ್ರದಾಯ, ಆಚಾರ–ವಿಚಾರ ಉಳಿಯಬೇಕು. ಸಂಸ್ಕೃತಿ, ಕಲೆ, ಪರಂಪರೆ ಉಳಿದಲ್ಲಿ ಕೊಡಗು ಜಿಲ್ಲೆ ಉಳಿಯಲು ಸಾಧ್ಯ ಎಂದರು.

ಬೆಂಗಳೂರಿನ ಶಿಕ್ಷಣ ತಜ್ಞ ಪ್ರೊ.ಕೆ.ಇ. ರಾಧಾಕೃಷ್ಣ ಮಾತನಾಡಿ, ನನ್ನ ಮನೆಯ ಭಾಷೆ ತುಳು ಆಗಿದೆ. ಕಲಿತದ್ದು ಅರೆಭಾಷೆ. ಉಪ ಭಾಷೆ ಹಾಗೂ ಉಪ ಸಂಸ್ಕೃತಿ ಉಳಿಸಿ ಬೆಳೆಸಬೇಕು. ಅಕಾಡೆಮಿ ಚಟುವಟಿಕೆಗಳು ವಿಶಾಲವಾಗಿರಬೇಕು. ಎಲ್ಲರೂ ಒಂದಾಗಿ ನಡೆಯಬೇಕು. ಅಮರ ಸುಳ್ಯದ ಕುರಿತು ಸ್ಮಾರಕ ನಿರ್ಮಾಣವಾಗಬೇಕು ಎಂದು ಒತ್ತಾಯಿಸಿದರು.

ಶಾಸಕ ಡಾ.ಮಂತರ್‌ಗೌಡ ಮಾತನಾಡಿ, ಹಿರಿಯರಿಗೆ ಸನ್ಮಾನಿಸಿದಲ್ಲಿ ಯುವ ಜನರಿಗೆ ಸ್ಫೂರ್ತಿಯಾಗುತ್ತದೆ. ಎಲ್ಲರೂ ಪಕ್ಷಾತೀತವಾಗಿ ಒಂದಾಗಬೇಕು. ನಾಡಿನಲ್ಲಿ ಹಿಂದಿ ಭಾಷೆ ಹೇರಿಕೆ ಮಾಡುತ್ತಿದ್ದು, ಮಾತೃ ಭಾಷೆಯನ್ನು ಯಾವುದೇ ಕಾರಣಕ್ಕೂ ಮರೆಯಬಾರದು ಎಂದರು.

ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ ಮಾತನಾಡಿ, ಅಕಾಡೆಮಿ ಚಟುವಟಿಕೆಗೆ ಇನ್ನಷ್ಟು ಅಗತ್ಯ ಸಹಕಾರ ನೀಡುವಂತಾಗಬೇಕು. ಸಮಾಜದಲ್ಲಿ ಉತ್ತಮ ಕೆಲಸ ಮಾಡುವವರನ್ನು ಗುರುತಿಸುತ್ತಿರುವುದು ಶ್ಲಾಘನೀಯ. ಅರೆಭಾಷೆ ಅಕಾಡೆಮಿ ಸ್ಥಾಪನೆ ಉದ್ದೇಶ ಇಂತಹ ಕಾರ್ಯಕ್ರಮಗಳ ಮೂಲಕ ಸಾರ್ಥಕವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿರು.

ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಅಲ್ಟ್ರಾ ಬಯೋಕೆಮ್ ಇಂಡಿಯಾ ಕಂಪನಿ ಸಂಸ್ಥಾಪಕ ನಿರ್ದೇಶಕ ತೇನನ ರಾಜೇಶ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಚಂದ್ರಾವತಿ ಬಡ್ಡಡ್ಕ, ಅಕಾಡೆಮಿ ಸದಸ್ಯರಾದ ಲತಾ ಪ್ರಸಾದ್ ಕುದ್ಪಾಜೆ, ಡಾ.ಎನ್.ಎ.ಜ್ಞಾನೇಶ್, ಮೋಹನ ಪೊನ್ನಚನ, ತೇಜಕುಮಾರ್ ಕುಡೆಕಲ್ಲು, ಲೋಕೇಶ್ ಊರುಬೈಲು, ಸಂದೀಪ್ ಪುಳಕಂಡ, ಗೋಪಾಲ್ ಪೆರಾಜೆ, ಸೂದನ ಈರಪ್ಪ, ವಿನೋದ್ ಮೂಡಗದ್ದೆ, ಪಿ.ಎಸ್.ಕಾರ್ಯಪ್ಪ, ಕುದುಪಜೆ ಕೆ.ಪ್ರಕಾಶ್, ಚಂದ್ರಶೇಖರ ಪೆರಾಲು, ರಿಜಿಸ್ಟ್ರಾರ್ ಚಿನ್ನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಇತರರು ಇದ್ದರು.

ವಿವಿಧ ಸಾಧಕರಿಗೆ ಪ್ರಶಸ್ತಿ ಪ್ರದಾನ

2022ನೇ ಪ್ರಶಸ್ತಿ ಪಡೆದ ಡಾ.ಕಾವೇರಿಮನೆ ಬೋಜಪ್ಪ (ಸಂಶೋಧನೆ ಮತ್ತು ಅರೆಭಾಷೆ ಸಾಹಿತ್ಯ ಕ್ಷೇತ್ರ), ಡಾ.ಕೆ.ವಿ.ಚಿದಾನಂದ (ಶಿಕ್ಷಣ ಮತ್ತು ವೈದ್ಯಕೀಯ ಸೇವೆ), ತುಂತಜೆ ವೆಂಕಟೇಶ್ (ಗಣೇಶ್) (ಅರೆಭಾಷೆ ಮತ್ತು ಸಂಸ್ಕೃತಿ ಸೇವೆ) ಹಾಗೂ 2023ನೇ ಪ್ರಶಸ್ತಿ ಪಡೆದ ಕುಯಿಂತೋಡು ದಾಮೋದರ (ಅರೆಭಾಷೆ ಸಾಹಿತ್ಯ ಮತ್ತು ಶೈಕ್ಷಣಿಕ ಸೇವೆ), ಎ.ಕೆ.ಹಿಮಕರ(ಅರೆಭಾಷೆ ಅಧ್ಯಯನ ಮತ್ತು ಸಂಶೋಧನೆ) ಮತ್ತು ಕೂಡಕಂಡಿ ಕಾವೇರಮ್ಮ ಸೋಮಣ್ಣ (ಅರೆಭಾಷೆ ಸಾಧಕಿ ಮತ್ತು ಕಲಾ ಪೋಷಕರು) ಅವರನ್ನು ಸನ್ಮಾನಿಸಲಾಯಿತು.

ಕೊಡಗು ವಿವಿ ಉಳಿವಿಗಾಗಿ ಎಬಿವಿಪಿ, ಬಿಜೆಪಿ ಪಾದಯಾತ್ರೆ



ಕೊಡಗು ವಿವಿ ಉಳಿಸುವಂತೆ ಒತ್ತಾಯಿಸಿ ಸಂಸದ ಯದುವೀರ್, ಮಾಜಿ ಶಾಸಕ ಅಪ್ಪಚ್ಚು ರಂಜನ್, ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ನೇತೃತ್ವದಲ್ಲಿ ಪಾದಯಾತ್ರೆ ನಡೆಸಲಾಯಿತು.

ಮಡಿಕೇರಿ, ಫೆ.28–ಅನುದಾನದ ನೆಪವೊಡ್ಡಿ ಕೊಡಗು ವಿಶ್ವವಿದ್ಯಾನಿಲಯ ರದ್ದು ಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ಆರೋಪಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮತ್ತು ಕೊಡಗು ಬಿಜೆಪಿ ಕಾರ್ಯಕರ್ತರು ಶುಕ್ರವಾರ ಚಿಕ್ಕಅಳುವಾರದ ಕೊಡಗು ವಿವಿ ಕ್ಯಾಂಪಸ್‌ನಿಂದ ಕುಶಾಲನಗರವರೆಗೆ ಬೃಹತ್ ಪಾದಯಾತ್ರೆ ನಡೆಸಿದರು.

ವಿವಿ ಕ್ಯಾಂಪಸ್‌ನಿಂದ ಮಾಜಿ ಶಾಸಕ ಅಪ್ಪಚ್ಚು ರಂಜನ್, ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಬಿ.ಬಿ.ಭಾರತೀಶ್ ಅವರ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ಮತ್ತು ಬಿಜೆಪಿ ಕಾರ್ಯಕರ್ತರು ಕುಶಾಲನಗರದವರೆಗೆ ಒಟ್ಟು 16 ಕಿ.ಮೀ. ಪಾದಯಾತ್ರೆ ನಡೆಸುವ ಮೂಲಕ ಸರ್ಕಾರದ ನಿರ್ಧಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ವಿದ್ಯಾರ್ಥಿಗಳು ಈ ದೇಶದ ಶಕ್ತಿ ವಿದ್ಯಾರ್ಥಿಗಳು ಗುಡುಗಿದರೆ ವಿಧಾನಸೌಧ ನಡುಗುವುದು, ಎಬಿವಿಪಿ ಕೇಳುತ್ತಿದೆ ಕೊಡಗು ವಿವಿ ಉಳಿಸಿ ಕೊಡಿ' ಎಂಬಿತ್ಯಾದಿ ಘೋಷಣೆಗಳು ಪಾದಯಾತ್ರೆಯ ಉದ್ದಕ್ಕೂ ಮೊಳಗಿದವು. ಚಿಕ್ಕಅಳುವಾರ, ಕೂಡಿಗೆ, ಹೆಬ್ಬಾಲೆ, ಕಣಿವೆ ಮಾರ್ಗವಾಗಿ ಕುಶಾಲನಗರದವರೆಗೆ ಪಾದಯಾತ್ರೆ ಸಾಗಿ ಬಂತು. ಆಯಾ ಗ್ರಾಮಗಳ ಬಳಿ ಪಾದಯಾತ್ರೆ ಆಗಮಿಸುತ್ತಿದ್ದಂತೆ ಅಲ್ಲಿನ ಗ್ರಾಮಸ್ಥರು ವಿದ್ಯಾರ್ಥಿಗಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಪಾದಯಾತ್ರೆ ಸ್ವಾಗತಿಸಿದರು. ಕುಶಾಲನಗರ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಕೆಲಕಾಲ ಮಾನವ ಸರಪಳಿ ರಚಿಸಿ ರಸ್ತೆ ತಡೆ ನಡೆಸಲಾಯಿತು. ಬಳಿಕ ತಹಸೀಲ್ದಾರ್ ಕಿರಣ್ ಗೌರಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ಇದೇ ವೇಳೆ ಮಾಜಿ ಶಾಸಕ ಅಪ್ಪಚ್ಚು ರಂಜನ್ ಮಾತನಾಡಿ, ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಅವಧಿಯಲ್ಲಿ ಕೊಡಗು ವಿವಿ ಪ್ರಾರಂಭಕ್ಕೆ 15 ಕೋಟಿ ರೂ. ಅನುದಾನ ಒದಗಿಸಿದ್ದರು. ವಿವಿ ಬಳಿ ಹಣ ಇಲ್ಲದ ಸಂದರ್ಭ ನನ್ನ ಕೈಯಿಂದಲೇ 5 ಲಕ್ಷ ರೂ. ವೆಚ್ಚ ಮಾಡಿ ವಿವಿ ಆವರಣದಲ್ಲಿ ಕಾಂಪೌಂಡ್ ನಿರ್ಮಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಡಗು ವಿವಿ ಉದ್ಘಾಟಿಸಿದ್ದಾರೆ. ಹೀಗಿದ್ದರೂ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಒಂದು ನಯಾ ಪೈಸೆಯನ್ನೂ ವಿವಿಗೆ ನೀಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಯದುವೀರ್ ಬೆಂಬಲ: ಕೊಡಗು ವಿವಿ ರದ್ದುಗೊಳಿಸದಂತೆ ಎಬಿವಿಪಿ ಪಾದಯಾತ್ರೆಗೆ ಕೊಡಗು–ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬೆಂಬಲ ಸೂಚಿಸಿದರು. ಹೆಬ್ಬಾಲೆ ಬಳಿ ವಿದ್ಯಾರ್ಥಿಗಳ ಪಾದಯಾತ್ರೆಗೆ ಕೈ ಜೋಡಿಸಿದ ಸಂಸದರು, ಕುಶಾಲನಗರದವರೆಗೆ ವಿದ್ಯಾರ್ಥಿಗಳೊಂದಿಗೆ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದರು.

ಇದೇ ವೇಳೆ ಮಾತನಾಡಿದ ಸಂಸದರು, ಕಾಂಗ್ರೆಸ್ ಸರ್ಕಾರ ಕೊಡಗು ಸೇರಿ ರಾಜ್ಯದ 9 ವಿವಿಗಳನ್ನು ರದ್ದು ಮಾಡುವ ನಿರ್ಧಾರ ಕೈಗೊಂಡಿದೆ. ಇದು ಸರಿಯಾದ ಕ್ರಮವಲ್ಲ. ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ಮತ್ತು ವೃತ್ತಿ ಜೀವನ ನಡೆಸಲು ವಿ.ವಿಗಳಿಂದ ಮಾತ್ರ ಸಾಧ್ಯ. ಕೊಡಗು ವಿವಿಯಲ್ಲಿ ಪರಿಶಿಷ್ಟ ವರ್ಗದ ಮಕ್ಕಳೇ ಹೆಚ್ಚಾಗಿ ವ್ಯಾಸಂಗ ಮಾಡುತ್ತಿದ್ದಾರೆ. ಕೊಡಗು ವಿವಿ ರದ್ದು ಮಾಡಿದರೆ ಆ ಸಮುದಾಯಕ್ಕೆ ಅನ್ಯಾಯವಾಗಲಿದೆ. ರಾಜ್ಯದ ಎಲ್ಲಾ 9 ವಿವಿಗಳ ಪರ ಸರ್ಕಾರ ನಿಲ್ಲುವವರೆಗೂ ನಮ್ಮ ಹೋರಾಟ ಮುಂದುವರೆಯುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭ ಎಬಿವಿಪಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯೆ ಮಂದಾರ, ಜಿಲ್ಲಾ ಪ್ರಮುಖರಾದ ಅಂಬಿಕಾ, ವಿಭಾಗ ವಿದ್ಯಾರ್ಥಿನಿ ಪ್ರಮುಖ ಅಮೃತಾಂಬ, ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಗಂಧರ್ವ, ಕೌಶಲ್ಯ, ಬಿಜೆಪಿ ತಾಲೂಕು ಅಧ್ಯಕ್ಷ ಗೌತಮ್, ಉಪಾಧ್ಯಕ್ಷ ಬಿ.ಬಿ. ಅಜೀಶ್, ಮಹಿಳಾ ಮೋರ್ಚಾ ಮಂಡಲ ಅಧ್ಯಕ್ಷೆ ಕವಿತಾ ವಿರೂಪಾಕ್ಷ, ನಗರಾಧ್ಯಕ್ಷ ಎಂ.ಎಂ.ಚರಣ್, ವಿವಿಧ ಘಟಕಗಳ ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

ಸರ್ಕಾರದ ಕ್ರಮ ಖಂಡಿಸಿ ದೈವ ನರ್ತಕರ ಪ್ರತಿಭಟನೆ



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಎದುರು ಸರ್ಕಾರದ ಕ್ರಮ ಖಂಡಿಸಿ ದೈವ ಆರಾಧಕರು ಮತ್ತು ದೈವ ನರ್ತಕರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಫೆ.28– ದೈವ ಆರಾಧನೆಯನ್ನು ಶಾಲೆಗಳ ರಂಗೋತ್ಸವದಲ್ಲಿ ಪ್ರದರ್ಶಿಸಲು ಅವಕಾಶ ನೀಡಿ ಸುತ್ತೋಲೆ ಹೊರಡಿಸಿರುವ ಸರ್ಕಾರದ ಕ್ರಮವನ್ನು ಖಂಡಿಸಿ ಕೊಡಗು ಜಿಲ್ಲಾ ದೈವ ಆರಾಧಕರು ಮತ್ತು ದೈವ ನರ್ತಕರ ಸಂಘ ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿತು.

ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಸಂಘದ ಪ್ರಮುಖರು, ದೈವ ಆರಾಧಕರು ಮತ್ತು ದೈವ ನರ್ತಕರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಸಂಘದ ಸ್ಥಾಪಕಾಧ್ಯಕ್ಷ ಪಿ.ಎಂ.ರವಿ ಮಾತನಾಡಿ, ದೈವ ಆರಾಧನೆ ಕರಾವಳಿ ಸೇರಿದಂತೆ ಕೊಡಗು ಜಿಲ್ಲೆಯಲ್ಲೂ ಅನೇಕ ವರ್ಷದಿಂದ ಬಹುಮುಖ್ಯ ನಂಬಿಕೆ ಮತ್ತು ಆರಾಧನೆ ಪದ್ಧತಿಯಾಗಿದೆ. ದೈವ ಆರಾಧನೆಯನ್ನು ಶಾಲೆಗಳ ರಂಗೋತ್ಸವ ಕಾರ್ಯಕ್ರಮದಲ್ಲಿ ಪ್ರದರ್ಶಿಸಲು ಸುತ್ತೋಲೆ ಹೊರಡಿಸಿರುವ ಸರ್ಕಾರದ ಕ್ರಮ ಖಂಡನೀಯ ಎಂದರು.


ಈ ಸುತ್ತೋಲೆಯಿಂದ ದೈವ ನರ್ತನ ಮಾಡುವ ಸೀಮಿತ ಸಮುದಾಯಕ್ಕೆ ಅವಮಾನ ಮಾಡಲಾಗಿದೆ. ಅಲ್ಲದೇ, ದೈವ ನಂಬಿಕೆಯ ಮೇಲೆಯೇ ಸವಾರಿ ಮಾಡಿದಂತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ತಕ್ಷಣ ಶಿಕ್ಷಣ ಸಚಿವರ ಮೂಲಕ ಸುತ್ತೋಲೆಯನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು. ಬಳಿಕ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಸಂಘದ ಪ್ರಮುಖರಾದ ಹರೀಶ್ ಜಿ.ಆಚಾರ್ಯ, ಬಿ.ಎ.ಜನಾರ್ಧನ, ದಿನೇಶ್, ರಮೇಶ್ ಮತ್ತಿತರರು ಪಾಲ್ಗೊಂಡಿದ್ದರು.

ಗಾಂಜಾ ಮಾರಾಟ, ಸೇವನೆ : ಇಬ್ಬರ ಬಂಧನ



ವಿಷ್ಣು



ಸತ್ತಾರ್ ರಫಿಕ್

ಸುಂಟಿಕೊಪ್ಪ, ಫೆ.28–ಕಾಂಡಕೊಲ್ಲಿ ರಸ್ತೆಯ ಚಾಮುಂಡೇಶ್ವರಿ ದೇವಾಲಯ ಬಳಿ ಗಾಂಜಾ ಮಾರಾಟ ಮತ್ತು ಸೇವಿಸುತ್ತಿದ್ದ ಇಬ್ಬರನ್ನು ಸುಂಟಿಕೊಪ್ಪ ಠಾಣೆ ಪೊಲೀಸರು ಮಾಲು ಸಮೇತ ಬಂಧಿಸಿದ್ದಾರೆ.

ಸುಂಟಿಕೊಪ್ಪ 2ನೇ ವಿಭಾಗದ ನಿವಾಸಿ ಸತ್ತಾರ್ ರಫಿಕ್ (40) ಮತ್ತು ಗದ್ದೆಹಳ್ಳ ನಿವಾಸಿ ವಿಷ್ಣು(21) ಬಂಧಿತರು. ಇಬ್ಬರು ಸುಂಟಿಕೊಪ್ಪ–ಕಾಂಡನಕೊಲ್ಲಿ ರಸ್ತೆಯಲ್ಲಿರುವ ಚಾಮುಂಡೇಶ್ವರಿ ದೇವಾಲಯ ಸಮೀಪದಲ್ಲಿ ಗಾಂಜಾ ಮಾರಾಟ–ಸರಬರಾಜಿಗೆ ಯತ್ನಿಸುತ್ತಿದ್ದರು. ಈ ವೇಳೆ ದಾಳಿ ನಡೆಸಿದ ಪೊಲೀಸರು ಬಂಧಿಸಿ, 360 ಗ್ರಾಂ ಗಾಂಜಾ ವಶಪಡಿಸಿಕೊಂಡು ನ್ಯಾಯಾಲಯದ ವಶಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ. ಗಂಗಾಧರಪ್ಪ, ಕುಶಾಲನಗರ ವೃತ್ತ ನಿರೀಕ್ಷಕ ಕೆ.ರಾಜೇಶ್, ಸುಂಟಿಕೊಪ್ಪ ಠಾಣಾಧಿಕಾರಿ ಬಿ.ಹೆಚ್.ಜಗದೀಶ್ ಮತ್ತು ಸಿಬ್ಬಂದಿ ಜಗದೀಶ್, ಪ್ರವೀಣ್, ನಿಶಾಂತ್, ಸೌಮ್ಯ, ಪುನೀತ್, ಸಂತೋಷ್, ಶ್ರೀಕಾಂತ್ ಭಾಗವಹಿಸಿದ್ದರು.

ಪಿ.ಸಿ.ಕಾವೇರಿ ನಿಧನ



ವಿರಾಜಪೇಟೆ, ಫೆ.28–ಪಟ್ಟಣದ ಅರಸುನಗರ ನಿವಾಸಿ ಪಿ.ಸಿ.ಕಾವೇರಿ (70) ಶುಕ್ರವಾರ ಮುಂಜಾನೆ ನಿಧನರಾದರು.

ಮೃತರು ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಗಳವನ್ನು ಅಗಲಿದ್ದಾರೆ. ಮೀನುಪೇಟೆಯ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಎಂಇಎಸ್ ವಿರುದ್ಧ ಹುಲಿ ಸೇನೆ ಕಾರ್ಯಕರ್ತರ ಪ್ರತಿಭಟನೆ



ಕೊಳ್ಳೇಗಾಲದಲ್ಲಿ ಹುಲಿ ಸೇನೆ ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಎಂಇಎಸ್ ವಿರುದ್ಧ ಪ್ರತಿಭಟನೆ ನಡೆಸಿದರು.

ಕೊಳ್ಳೇಗಾಲ, ಫೆ.28–ಎಂಇಎಸ್ ಪುಂಡರ ಹಾವಳಿ ತಡೆಗಟ್ಟಬೇಕೆಂದು ಒತ್ತಾಯಿಸಿ ರಾಜ್ಯ ಹುಲಿ ಸೇನೆ ಕಾರ್ಯಕರ್ತರು ಪಟ್ಟಣದ ಬಸ್ ನಿಲ್ದಾಣದ ಬಳಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಹುಲಿ ಸೇನೆ ಸಂಸ್ಥಾಪಕಾಧ್ಯಕ್ಷ ಅವಿನಾಶ್ ಮಾತನಾಡಿ, ಬೆಳಗಾವಿಯಲ್ಲಿ ಕನ್ನಡಿಗರಿಗೆ ಮಾಡಿರುವ ಅವಮಾನ ಖಂಡನೀಯ. ಕನ್ನಡ ನಾಡು–ನುಡಿ, ನೆಲ–ಜಲ, ಭಾಷೆಗೆ ಯಾವುದೇ ಅಪಮಾನವಾಗದಂತೆ ಎಚ್ಚರ ವಹಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳೊಂದಿಗೆ ಉಗ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು

ನಂತರ ತಾಲೂಕು ಕಚೇರಿ ಶಿರಸ್ತೇದಾರ್ ಕೃಪಾಕರ್ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಹುಲಿ ಸೇನೆ ರಾಜ್ಯ ಉಪಾಧ್ಯಕ್ಷ ಜಸ್ವಂತ್ ಶ್ರೀಂಗಾರ್, ಜಿಲ್ಲಾ ಉಪಾಧ್ಯಕ್ಷ ಚಲುವನಾರಾಯಣಸ್ವಾಮಿ, ಸಂಚಾಲಕ ಶಾಶ್ವತ್, ರಂಗಸ್ವಾಮಿ, ಶೆಟ್ಟಿ, ಜಿಲ್ಲಾ ಗೌರವಾಧ್ಯಕ್ಷ ನಂಜುಂಡಸ್ವಾಮಿ, ಯಳಂದೂರು ನಾಗರಾಜು, ಕರವೇ (ಪ್ರವೀಣ್‌ಶೆಟ್ಟಿ ಬಣ) ಅಧ್ಯಕ್ಷ ಜಗದೀಶ್ ಶಾಸ್ತ್ರಿ, ಸುರೇಶ್ ಸಿಂಗನಲ್ಲೂರು, ನದೀಮ್, ಕುಣಗಳ್ಳಿ ರಂಗಸ್ವಾಮಿ, ಸೃಜನ್, ಆಟೋ ಚಾಲಕರ ಸಂಘದ ಅಧ್ಯಕ್ಷ ಲೋಕೇಶ್, ಪುನೀತ್, ಶಿವಮ್ಮ, ಮಹದೇವಮ್ಮ ಇನ್ನಿತರರು ಇದ್ದರು.

ಎಸ್‌ಇಪಿ, ಟಿಎಸ್‌ಪಿ ಅನುದಾನ ಗ್ಯಾರಂಟಿಗೆ ಬಳಕೆ

ರಾಜ್ಯ ಸರ್ಕಾರದ ವಿರುದ್ಧ ಮಾಜಿ ಸಚಿವ ಶ್ರೀರಾಮುಲು ಆರೋಪ



ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಶ್ರೀರಾಮುಲು ಮಾತನಾಡಿದರು.

ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ 2023ರಲ್ಲಿ ಮೀಸಲಿಟ್ಟ 11,500 ಕೋಟಿ ರೂ. ಮತ್ತು 2024ರಲ್ಲಿ ಮೀಸಲಿಟ್ಟ 14,280 ಕೋಟಿ ರೂ. ಅನ್ನು ಗ್ಯಾರಂಟಿಗಾಗಿ ಬಳಕೆ ಮಾಡಿಕೊಳ್ಳಲಾಗಿದೆ. ಗ್ಯಾರಂಟಿ ಯೋಜನೆಯನ್ನು ನಾವು ವಿರೋಧ ಮಾಡುತ್ತಿಲ್ಲ. ಆದರೆ, ಗ್ಯಾರಂಟಿ ಯೋಜನೆಗಾಗಿ ಪರಿಶಿಷ್ಟ ಜಾತಿ ಮತ್ತು ವರ್ಗದ ಕಲ್ಯಾಣಕ್ಕೆ ಮೀಸಲಿಟ್ಟ ಹಣ ದುರ್ಬಳಕೆ ಮಾಡಿಕೊಳ್ಳುತ್ತಿರುವುದಕ್ಕೆ ವಿರೋಧವಿದೆ.

–ಶ್ರೀರಾಮುಲು, ಮಾಜಿ ಸಚಿವ

ಚಾಮರಾಜನಗರ, ಫೆ.28–ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಮೀಸಲಿಟ್ಟಿದ್ದ ಎಸ್‌ಇಪಿ ಮತ್ತು ಟಿಎಸ್‌ಪಿ ಅನುದಾನವನ್ನು ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಳ್ಳುತ್ತಿದೆ ಎಂದು ಮಾಜಿ ಸಚಿವ ಶ್ರೀರಾಮುಲು ಆರೋಪಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳಿಗಾಗಿ ರಾಜ್ಯ ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಮೀಸಲಾದ ಹಣ ಸೇರಿದಂತೆ ಹಲವು ಅನುದಾನ ದುರ್ಬಳಕೆ ಮಾಡಿಕೊಂಡು ಖಜಾನೆ ಖಾಲಿ ಮಾಡಿದ್ದು, ರಾಜ್ಯದ ಜನರನ್ನು ಭಿಕ್ಷುಕರನ್ನಾಗಿ ಮಾಡಿದೆ ಎಂದರು.

ಪ.ಜಾತಿ ಮತ್ತು ವರ್ಗಗಳ ಶ್ರೇಯೋಭಿವೃದ್ಧಿಗೆ ಎಸ್‌ಸಿಪಿ, ಟಿಎಸ್‌ಪಿಗಾಗಿ ಶೇ. 24.10ರಷ್ಟು ಹಣವನ್ನು ನಮ್ಮ ಬಿಜೆಪಿ ಸರ್ಕಾರ ಮೀಸಲಿಟ್ಟಿತ್ತು. ಆದರೆ, ಈಗ ಗ್ಯಾರಂಟಿ ಯೋಜನೆಗಾಗಿ ಈ ಎಲ್ಲಾ ಹಣವನ್ನು ದುರ್ಬಳಕೆ ಮಾಡಿಕೊಂಡಿದೆ. ಮಾ.7ರಂದು ರಾಜ್ಯ ಸರ್ಕಾರ ಮಂಡಿಸಲಿರುವ ಬಜೆಟ್‌ನಲ್ಲಿ ಎಸ್‌ಸಿ, ಎಸ್‌ಟಿ ಅನುದಾನವನ್ನು ಸಮುದಾಯಗಳ ಅಭಿವೃದ್ಧಿ ಕೆಲಸಗಳಿಗೆ ಬಿಟ್ಟು ಬೇರೆ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳಬಾರದು ಎಂದು ಆಗ್ರಹಿಸಿದರು.

ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ ಲ್ಯಾಪ್‌ಟಾಪ್, ಸ್ಕಾಲರ್‌ಶಿಪ್, ಪ್ರೋತ್ಸಾಹಧನ, ಗೌರವಧನ, ಗಂಗಾ ಕಲ್ಯಾಣ ಯೋಜನೆಯ ಹಣ ಕೂಡ ನೀಡಿಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬರಲು ಗ್ಯಾರಂಟಿ ಯೋಜನೆ ಭರವಸೆಯನ್ನು ಜನರಿಗೆ ನೀಡಿದೆ. ಆದರೆ, ಈಗ ಕೊಟ್ಟ ಮಾತು ಉಳಿಸಿಕೊಳ್ಳಲು ಪರದಾಡುತ್ತಿದ್ದಾರೆ ಎಂದು ಟೀಕಿಸಿದರು.

ಪರಿಶಿಷ್ಟ ಜಾತಿ ಮತ್ತು ವರ್ಗದ ಹಣ ಅನ್ಯ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಬಾರದು ಎಂದು ಸರ್ಕಾರದ ಕಾಯ್ದೆಯೇ ಇದೆ. ಆದರೆ, ಇವುಗಳನ್ನು ಗಾಳಿಗೆ ತೂರಿದ್ದಾರೆ. ಆರ್ಥಿಕ ಸ್ಥಿತಿ ಸರಿದೂಗಿಸಲು ಪರದಾಡುತ್ತಿರುವ ಕಾಂಗ್ರೆಸ್ ಸರ್ಕಾರ ಈಗ ಅಗತ್ಯ ವಸ್ತುಗಳ ಬೆಲೆ ಹೆಚ್ಚಳ ಮಾಡುತ್ತಿದೆ ಎಂದು ದೂರಿದರು. ಸುದ್ದಿಗೋಷ್ಠಿಯಲ್ಲಿ ಶಾಸಕ ಡಾ.ಚಂದ್ರುಲಮಾಣಿ, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್‌ಕುಮಾರ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಮುಖಂಡರಾದ ಡಾ.ರೇವಣ್ಣ, ಎಸ್.ಬಾಲರಾಜು, ಸಿ.ಮುನಿಕೃಷ್ಣ, ಚಿದಾನಂದ ಛಲವಾದಿ, ಶ್ರೀನಿವಾಸ, ಡಾ. ನರೇಂದ್ರ, ಶ್ರೀನಿವಾಸ ದಾಸಕರಿಯಪ್ಪ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಬೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಮಹದೇವಸ್ವಾಮಿ, ಜಿಲ್ಲಾ ವಕ್ತಾರ ಕಾಡಹಳ್ಳಿ ಕುಮಾರ್, ಜಿಲ್ಲಾ ಮಾಧ್ಯಮ ಸಹ ಪ್ರಮುಖ್ ರಾಮಸಮುದ್ರ ಶಿವಣ್ಣ ಹಾಜರಿದ್ದರು.

2025–26ನೇ ಸಾಲಿನ ಚುಡಾ ಆಯ–ವ್ಯಯ ಸಭೆ

ಚಾಮರಾಜನಗರ, ಫೆ28–ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2025–26ನೇ ಸಾಲಿನ ಆಯ–ವ್ಯಯ ಸಭೆ ಪ್ರಾಧಿಕಾರದ ಅಧ್ಯಕ್ಷ ಮಹಮ್ಮದ್ ಅಸ್ಕರ್ (ಮುನ್ನ) ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಚಾಮರಾಜನಗರ–ಮಸಗಾಪುರ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಲ್ಲಿ ಒಟ್ಟು 14 ಎಕರೆ 24 ಗುಂಟೆ ವಿಸ್ತೀರ್ಣದಲ್ಲಿ ವಸತಿ ಯೋಜನೆ ಕೈಗೆತ್ತಿಕೊಂಡಿದ್ದು, ಈ ಸಂಬಂಧ 2021–22ನೇ ಸಾಲಿನ ಎಸ್‌ಆರ್ ದರಪಟ್ಟಿಯಂತೆ 12.54 ಕೋಟಿ ಅಂದಾಜು ಪಟ್ಟಿ ತಯಾರಿಸಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ 2023–24ನೇ ಸಾಲಿನ ಎಸ್‌ಆರ್ ದರಪಟ್ಟಿಯಂತೆ ಮರು ಅಂದಾಜುಪಟ್ಟಿ ಸಿದ್ಧಪಡಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

ವಸತಿ ಯೋಜನೆಯಡಿ ನಿವೇಶನ ಹಂಚಿಕೆ ಸಂಬಂಧ ಸಾರ್ವಜನಿಕರ ಕೋರಿಕೆ ಮೇರೆಗೆ ಮಾ.31ರವರೆಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ, ಚುಡಾ ವ್ಯಾಪ್ತಿಯ ಕೋಡಿಮೋಳೆ ಕೆರೆಯನ್ನು ಅಭಿವೃದ್ಧಿಪಡಿಸಲು 4.25 ಕೋಟಿ ರೂ.ಗೆ ಡಿಪಿಆರ್ ಸಿದ್ಧಪಡಿಸಲಾಗಿದ್ದು, 2 ಕೋಟಿಗೆ ಅನುಮೋದನೆ ಪಡೆಯಲಾಗಿದೆ. ಉಳಿಕೆ 2.25 ಕೋಟಿಗೆ ಅನುಮೋದನೆ ಸಲ್ಲಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

ಚುಡಾ ವ್ಯಾಪ್ತಿಯಲ್ಲಿ ಚಾಮರಾಜನಗರ, ನಗರಸಭೆ ವಾರ್ಡ್ ನಂ–4ರ ಬೀಡಿ ಕಾಲೋನಿಯಲ್ಲಿರುವ ಅಜೀಜ್ ಸೇಠ್ ಉದ್ಯಾನ ಅಭಿವೃದ್ಧಿಪಡಿಸಲು 44 ಲಕ್ಷ ರೂ.ಗೆ ಅಂದಾಜುಪಟ್ಟಿ ಸಿದ್ಧಪಡಿಸಿದ್ದು, ಸರ್ಕಾರಕ್ಕೆ ಅನುಮೋದನೆ ಸಲ್ಲಿಸಲು ನಿರ್ಣಯಿಸಲಾಯಿತು

ಚುಡಾ ನಾಮನಿರ್ದೇಶನ ಸದಸ್ಯರಾದ ಎಸ್.ರಾಜು, ರಾಜೇಂದ್ರ, ಪುಟ್ಟಸ್ವಾಮಿ, ಹೆಚ್.ಅಂಬಿಕಾ, ಜಿಲ್ಲಾ ಆರೋಗ್ಯಾಧಿಕಾರಿ ಚಿದಂಬರಂ, ಸೆಸ್ಕ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮಹೇಶ್, ಲೋಕೋಪಯೋಗಿ ಇಲಾಖೆ ಕಿರಿಯ ಇಂಜಿನಿಯರ್ ಐಶ್ವರ್ಯ, ನಗರಸಭೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನಟರಾಜು, ಪ್ರಾಧಿಕಾರ ಆಯುಕ್ತೆ ಹೆಚ್.ವಿ. ಸೀಮಾ, ನಗರ ಯೋಜಕ ಸದಸ್ಯ ರಿತೇಶ್ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.



ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಕರ್ ಅಧ್ಯಕ್ಷತೆಯಲ್ಲಿ ಆಯ–ವ್ಯಯ ಸಭೆ ನಡೆಯಿತು.

ದ್ವಿತೀಯ ಪಿಯುಸಿ ಪರೀಕ್ಷೆಗೆ ಜಿಲ್ಲೆಯಲ್ಲಿ 7364 ವಿದ್ಯಾರ್ಥಿಗಳು ನೋಂದಣಿ

ಚಾಮರಾಜನಗರ, ಫೆ.28–ಇಂದಿನಿಂದ (ಮಾ.1) ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗುತ್ತಿದ್ದು, ಜಿಲ್ಲೆಯಲ್ಲಿ 7364 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಸುಗಮ ಹಾಗೂ ಪಾರದರ್ಶಕ ಪರೀಕ್ಷೆ ನಡೆಸಲು ಅಧಿಕಾರಿಗಳು ಅಗತ್ಯ ಸಿದ್ಧತೆ ಕೈಗೊಂಡಿದ್ದು, ಜಿಲ್ಲೆಯಲ್ಲಿ 2887 ಬಾಲಕರು, 3849 ಬಾಲಕಿಯರು, 259 ಖಾಸಗಿ ವಿದ್ಯಾರ್ಥಿಗಳು, 365 ಪುನರಾವರ್ತಿತ ವಿದ್ಯಾರ್ಥಿಗಳು ಸೇರಿ ಒಟ್ಟು 7364 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ



ಶಿಲ್ಪನಾಗ್

ಚಾಮರಾಜನಗರ ತಾಲೂಕಿನಲ್ಲಿ 4, ಗುಂಡ್ಲುಪೇಟೆ 3, ಯಳಂದೂರು 2, ಕೊಳ್ಳೇಗಾಲ 5 ಹಾಗೂ ಹನೂರು ತಾಲೂಕಿನಲ್ಲಿ 3 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಪರೀಕ್ಷಾ ಕೇಂದ್ರದ ಕೊಠಡಿ ಹಾಗೂ ಹೊರಾಂಗಣದಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದ್ದು, ಪರೀಕ್ಷಾ ದಿನಗಳಂದು ಕೇಂದ್ರದ ಸುತ್ತ 200 ಮೀಟರ್ ವ್ಯಾಪ್ತಿ ನಿಷೇಧಾಜ್ಞೆ ಜಾರಿ ಗೊಳಿಸಲಾಗಿದೆ. 500 ಮೀಟರ್ ವ್ಯಾಪ್ತಿ ಜೆರಾಕ್ಸ್ ಮತ್ತು ಸೈಬರ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚಿಸುವಂತೆ ಜಿಲ್ಲಾಧಿಕಾರಿ ಶಿಲ್ಪನಾಗ್ ಈಗಾಗಲೇ ಸೂಚಿಸಿದ್ದಾರೆ. ಪರೀಕ್ಷಾ ಕೇಂದ್ರದಲ್ಲಿ ಪೀಠೋಪಕರಣ, ಕುಡಿಯುವ ನೀರು, ಶೌಚಾಲಯ ಹಾಗೂ ಗಾಳಿ, ಬೆಳಕು ಇನ್ನಿತರ ಎಲ್ಲಾ ಮೂಲ ಸೌಕರ್ಯ ಕಲ್ಪಿಸಲಾಗಿದ್ದು, ಪರೀಕ್ಷಾ ಕೊಠಡಿಯ ಮೇಲ್ವಿಚಾರಕರಾಗಿ ಶಿಕ್ಷಕರನ್ನು ನೇಮಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ತಿಳಿಸಿದ್ದಾರೆ.

ಚಂದಕವಾಡಿಯಲ್ಲಿ ಲಕ್ಷ್ಮೀದೇವಿ ರಥೋತ್ಸವ



ಚಾಮರಾಜನಗರ ತಾಲೂಕಿನ ಚಂದಕವಾಡಿ ಗ್ರಾಮದಲ್ಲಿ ಶುಕ್ರವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಲಕ್ಷ್ಮೀದೇವಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಚಾಮರಾಜನಗರ, ಫೆ.28– ತಾಲೂಕಿನ ಚಂದಕವಾಡಿ ಗ್ರಾಮದಲ್ಲಿ ಶ್ರೀ ಲಕ್ಷ್ಮೀದೇವಿ ಅಮ್ಮನವರ ರಥೋತ್ಸವ ಶುಕ್ರವಾರ ವಿಜೃಂಭಣೆಯಿಂದ ನಡೆಯಿತು.

ಸಂಜೆ 5.30ಕ್ಕೆ ಆರಂಭವಾದ ರಥೋತ್ಸವ 6.15ಕ್ಕೆ ಮುಕ್ತಾಯವಾಯಿತು. ನೂರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು. ಈ ಮೂಲಕ ಮೂರು ದಿನಗಳ ಚಂದಕವಾಡಿ ಜಾತ್ರೆಗೆ ತೆರೆ ಬಿದ್ದಿತು. ಚಂದಕವಾಡಿ ಜಾತ್ರೆ ಇತಿಹಾಸ ಪ್ರಸಿದ್ಧವಾಗಿದ್ದು, ಪ್ರತಿವರ್ಷ ಶಿವರಾತ್ರಿ ಹಬ್ಬದ ಆಸುಪಾಸಿನಲ್ಲಿ ಜಾತ್ರೆ ನಡೆಯಲಿದೆ. ಬುಧವಾರ ಮುಂಜಾನೆ ಕೊಂಡೋತ್ಸವದೊಂದಿಗೆ ಆರಂಭವಾದ ಜಾತ್ರೆ ಗುರುವಾರ ಮಡೆ ಉತ್ಸವ, ದನಗಳ ಪರಸೆ ನಡೆಯಿತು. ಶುಕ್ರವಾರ ನಡೆದ ರಥೋತ್ಸವದಲ್ಲಿ ತಾಲೂಕಿನ ಸುತ್ತಮುತ್ತಲ ಗ್ರಾಮಸ್ಥರು ಸೇರಿದಂತೆ ಜಿಲ್ಲೆ, ಹೊರ ಜಿಲ್ಲೆಯಿಂದ ಸಾವಿರಾರು ಭಕ್ತರು ಭಾಗವಹಿಸಿದ್ದರು.

ಗಂಗವಾಡಿಯಲ್ಲಿ ಚಿರತೆ ದಾಳಿಗೆ ಹಸು ಬಲಿ



ಗಂಗವಾಡಿ ಗ್ರಾಮದಲ್ಲಿ ಚಿರತೆ ದಾಳಿಗೆ ಹಸು ಬಲಿಯಾಗಿರುವುದು.

ಯಳಂದೂರು, ಫೆ.28–ಚಾಮರಾಜನಗರ ತಾಲೂಕಿನ ಗಂಗವಾಡಿ ಗ್ರಾಮದಲ್ಲಿ ಚಿರತೆ ದಾಳಿಗೆ ಹಸು ಬಲಿಯಾಗಿದೆ.

ಗ್ರಾಮದ ಅರ್ಮುಗಂ ಅವರ ತೆನೆ ಹಸು ಚಿರತೆಗೆ ಬಲಿಯಾಗಿದೆ. ಶಿವರಾತ್ರಿ ಹಬ್ಬದ ದಿನ ಮಧ್ಯರಾತ್ರಿ ಹಸುವನ್ನು ಕೊಟ್ಟಿಗೆಯಿಂದ ಎಳೆದೊಯ್ದು ಕೊಂದು ಹಾಕಿದೆ. ಹಸು ಸುಮಾರು 80 ಸಾವಿರ ರೂ. ಬೆಲೆ ಬಾಳಲಿದ್ದು, ಇದರಿಂದ ಜೀವನ ನಿರ್ವಹಣೆ ಕಷ್ಟವಾಗಿದೆ. ಆದ್ದರಿಂದ ಸೂಕ್ತ ಪರಿಹಾರ ನೀಡಬೇಕು ಎಂದು ಹಸುವಿನ ಮಾಲೀಕ ಅರ್ಮುಗಂ ಒತ್ತಾಯಿಸಿದ್ದಾರೆ.

ಗ್ರಾಮ ಪಂಚಾಯಿತಿ ಅಧ್ಯಕ್ಷ ಗಂಗವಾಡಿ ವಸಂತ ಕುಮಾರ್, ಸದಸ್ಯ ಕಾಳೇಗೌಡ ಹಾಗೂ ವಕೀಲ ಗಂಗವಾಡಿ ಸಂಪತ್ ಸ್ಥಳ ಪರಿಶೀಲಿಸಿ, ಸುತ್ತಮುತ್ತಲಿನ ಗ್ರಾಮಗಳಲ್ಲಿ ರೈತರು ಹಾಗೂ ಸಾರ್ವಜನಿಕರು ಓಡಾಡಲು ಸಾಧ್ಯವಾಗುತ್ತಿಲ್ಲ. ಈ ಭಾಗದಲ್ಲಿ ಹಲವಾರು ಚಿರತೆಯನು ನೋಡಿ ಭಯ ಭೀತರಾಗಿದ್ದಾರೆ. ಅರಣ್ಯ ಇಲಾಖೆ ಚಿತರೆ ಸೆರೆ ಹಿಡಿದು ರೈತರ ಜಾನುವಾರುಗಳನ್ನು ರಕ್ಷಿಸಬೇಕು ಎಂದು ಆಗ್ರಹಿಸಿದ್ದಾರೆ.

ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

ಚಾಮರಾಜನಗರ: ಜಿಲ್ಲೆಯ ವಿವಿಧ ಗ್ರಾಪಂ ವ್ಯಾಪ್ತಿಯಲ್ಲಿ ಖಾಲಿ ಇರುವ ಗ್ರಂಥಾಲಯ ಮೇಲ್ವಿಚಾರಕರ ಹುದ್ದೆಗೆ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿ ಪ್ರಕಟಿಸಲಾಗಿದ್ದು, ಆಕ್ಷೇಪಣೆಗಳಿದ್ದಲ್ಲಿ ಅರ್ಜಿ ಸಲ್ಲಿಸಬಹುದು. ಸಂಬಂಧಪಟ್ಟ ಗ್ರಾಪಂ ಹಾಗೂ ಜಿಪಂ ಕಚೇರಿಯಲ್ಲಿ ತಾತ್ಕಾಲಿಕ ಪಟ್ಟಿ ಪ್ರಕಟಿಸಲಾಗಿದ್ದು, ಪಟ್ಟಿ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಮಾ.18ರೊಳಗೆ ಅರ್ಜಿ ಸಲ್ಲಿಸುವಂತೆ ಜಿಪಂ ಸಿಇಓ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಮಾರಾಟಕ್ಕಿದೆ
30x40 ನಿವೇಶನ, ಪೂರ್ವ ದಿಕ್ಕಿನ ಬಾಗಿಲು, 3BHK ಹೊಸ ಮನೆ ಮಾರಾಟಕ್ಕಿದೆ. ವಸಂತ ನಗರಕ್ಕೆ ಮುಂಚೆ. ವಿದ್ಯಾ ವಿಕಾಸ ಕಾಲೇಜಿಗೆ 5 ನಿಮಿಷದ ನಡಿಗೆ 1.20cr (negotiable).
9845056621

ಬೇಕಾಗಿದ್ದಾರೆ
ಮೈಸೂರಿನ ಹಿನಕಲ್ ಭೋಗಾದಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ.
7019935825, 9632065077

SITE FOR SALE
Pragathi Dreams
30x50 N/F
BEHIND INFOSYS AND BEML
Mob: 9980716155

ಬೇಕಾಗಿದ್ದಾರೆ
PG ಯಲ್ಲಿ ಅಡುಗೆ ಹೆಲ್ಪರ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಊಟ, ವಸತಿ ಇರುತ್ತದೆ. ಕಡ್ಡಾಯವಾಗಿ PG ಯಲ್ಲೇ ಉಳಿಯಬೇಕು.
9986622769, 9535744143

MUDA SITE FOR SALE
ದಟ್ಟಗಳ್ಳಿ ರಿಂಗ್ ರೋಡ್ ಆದಿತ್ಯ ಸರ್ಕಲ್ ಹತ್ತಿರ 'ಅಶ್ವತ್ಥಾಮ ಲೇಔಟ್' 40'×60' ಈಸ್ಟ್ ಫೇಸಿಂಗ್ ಸೈಟ್.
Mob: 9886048471

SITE FOR SALE
40x60
Roopa Nagar
Mob: 9740088990

ಮಾರಾಟಕ್ಕಿವೆ
40x60 East/South ಕಾರ್ನರ್
35x40 East ಫೇಸ್ ಸೈಟ್
ನಂಜುಂಡೇಶ್ವರ ನಗರ, ತಳೂರು to TVS ಫ್ಯಾಕ್ಟರಿ ಮೇನ್ ರೋಡ್
9945622196

ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ.
6364748485

ಉಚಿತ ಆಶ್ರಮ
ಮೈಸೂರು ಹಾಗೂ ಮಂಡ್ಯದಲ್ಲಿರುವ ಆಶ್ರಮದಲ್ಲಿ ಹಾಸಿಗೆ ಹಿಡಿದಿರುವ ವಯೋವೃದ್ಧರನ್ನು, ಪಾರ್ಶ್ವವಾಯು ಪೀಡಿತರನ್ನು ಮನೆಯಂತೆಯೇ ನೋಡಿಕೊಳ್ಳಲಾಗುವುದು. ಅವರ ಕೆಲಸ ಅವರು ಮಾಡಿಕೊಳ್ಳಲು ಸಾಧ್ಯವಿರುವ ನಿರಾಶ್ರಿತ ವೃದ್ಧರಿಗೆ ಉಚಿತ ಆಶ್ರಯ ನೀಡಲಾಗುವುದು.
ಸಂಪರ್ಕಿಸಿ
9380541232, 9538852289

ಸ್ಫೂರ್ತಿಧಾರೆ ಸರ್ವೀಸ್
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

FOR SALE
1. 40x60 Site@ Sharadha Layout Near JP Nagar
2. Duplex House Nr Christ Public Schl
3. 2&3 BHK Flats at RK Nagar
4. BSNL Layout Site Nr Bannur Road
5. 30x50 Site@Treasury Lyt HD Kote Rd
6. 25x35 House Nr Srirampura
7. 20x30, 16x32, 17x33 @ Dattagalli, Lakshmipuram, Sharadhadevi Ngr
8. 30x40 Sites attached to Brahmins Lyt

PRAKRUTHI PROPERTIES
95386 90359, 90359 90359

KSHATRIYA MOTORS
WE ARE HIRING
JOB POSITIONS
MARKETING TEAM LEADERS / SALES EXECUTIVES
LOCATION: MYSORE, KODAGU, CHAMARAJANAGARA, RAMANAGARA, MANDYA,
SEND YOUR CV TO :kshatriyaforcesales@gmail.com
0821-2404555,9632263202

ಸಂಪು
ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297|9591557126

SITE FOR SALE
40x40 Corner
VISHWA MANAVA ENCLAVE,
Vijayanagar 4th Stage
Mob: 8050821108

SITE FOR SALE
30x40 N/F Site
Gayatri Layout 1st Stage
(Attach R.T. Nagar)
Mob: 9880273834

ಸಂಪು
ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

rapido BIKE TAXI ಬೇಕಾಗಿದ್ದಾರೆ
ರ್‍ಯಾಪಿಡೋ ಬೈಕ್ ಟ್ಯಾಕ್ಸಿ ಕ್ಯಾಪ್ಟನ್ ಆಗಿ ಸೇರಿ ದಿನಕ್ಕೆ 1000/– ವರೆಗೆ ಗಳಿಸಿ
ಅಗತ್ಯವಿರುವ ದಾಖಲೆಗಳು
RC, DL, Android ಮೊಬೈಲ್ ಆಧಾರ್/ Pan ಕಾರ್ಡ್, ಸಂಪರ್ಕಿಸಿ:
04048937617

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, Kuvempunagar, Mysuru
MYSURU 9611028523 BANGALORE 9343142258

PAY 30 LAKHS & OWN YOUR DREAM HOME
Rest with Easy EMI
Vastu & Architectural Built
20X30 North Facing
3 BHK Duplex
4 BHK Triplex
Fully Furnished, Ready to Move in
50 Mtrs from Ring Road,
Next to Police Layout
98800 65122 / 76193 99919

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

SITE FOR SALE
30x40, 30x50
Srirampura, Ring Road, Mysore.
Mob: 8050345574

Change of Name
I, Raghavendra Prasad R., residing at No. 17, First Floor, 5th Main, Paramahamsa Road, Yadavagiri, Mysore-570 020, have changed my name from Raghavendra R. to Raghavendra Prasad R. on my own free will, in front of Notary A.M. Sumithra on 28-2-2025. I declare that I shall at all times hereafter in all records, deeds and writings and in all proceedings, dealings and transactions, private as well as upon all occasions whatsoever use and sign the name of Raghavendra Prasad R.
Sd/- Raghavendra Prasad R.

ವಧುವರರ ಅನ್ವೇಷಣೆ
ಜಾತಿ–ಲಿಂಗಾಯತ, ಕುರುಬ, ಒಕ್ಕಲಿಗ ಮತ್ತು ಕ್ರಿಶ್ಚಿಯನ್, ಎಸ್‌ಸಿ, ಎಸ್‌ಟಿ, ಮರಾಠಿ.
ಸಂಪರ್ಕಿಸಿ: ಮೈಸೂರು.
ವಾಟ್ಸಪ್ 9844396822, 9164596155

ಸುವರ್ಣಾವಕಾಶ
ಪ್ರಸಿದ್ಧ ಷೋರೂಂ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ, ಯುವಕರು ಮತ್ತು ಯುವತಿಯರು ಬೇಕಾಗಿದ್ದಾರೆ. 22,000 salary. 100% ಗ್ಯಾರಂಟಿ ಕೆಲಸ.
9482369816, 9482360136

ಕೆಲಸ ಖಾಲಿ ಇದೆ
ಶ್ರೀ ಲಕ್ಷ್ಮಿ ವೆಂಕಟೇಶ್ವರ ಮೋಟಾರ್ಸ್, ಮೈಸೂರ್ ರಸ್ತೆ, ನಂಜನಗೂಡು. ನಮ್ಮ ಯಮಹಾ ಷೋರೂಮ್ ನಲ್ಲಿ ಮೆಕಾನಿಕ್ ಆಗಿ ಕೆಲಸ ನಿರ್ವಹಿಸಲು ಅನುಭವಿ ಮೆಕಾನಿಕ್ ಬೇಕಾಗಿದ್ದಾರೆ. ಕನಿಷ್ಠ 3 ವರ್ಷ ಅನುಭವ ಇರಬೇಕು.
9880707248, 9880533599

ಸೈಟುಗಳು ಸೇಲ್‌ಗೆ
ದಡದಹಳ್ಳಿ ಹೈವೇಯಲ್ಲಿರುವ ಜ್ಞಾನ ಭಾರತಿ ಲೇಔಟ್‌ನಲ್ಲಿ 30x40 ಅಳತೆಯ ಈಸ್ಟ್ ಫೇಸಿಂಗ್ ಮತ್ತು ಕಾರ್ನರ್ ಸೈಟುಗಳು ರೂ. 3900 ಚದುರಡಿಗೆ ಸ್ವಲ್ಪ ನೆಗೋಷಿಯಬಲ್, ಮುಡಾ ಖಾತೆ ಹಾಗೂ ಇ–ಖಾತೆ ಆಗಿದೆ.
Mob: 9342123373

SITE FOR SALE
Site measuring 69.51 ft x 9.015 ft. (625.5 sq.ft) on K.T. Street, Mandi Mohalla (near Mandi Police Station), Mysore.
Contact:
Mob: 9449509900

ಚಾಮರಾಜನಗರದಲ್ಲಿ ಜಮೀನು ಮಾರಾಟಕ್ಕಿದೆ
NH ಪಕ್ಕ, ಸಿಟಿ ಹತ್ತಿರ, ಗುಂಟೆಗೆ 3 ಲಕ್ಷಗಳು.
9108474076, 8867627932

Corner site for sale
50x65 South-East
Viswapragna Layout
(Attach R.T. Nagar)
Mob: 9880273834

House / 2 Rooms for Rent
Near NIE / St. Thomas School (400 mtrs), two rooms (one room with kitchen cum hall and one room attached bathroom & solar with two cots and 3 chairs) & one verandah, 2nd Floor, E/F, free parking for either one car or for 2 wheeler (3 Nos. Rent: 8000 / PM. Advance : 60,000. Ready to occupy.
Mob: 9980211831

WANTED
Receptionist - Male / Female
Room Supervisors: Male
Housekeeping: Male / Female
Part time & full time.
Attractive salary with food & accommodation.
Contact: Parklane Hotel
2720, Harsha Road, Mysore

ವಾಹನ ಬಾಡಿಗೆಗೆ ದೊರೆಯುತ್ತದೆ
Ashok Leyland, Bada Dost Container Body
Daily trip to Bangalore & others
For industrial goods, Mysore surroundings.
Mob: 8884633339

HOUSE FOR SALE
West site, North facing, 20x30 MUDA allotted layout, Shanthaveri Gopalagowdanagar. Price Rs. 49 Lakhs (slightly negotiable). *Contact:*
Mob: 9945623565, 9036379132, 8123814095
BROKERS EXCUSE

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

Nypunya School of Excellence
MYSURU
Dattagalli (CBSE) and R.T.Nagar (ICSE)
ಬೇಕಾಗಿದ್ದಾರೆ
1) 8 ಗಂಟೆಗಳ ಶಿಫ್ಟ್ ಇರುವ ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಅನುಭವಿ ಅಭ್ಯರ್ಥಿಗಳು ಬೇಕಾಗಿದ್ದಾರೆ.
2) ಹೆವಿ ಲೈಸನ್ಸ್ ಉಳ್ಳ ಅನುಭವಿ ಬಸ್ ಡ್ರೈವರ್ ಬೇಕಾಗಿದ್ದಾರೆ.
7022849856

ಬೇಕಾಗಿದ್ದಾರೆ
ಡ್ರೈವರ್ಸ್–ಆರು ಮತ್ತು ನಾಲ್ಕು ಚಕ್ರದ ಕಂಪನಿ ಗೂಡ್ಸ್ ವಾಹನ ಚಲಾಯಿಸಲು DL ಹೊಂದಿರುವ ಅಭ್ಯರ್ಥಿ ಆಕರ್ಷಕ ಸಂಬಳ ESI, PF ಸೌಲಭ್ಯವಿರುತ್ತದೆ.
ಸಂಪರ್ಕಿಸಿ:
9148851387

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ Rs. 7,900 (24 CT)
Mob: 9108146123

SITE+BUILDG
pkg @ around 85 Lakhs
* Vijaya Nagar * Roopa Nagar
* KRS Road * Dattagally
* Bogadi Rd. * T.N. Pura Road
also contact for pkg 60 to 150 lakhs & above in 30x40, 40x60, 20x30 100 % Vaastu Plan
Call - 9886697052

ಉದ್ಯೋಗ ಅವಕಾಶ
ಬಂದ ಬಿನಸ್ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಬಂದೇ ಬೇಕಾಗಿದ್ದಾರೆ. ESI / PF ಸೌಲಭ್ಯ ಊಟ, ವಸತಿಯಿರುತ್ತದೆ ಸಂಬಳ – ರೂ. 15200 – 86,000
7337645977, 7892046990

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು
ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

ಬೇಕಾಗಿದ್ದಾರೆ
ಮಂಗಳೂರಿನಲ್ಲಿ ಆಫೀಸ್ ಅಕೌಂಟ್ಸ್, ಸೂಪರ್‌ವೈಸರ್ ಹುದ್ದೆಗಳಿಗೆ 25 ಜನ ಯುವಕ ಯುವತಿಯರು. ವಿದ್ಯಾಭ್ಯಾಸ 7th ಮೇಲ್ಪಟ್ಟು ಯಾವುದೇ ಡಿಗ್ರಿ. ವೇತನ 15000–25000 ಊಟ ವಸತಿ ಉಚಿತ.
7975883113

VOKKALIGA MATRINONY
Degree/BE/MBA/MCA/ MBBS/Govt. Employee
ವಧು–ವರರಿಗಾಗಿ ಸಂಪರ್ಕಿಸಿ
(Contact for all caste)
9343175000

ಮನೆಯಿಂದಲೇ ಕೆಲಸ
ಗೃಹಿಣಿಯರು, ವಿದ್ಯಾರ್ಥಿಗಳು, ವಯಸ್ಕರು, ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ ವಾಟ್ಸಾಪ್ ಟೈಪಿಂಗ್ ಮತ್ತು ಪ್ಯಾಕಿಂಗ್ ಕೆಲಸಗಳು ಲಭ್ಯವಿದೆ. ಬಿಡುವಿನ ವೇಳೆಯಲ್ಲಿ ಕೆಲಸ ಮಾಡಿ ಗಳಿಸಿ ತಿಂಗಳಿಗೆ 20000 ದಿಂದ 30000ವರೆಗೆ ಕರೆಮಾಡಿ (ದಿವ್ಯಾ)
9632583367

WANTED
Male or Female
Qualification - Any Degree
8050972340

ಜಮೀನು ಮಾರಾಟಕ್ಕಿದೆ
3 ಎಕರೆ ಜಮೀನು ಮಾರಾಟಕ್ಕೆ ಇದೆ ಪಾಂಡವಪುರ ತಾ|| ಮಂಡ್ಯ ಜಿಲ್ಲೆ ಬೇಬಿ ಗ್ರಾಮದಿಂದ 1.5 ಕಿ.ಮೀ ಅದರಲ್ಲಿ Commercial (ಕೋಳಿ ಫಾರಂ) ಅಥವಾ ವ್ಯವಸಾಯಕ್ಕೆ ಯೋಗ್ಯವಾಗಿರುತ್ತದೆ. ಕೆ.ಆರ್.ಎಸ್ ಯಿಂದ 10 ಕಿ.ಮೀ ಮೈಸೂರು ಸಬರನ್ ಬಸ್‌ಸ್ಟಾಪ್‌ನಿಂದ 27 ಕಿ.ಮೀ
9901226886
9900919875

ಸೈಟು ಬೇಕಾಗಿದೆ
ಚಿಕ್ಕಹಳ್ಳಿ/ವರುಣ/ವಾಜಮಂಗಲ/ ಜೆಎಸ್‌ಎಸ್/ಬಸವೇಶ್ವರ/ ನಿರ್ಮಾಣ್ ಹಾಗೂ ಇತರೆ ಅಕ್ಕಪಕ್ಕದ ಬಡಾವಣೆಗಳಲ್ಲಿ ಟಿ.ನರಸೀಪುರ ರಸ್ತೆ/ಬನ್ನೂರು ರಸ್ತೆ
9686071750

ನಿವೃತ್ತ ನೌಕರರಿಗೆ ಉದ್ಯೋಗಾವಕಾಶದ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benifits 1) Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು 1) ಫೋಟೋ 2) ಬ್ಯಾಂಕ್ ಕಾರ್ಡ್ 3) ಆಧಾರ್ ಕಾರ್ಡ್ 4) ಬ್ಯಾಂಕ್ ಪಾಸ್ ಪುಸ್ತಕ ಸ್ಥಳ ದಿನಾಂಕ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
7795039992

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benifits : Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: 1) ಫೋಟೋ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್. ಸ್ಥಳ: Maurya Residency Sri Harsha Road, Mysore-1
Time-11 am, Date: 4-3-2025
(Followed by Lunch)
9448376423/9886883858

ಬೇಕಾಗಿದ್ದಾರೆ
ನಗರ ಬಸ್ ನಿಲ್ದಾಣ ದ ಹತ್ತಿರ ವಿರುವ ಹೆಸರಾಂತ 5 ಸ್ಟಾರ್ ಹೋಟೆಲ್‌ಗೆ 20 ರಿಂದ 50 ರ ವಯಸ್ಸುವುಳ್ಳ SSLC ತನಕ ವ್ಯಾಸಂಗ ಹೊಂದಿರುವ ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ಸೂಪರ್‌ವೈಸರ್ ಗಳ ತಕ್ಷಣ ಬೇಕಾಗಿದ್ದಾರೆ.
12:hrs ಡ್ಯೂಟಿ., 26 ದಿನಗಳು,
ಫ್ರೀ ಫುಡ್, ESI &EP ಈ ಸೌಲಭ್ಯ ಮತ್ತು ಆಕರ್ಷಕ ಸಂಬಳ ವಿರುತದೆ. ಮತ್ತು ಬೋಗಾದಿ ನಲ್ಲೀ ಹಾಸ್ಟೆಲ್ ಒಂದಕ್ಕೆ ಸೆಕ್ಯುರಿಟಿ ಗಾರ್ಡ್ ಗಳು ಕೂಡಲೇ ಬೇಕಾಗಿದ್ದಾರೆ.
12:00hr ಡ್ಯೂಟಿ. 26: ದಿನಗಳು.
16 ಸಾವಿರ ಸಂಬಳ ದೊರಯುತ್ತದೆ.
9900066284,9008004853

WANTED SUPERVISOR FOR ENGNEERING COMPANY PREFERED DIPLOMA ENGG OR SCIENCE GRADUATE
AT DOOR NO.788, 2ND MAIN, 16TH CROSS, B.M.SHRI NAGAR, METAGALLI, MYSORE. (OWNER):
9820233520

ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ
ಮೈಸೂರಿನ ದೇವೇಗೌಡ ಸರ್ಕಲ್ ಜಯಲಕ್ಷ್ಮಿಪುರಂ, ಬೋಗಾದಿ ಸುತ್ತಮುತ್ತ ಕೆಲಸ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ. ವಯೋಮಿತಿಯು 50 ವರ್ಷದೊಳಗೆ ವಿದ್ಯಾಭ್ಯಾಸ ಹತ್ತನೇ ತರಗತಿ ಪಾಸ್ ಅಥವಾ ಫೇಲ್ ವೇತನ 12000/– ಹಾಗೂ ಪಿಎಫ್‌ಇಎಸ್‌ಐ ಇರುತ್ತದೆ.
6361765969
8792815411

SITE FOR SALE
30X50
Price 34,56,999/-
Ring Road,
10 KM, Yelwala
7349318456

ಹೊಸ ಮನೆ ಮಾರಾಟಕ್ಕಿದೆ
20x30
ಡ್ಯೂಪ್ಲೆಕ್ಸ್ 3 ರೂಂ
ವಿನಾಯಕ ಗಾರ್ಡನ್ ಸಿಟಿ MUDA ಟಿ.ಎನ್.ಪುರ NH ಹೈವೇ ಹತ್ತಿರ ಆಲನಹಳ್ಳಿ ರಿಂಗ್ ರಸ್ತೆ ಜಂಕ್ಷನ್, ಮೈಸೂರು
9448553810

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ ಸೂಪರ್ ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ. SSLC, PUC, BA, Any Degree S/G 19000/- to 23000 ಸೆಕ್ಯೂರಿಟಿ ಸೂಪರ್ ವೈಸರ್ 20000/- to 25000/- L/G 19000/- to 23000 Valet Driver 21000/- ಸಂಬಳವಿರುತ್ತದೆ. ಕೆಲಸದ ಸಮಯ 8 ಗಂಟೆಗಳು ಹಾಗೂ OT ಸೌಲಭ್ಯವಿರುತ್ತದೆ. ವಯೋಮಿತಿ 18 ರಿಂದ 45ರ ಒಳಪಟ್ಟಿರುವವರು. ESI PF & Week Off ಹಾಗೂ GH ಸೌಲಭ್ಯವಿರುತ್ತದೆ. ಕೆಲಸ ಮಾಡುವ ಸ್ಥಳ: Nexus Mall, Royal Mart, DINESH Y.S
7760097320,9606832471

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ಮನೆ ನಂ.622, 12ನೇ ಮುಖ್ಯ ರಸ್ತೆ, 'ಬಿ' ಬ್ಲಾಕ್, ವಿಜಯನಗರ 3ನೇ ಹಂತದಲ್ಲಿ ವಾಸವಾಗಿರುವ ಶ್ರೀಕಾಂತ ಕಟ್ಟೇಪುರ ಕೃಷ್ಣಮೂರ್ತಿ ಪ್ರಮಾಣೀಕರಿಸುವುದೇನೆಂದರೆ, ನಾನು ಈ ಹಿಂದೆ ಪಾಸ್‌ಪೋರ್ಟ್ ಮಾಡಿಸುವ ಸಂದರ್ಭದಲ್ಲಿ ಪಾಸ್‌ಪೋರ್ಟ್ ನಂ. B1906677ರಲ್ಲಿ ನನ್ನ ಹೆಸರು ಕಾಂಟೇಪುರ ಕೃಷ್ಣಮೂರ್ತಿ ಶ್ರೀಕಾಂತ) ಎಂದು ಇದ್ದು ಈಗ ನನ್ನ ಹೆಸರನ್ನು ಶ್ರೀಕಾಂತ ಕಟ್ಟೇಪುರ ಕೃಷ್ಣಮೂರ್ತಿ ಎಂದು ನನ್ನ ಸ್ವ ಇಚ್ಛೆಯಿಂದ ನೋಟರಿ ಸುಮಿತ್ರ ಬಿ ರವರ ಮುಂದೆ ದಿನಾಂಕ 20–2–2025ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಶ್ರೀಕಾಂತ

ಬೇಕಾಗಿದ್ದಾರೆ
ಮೈಸೂರಿನ ಹೂಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿ ಪುರುಷ ಅಭ್ಯರ್ಥಿಗಳು.
1) ಸೆಕ್ಯೂರಿಟಿ ಸೂಪರ್‌ವೈಸರ್ಸ್
2) ಸೆಕ್ಯೂರಿಟಿ ಗಾರ್ಡ್ಸ್
3) ಹೌಸ್ ಕೀಪಿಂಗ್ (ಹುಡುಗರು)
ವಿದ್ಯಾರ್ಹತೆ: 10th ಪಿಯುಸಿ ಪಾಸ್/ಫೇಲ್ ವಯಸ್ಸು 25 ರಿಂದ 50 ವರ್ಷ
9739199355

WANTED CHEF
Experienced Chef to work for a vegeterian cafe at Vijayanagara
North East Chef Preferred
6360151526
8884866013

ಬಾಡಿಗೆಗೆ ದೊರೆಯುತ್ತದೆ
KBL Layout
ಮೇನ್ ರೋಡ್ ಪಕ್ಕ 1 ಎಕರೆ ಜಾಗ ಬಾಡಿಗೆಗೆ ದೊರೆಯುತ್ತದೆ
9845743950

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು ಮಹಿಳೆಯರು ಬೇಕಾಗಿದ್ದಾರೆ. ಸ್ಥಳ ನಜರಬಾದ್ ಮೈಸೂರು ಸಮಯ: ಬೆಳಿಗ್ಗೆ 9:30 ರಿಂದ ರಾತ್ರಿ 8:30/9:00ವರೆಗೆ ಸಂಬಳ: 10,000 ದಿಂದ ಪ್ರಾರಂಭ
9986311444
9986322444

ಬೇಕಾಗಿದ್ದಾರೆ
ಮೈಸೂರಿನ ಯಾದವಗಿರಿಯಲ್ಲಿ ಕಂಪ್ಯೂಟರ್ XL ಬಿಲ್ಲಿಂಗ್ ಕೆಲಸ ಮಾಡಲು ಲೇಡಿ ಆಪ್‌ರೇಟರ್ ಬೇಕಾಗಿದ್ದಾರೆ. ಸಮಯ: 10.30 am to 3pm ವರೆಗೆ, ಸಂಬಳ: 6000/–
9916842472

ತಕ್ಷಣವೇ ಬೇಕಾಗಿದ್ದಾರೆ
ನಮ್ಮನೆ ಕನ್‌ಸ್ಟ್ರಷನ್ ಪ್ರೈವೆಟ್ ಲಿಮಿಟೆಡ್‌ಗೆ ಡ್ರೈವರ್ ಬೇಕಾಗಿದ್ದಾರೆ. ವಯೋಮಿತಿ 25 ರಿಂದ 40 ವರ್ಷ (4 Wheelers) ಮೈಸೂರು
9035010467
8073882830

ಉದ್ಯೋಗ ಅವಕಾಶದ ಸೆಮಿನಾರ್
ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ರಾಜ್ಯ/ ಕೇಂದ್ರ ಸರ್ಕಾರದ / ನಿವೃತ್ತರಿಗೆ ಸೆಮಿನಾರ್ ಏರ್ಪಡಿಸಲಾಗಿದೆ. ಸೆಮಿನಾರ್ ನಡೆಯುವ ಸ್ಥಳ: ಮೌರ್ಯ ರೆಸಿಡೆನ್ಸಿ ಹೋಟೆಲ್, ಉಡ್‌ಲ್ಯಾಂಡ್ಸ್ ಟಾಕೀಸ್ ಹತ್ತಿರ, ಮೈಸೂರು–01 ದಿನಾಂಕ: 04–03–2025 ಸಮಯ: ಬೆಳಿಗ್ಗೆ 11 ಗಂಟೆಗೆ
(Followed by Lunch)
Benefit: Fixed, Salary+PF+ESI & Other Incentives
7022034200,9449068132

ಕೂಡಲೇ ಬೇಕಾಗಿದ್ದಾರೆ
ವಿಜಯನಗರ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಕೂಡಲೇ ಬೇಕಾಗಿದ್ದಾರೆ ಮತ್ತು ಇದೇ ಆಸ್ಪತ್ರೆಗೆ ಹೌಸ್ ಕೀಪಿಂಗ್ ಮಹಿಳೆಯರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ
9353646312

ಕಂಕಣ ಭಾಗ್ಯ
ಒಕ್ಕಲಿಗ, ಕುರುಬ, ಲಿಂಗಾಯತ್, ನಾಯಕ, SC ನಮ್ಮಲ್ಲಿ ಎಲ್ಲಾ ಜಾತಿಯ ವಧು–ವರರು, ವಿಚ್ಛೇದಿತರು, ವಿಧುರ–ವಿಧವೆಯರು ತಕ್ಷಣ ಸಂಪರ್ಕಿಸಿ:
9071577131

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು SSLC, ITI Pass or Fail ಹುಡುಗರು ಬೇಕಾಗಿದ್ದಾರೆ. (Age-18-30) ಸಂಬಳ: 20,0000/– ಅನುಕೂಲತೆ: ESI, PF, Canteen ಸೌಲಭ್ಯವಿರುತ್ತದೆ.
7090309148
7018380847

ಸೆಕ್ಯೂರಿಟಿ ಗಾರ್ಡು
ಈ ಕೆಳಕಂಡ ಸ್ಥಳಗಳಿಗೆ ಬೇಕಾಗಿದ್ದಾರೆ.
1) ಗುಂಡ್ಲುಪೇಟೆ 2) ಹರ್ಷರಸ್ತೆ
3) ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ
ESI/PF / ಉಚಿತ ವಸತಿ/ಊಟ
9686422400
9686566261

ಸಪ್ಲೆಯರ್ ಬೇಕಾಗಿದ್ದಾರೆ
ಹೋಟೆಲ್‌ವೊಂದಕ್ಕೆ ಸಪ್ಲೆಯರ್ ಬೇಕಾಗಿದ್ದಾರೆ. ಸಂಪರ್ಕಿಸಿ
9986669892
6362610799

ಮನೆ ಬಾಡಿಗೆಗೆ
1 BHK
ಮನೆ 2ನೇ ಮಹಡಿಯಲ್ಲಿ ಬಾಡಿಗೆಗೆ ಇದೆ
ಕುವೆಂಪುನಗರ
(ಸಸ್ಯಾಹಾರಿಗಳಿಗೆ ಮಾತ್ರ)
9591198274

ಬೇಕಾಗಿದ್ದಾರೆ
ಮ್ಯಾಕಾನಿಕ್ (Mechanic)
Honda Service (Two Wheeler)
Salary-16000 to 20000
Sunday Holiday
Gokulam, Mysore
9380010600

SITES FOR SALE
Near Srirampura Ring Road Mysore
30x40, 30x50
MUDA APPROVED
(Opposite University Layout)
9108528002

HOUSE FOR SALE
SATAGALLI B ZONE
Within 500 Mtr From VTU College Measurement 30x40 Ground Floor 2bhk, First Floor 1bhk Fully Furnished House Loan Facility Available From Bank
MYSORE EAST PROPERTIES
9535830530

ಮಾರಾಟಕ್ಕಿದೆ
30x40 ಮನೆ
20x30 ಮನೆ
30x50 ಸೈಟ್
9008711654

Admission has been open for New Gurukula International School from Pre Kg upto 10th Standard Sanskrit, Subject Individual Teaching and Karate Class are included as extra curricular activities
9741875540

ನೇರ ನೇಮಕಾತಿ
SSLC, PUC, Any Degree
Age: 18 to 45 Years
Privileges: Salary, Incentive, PF, Health Card
ಸಂದರ್ಶನ: ಸೋಮವಾರ ದಿನಾಂಕ : 03–03–25 ಬೆಳಿಗ್ಗೆ 11 ಗಂಟೆಗೆ
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
9535923299

ಮೈಸೂರು ಮಿತ್ರ
45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

1.45 ಕೋಟಿ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ

ನಂಜನಗೂಡು, ಫೆ.28– ನಂಜನಗೂಡು ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಸಮುದಾಯ ಭವನ ನಿರ್ಮಾಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯಿಂದ 7.60 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಇಂದು ವಿವಿಧ ಗ್ರಾಮಗಳಲ್ಲಿ 1.45 ಕೋಟಿ ವೆಚ್ಚದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ಶುಕ್ರವಾರ ತಾಲೂಕಿನ ಮಾಡ್ರಹಳ್ಳಿ, ಸಿಂಗಾರಿಪುರ, ಶ್ರೀನಗರ, ಹೆಡತಲೆ, ಬಸವಟ್ಟಿಗೆ, ನೇರಳೆ, ಘಟ್ಟವಾಡಿ, ಬಸವರಾಜಪುರ ಗ್ರಾಮಗಳಲ್ಲಿ ತಲಾ 20 ಲಕ್ಷ ವೆಚ್ಚದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನಂಜನಗೂಡು ಕ್ಷೇತ್ರಕ್ಕೆ ವಿಶೇಷ ಆಸಕ್ತಿ ತೋರಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಜೊತೆಗೆ ಅಭಿವೃದ್ಧಿ ಕಡೆಗಣಿಸದೆ, ಕ್ಷೇತ್ರಕ್ಕೆ 25 ಕೋಟಿ ವಿಶೇಷ ಅನುದಾನ ನೀಡಿದ್ದಾರೆ. ಜೊತೆಗೆ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು 7.60 ಕೋಟಿ ರೂ. ಅನುದಾನವನ್ನು ಅಂಬೇಡ್ಕರ್ ಭವನಗಳ ನಿರ್ಮಾಣ ಕಾಮಗಾರಿಗೆ ಬಿಡುಗಡೆಗೊಳಿಸಿದ್ದಾರೆ. ಈಗಾಗಲೇ 138 ಗ್ರಾಮಗಳ ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗೆ ಅನುದಾನ ನಿಗದಿಪಡಿಸಲಾಗಿದೆ. ತಲಾ 20 ಲಕ್ಷ ವೆಚ್ಚದಲ್ಲಿ ಅಂಬೇಡ್ಕರ್ ಸಮುದಾಯ ಭವನಗಳು ನಿರ್ಮಾಣವಾಗಲಿದ್ದು, ಪ್ರಾಥಮಿಕ ಹಂತದಲ್ಲಿ 5 ಲಕ್ಷ ಅನುದಾನ ಬಿಡುಗಡೆಗೊಳಿಸಲಾಗಿದೆ. ಬಜೆಟ್ ನಂತರ ಕ್ಷೇತ್ರಕ್ಕೆ ಮತ್ತಷ್ಟು ಅನುದಾನ ತಂದು ಸಮುದಾಯ ಭವನಗಳ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು ಎಂದರು.


ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಕಾಮಗಾರಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳು ನಿರಂತರವಾಗಿ ಸಾಗಿವೆ. 3 ಕೋಟಿ ವೆಚ್ಚದಲ್ಲಿ ಎಪಿಎಂಸಿ ಅಭಿವೃದ್ಧಿ, ಸಣ್ಣ ನೀರಾವರಿ ಇಲಾಖೆಯಿಂದ ತಡೆಗೋಡೆ ನಿರ್ಮಾಣಕ್ಕಾಗಿ 5 ಕೋಟಿ, ಎಸ್‌ಇಪಿ ಯೋಜನೆಯಡಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಎಸ್ಸಿ, ಎಸ್‌ಟಿ ಜನರು ವಾಸಿಸುವ ಬೀದಿಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕಾಗಿ 5 ಕೋಟಿ ರೂ. ಅನುದಾನ ನೀಡಲಾಗಿದೆ. ಅಲ್ಲದೇ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 20 ಕೋಟಿ ರೂ. ವೆಚ್ಚದಲ್ಲಿ ಸಾಮಾನ್ಯ ವರ್ಗದವರು ವಾಸಿಸುವ ಬೀದಿಗಳಿಗೆ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕಾಗಿ ಚಾಲನೆ ನೀಡಲಾಗಿದೆ. ಅಲ್ಪಸಂಖ್ಯಾತ ವರ್ಗದವರ ಬೀದಿ ರಸ್ತೆಗಳನ್ನು ಉನ್ನತೀಕರಿಸಲು 5 ಕೋಟಿ ಅನುದಾನ ಬಿಡುಗಡೆಗೊಳಿಸಲಾಗಿದೆ. ಜೊತೆಗೆ ಹುಲ್ಲಹಳ್ಳಿಯಿಂದ–ದುಗ್ಗಹಳ್ಳಿವರೆಗೆ ಹುರ ಮುಖ್ಯ ರಸ್ತೆ ಅಭಿವೃದ್ಧಿಗಾಗಿ 20 ಕೋಟಿ ವೆಚ್ಚದಲ್ಲಿ ಚಾಲನೆ ನೀಡಲಾಗಿದೆ ಎಂದರು.

ಅಲ್ಲದೆ ಪಂಚಾಯತ್ ರಾಜ್ ಇಲಾಖೆಯಿಂದ ಪ್ರಗತಿಪಥ ರಸ್ತೆ ಅಭಿವೃದ್ಧಿ ಯೋಜನೆಯಡಿ 10 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಟೆಂಡರ್ ಹಂತದಲ್ಲಿದೆ. ಜೊತೆಗೆ ಈಗಾಗಲೇ ಬದನವಾಳು ಮತ್ತು ದೇವನೂರು ಏತ ನೀರಾವರಿ ಯೋಜನೆ ಮೂಲಕ ಕೆರೆ ತುಂಬಿಸುವ ಯೋಜನೆಗೆ 90 ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ಮೀಸಲಿಡಲಾಗಿದೆ. ಬದನವಾಳು ಗ್ರಾಮದ ಖಾದಿ ಗ್ರಾಮೋದ್ಯೋಗ ಕೇಂದ್ರವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ರೂಪಿಸಲು 40 ಕೋಟಿ ಬಜೆಟ್‌ನಲ್ಲಿ ಘೋಷಣೆಯಾಗಿದ್ದು, ಶೀಘ್ರ ಕಾಮಗಾರಿಗಳಿಗೆ ಚಾಲನೆ ದೊರೆಯಲಿದೆ. ಆ ಮೂಲಕ ನಮ್ಮ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಕಡೆಗಣಿಸದೆ, ಅನುದಾನ ಬಿಡುಗಡೆಗೊಳಿಸಿ ಅಭಿವೃದ್ಧಿ ಕೆಲಸಗಳಿಗೂ ಒತ್ತು ನೀಡಿದೆ. ಬೇರೆ ಯಾವ ಕ್ಷೇತ್ರಗಳಲ್ಲೂ ಸಹ ಇಷ್ಟು ಅಭಿವೃದ್ಧಿ ಕಂಡಿಲ್ಲ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಜಿಪಂ ಮಾಜಿ ಸದಸ್ಯೆ ಲತಾ, ಅಕ್ರಮ ಸಕ್ರಮ ಸಮಿತಿ ಸದಸ್ಯ ಜಯರಾಮ, ಜಯಮಾಲ, ಗ್ರಾಪಂ ಸದಸ್ಯ ನಾರಾಯಣಸ್ವಾಮಿ, ತಾಪಂ ಮಾಜಿ ಸದಸ್ಯ ವೀರೇಂದ್ರ, ಮುಖಂಡರಾದ ದೊರೆಸ್ವಾಮಿ ನಾಯಕ, ಕುಳ್ಳಯ್ಯ, ನಾಗರಾಜಯ್ಯ, ರಾಜೇಶ್, ರಂಗಸ್ವಾಮಿ, ನಾಗರಾಜು, ಹೆಡತಲೆ ನಾಗರಾಜು, ನೇರಳೆ ಗ್ರಾಪಂ ಅಧ್ಯಕ್ಷ ಗಿರೀಶ್, ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷ ಶಿವಣ್ಣ, ಕಾಂಗ್ರೆಸ್ ಯುವ ಘಟಕ ಜಿಲ್ಲಾಧ್ಯಕ್ಷ ಚಂದನ್ ಗೌಡ, ತಾಲೂಕು ಅಧ್ಯಕ್ಷ ವಿಜಯಕುಮಾರ್ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಚಪ್ಪರದಹಳ್ಳಿ ಸರ್ಕಾರಿ ಶಾಲೆಗೆ ಕಂಪ್ಯೂಟರ್ ಕೊಡುಗೆ


ಬೆಟ್ಟದಪುರ ಸಮೀಪದ ಚಪ್ಪರದಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಒಕ್ಕಲಿಗ ಯುವ ಬ್ರಿಗೇಡ್ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ ನಂಜುಂಡ ಉಚಿತ ಹಾಗೂ ವೈಯಕ್ತಿಕವಾಗಿ ಶಾಲೆಗೆ ಕಂಪ್ಯೂಟರ್ ಕೊಡುಗೆ ನೀಡಿದರು.

ಬೆಟ್ಟದಪುರ, ಫೆ.28– ಸರ್ಕಾರಿ ಶಾಲೆಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಿಸುವ ಮೂಲಕ ಸಿಗುವಂತಹ ಸೌಲಭ್ಯಗಳನ್ನು ಗ್ರಾಮೀಣ ಜನರು ಬಳಕೆ ಮಾಡಿಕೊಳ್ಳಬೇಕು ಎಂದು ಒಕ್ಕಲಿಗ ಯುವ ಬ್ರಿಗೇಡ್ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ ನಂಜುಂಡ ಹೇಳಿದರು.

ಸಮೀಪದ ಚಪ್ಪರದಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶುಕ್ರವಾರ ನಂಜೇಗೌಡ ನಂಜುಂಡ ರವರು ಶಾಲೆಗೆ ಕಂಪ್ಯೂಟರ್ ಕೊಡುಗೆ ನೀಡಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುವುದಿಲ್ಲ ಎಂಬುದು ಸುಳ್ಳು. ಇತ್ತೀಚಿನ ದಿನಗಳಲ್ಲಿ ಖಾಸಗಿ ಶಾಲೆಗಳಿಗೆ ಸರಿಸಮನಾಗಿ ಸರಕಾರಿ ಶಾಲೆಗಳು ಫಲಿತಾಂಶ ದಾಖಲಿಸುತ್ತಿವೆ. ಆದರೆ ಪಾಲಕರಲ್ಲಿ ಖಾಸಗಿ ಶಾಲೆಗಳ ಮೇಲೆ ವ್ಯಾಮೋಹಕ್ಕೆ ಅರ್ಥವಿಲ್ಲ. ಸರ್ಕಾರಿ ಶಾಲೆಗಳಲ್ಲಿ ಓದಿದ ವಿದ್ಯಾರ್ಥಿಗಳು ಸಮಾಜದಲ್ಲಿ ನಿರೀಕ್ಷೆಗೂ ಮೀರಿ ಸಾಧನೆ ಮಾಡುತ್ತಿದ್ದಾರೆ ಎಂದರು.

ಉಪನ್ಯಾಸಕ ದರ್ಶನ್ ಕುಮಾರ್ ಮಾತನಾಡಿ, ಸರ್ಕಾರಿ ಶಾಲೆಯಲ್ಲಿ ಸಿಗುವಂತ ಗುಣಮಟ್ಟದ ಶಿಕ್ಷಣ ಎಲ್ಲಿಯೂ ಸಿಗಲ್ಲ. ನುರಿತ ಶಿಕ್ಷಕರನ್ನು ನಾವು ಸರ್ಕಾರಿ ಶಾಲೆಯಲ್ಲಿ ಕಾಣಬಹುದು. ಏಕೆಂದರೆ, ಇಲ್ಲಿನ ಶಿಕ್ಷಕರು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು, ಯಶಸ್ವಿಯಾಗಿ ಬಂದಿದ್ದಾರೆ. ಅಂತವರ ಮಾರ್ಗದರ್ಶನದಲ್ಲಿ ಕಲಿಯುವ ಅವಕಾಶ ಸಿಗುವುದು ಪುಣ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ನಂಜೇಗೌಡ ಹಾಗೂ ಉಪನ್ಯಾಸಕ ದರ್ಶನ್ ಅವರನ್ನು ಶಾಲೆಯ ವತಿಯಿಂದ ಸನ್ಮಾನಿಸಲಾಯಿತು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸಿ.ಎ.ನಂದೀಶ್, ಉಪಾಧ್ಯಕ್ಷೆ ಅನಿತಾ ರಮೇಶ್, ಉಪನ್ಯಾಸಕ ದರ್ಶನ್, ಮುಖ್ಯಶಿಕ್ಷಕ ಶಿವಾನಂದ್, ಶಿಕ್ಷಕರಾದ ಎಸ್.ಮಹೇಶ್, ಗಾಲಿಬ್ ಸಾಬ್ ಬಾಗಲಕೋಟೆ, ಚಂದನಾ, ಮೈನಾ, ಶಾಲಾಭಿವೃದ್ಧಿ ಸಮಿತಿಯ ಸದಸ್ಯರು ಸೇರಿದಂತೆ ಗ್ರಾಮಸ್ಥರು ಮತ್ತು ವಿದ್ಯಾರ್ಥಿಗಳು ಈ ಸಂದರ್ಭ ಇದ್ದರು.

ಬೀಳ್ಕೊಡುಗೆ....



ಮೈಸೂರು ತಾಲೂಕು ಜಯಪುರ ಹೋಬಳಿ ಕೇಂದ್ರದ ಪಶು ಚಿಕಿತ್ಸಾ ಆಸ್ಪತ್ರೆಯ ಸಹಾಯಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಜಯಪುರ ಗ್ರಾಮದ ಆರ್.ಜಯಾನಂದ ಅವರಿಗೆ ಪಶುಪಾಲನ ಇಲಾಖೆಯ ವತಿಯಿಂದ ಬೀಳ್ಕೊಡುಗೆ ನೀಡಿ ಸನ್ಮಾನಿಸಲಾಯಿತು. ಜಯಪುರ ಪಶು ವೈದ್ಯಾಧಿಕಾರಿ ಡಾ.ಕೆ.ಆರ್. ರಮಿತ್, ಕೆ. ಹೆಮ್ಮನಹಳ್ಳಿ ಪಶು ವೈದ್ಯಾಧಿಕಾರಿ ಡಾ.ದೀಪಕ್, ಗೋಪಾಲಪುರ ಪಶು ಆಸ್ಪತ್ರೆ ವೈದ್ಯಾಧಿಕಾರಿ ಡಾ.ರಕ್ಷಿತ್, ಜಾನುವಾರು ಅಧಿಕಾರಿ ಹಾಗೂ ಮೈಸೂರು ಜಿಲ್ಲಾ ಪಶುವೈದ್ಯಕೀಯ ಪರಿವೀಕ್ಷಕರ ಸಂಘದ ಅಧ್ಯಕ್ಷ ಡಿ.ಚಂದ್ರು, ಹಿರಿಯ ಪಶು ವೈದ್ಯಕೀಯ ಪರೀಕ್ಷಕರು ಹಾಗೂ ಮೈಸೂರು ಪಶು ವೈದ್ಯಕೀಯ ಪರೀಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿ ಎಂ.ಎ.ಸಿದ್ದರಾಜು, ಜಾನುವಾರು ಅಧಿಕಾರಿ ಎಚ್.ಬಿ.ಸೋಮು, ಕಿರಿಯ ಪಶು ವೈದ್ಯಕೀಯ ಪರೀಕ್ಷಕರಾದ ಕವಿತಾ, ಪಶು ಸಖಿಯರಾದ ಸುಕನ್ಯಾ, ಸೌಮ್ಯ, ಆಗ್ರೋ ಪ್ರವೀಣ್, ಮೆಡಿಕಲ್ ರಾಕೇಶ್ ಉಪಸ್ಥಿತರಿದ್ದರು.

ಲಕ್ಷಾಂತರ ರೂ. ಮೌಲ್ಯದ ಚಿನ್ನ, ನಗದು ಕಳ್ಳತನ

ತಿ.ನರಸೀಪುರ, ಫೆ.28– ಮನೆ ಬಾಗಿಲು ಮುರಿದು ಬೀರುವಿನಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ಚಿನ್ನ ಹಾಗೂ ಸಾವಿರಾರು ರೂ. ದೋಚಿರುವ ಘಟನೆ ತಾಲೂಕಿನ ಮರಡೀಪುರ ಗ್ರಾಮದಲ್ಲಿ ಗುರುವಾರ ರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ರಾಚಯ್ಯ ಅವರ ಮನೆ ಬಾಗಿಲು ಮುರಿದು ಒಳ ನುಗ್ಗಿರುವ ದುಷ್ಕರ್ಮಿಗಳು 121 ಗ್ರಾಂ ಚಿನ್ನ, 59 ಸಾವಿರ ರೂ. ದೋಚಿ ಪರಾರಿಯಾಗಿದ್ದಾರೆ. ರಾಚಯ್ಯನವರ ಪತ್ನಿ ಮನೆಗೆ ಬೀಗ ಹಾಕಿ ಕುಟುಂಬ ಸಮೇತರಾಗಿ ಕುಪ್ಪೇಗಾಲದ ತನ್ನ ತವರು ಮನೆಗೆ ತೆರಳಿದ್ದರು. ಇದನ್ನು ತಿಳಿದ ದುಷ್ಕರ್ಮಿಗಳು ಮನೆ ಬಾಗಿಲು ಮುರಿದು ಒಳನುಗ್ಗಿ ಚಿನ್ನ ಹಾಗೂ ನಗದು ದೋಚಿ ಪರಾರಿಯಾಗಿದ್ದಾರೆ. ಅಲ್ಲದೇ ಗ್ರಾಪಂನ ಕುಡಿಯುವ ನೀರಿನ ಘಟಕದ ಬಾಗಿಲು ಮೀಟಿ ಕಾಯಿನ್ ಬಾಕ್ಸ್‌ನಲ್ಲಿ ಸಂಗ್ರಹವಾಗಿದ್ದ 5 ರೂ.ಗಳಿದ್ದ ನಾಣ್ಯಗಳನ್ನು ದೋಚಿದ್ದಾರೆ. ವಿಷಯ ತಿಳಿದು ಬೆರಳಚ್ಚು, ಶ್ವಾನದಳದೊಂದಿಗೆ ಸ್ಥಳಕ್ಕಾಗಮಿಸಿದ ತಲಕಾಡು ಪೊಲೀಸರು ಪರಿಶೀಲನೆ ನಡೆಸಿದರು. ಈ ವೇಳೆ ಎಸ್‌ಐ ಮಹದೇವ್, ಹೆಮ್ಮಿಗೆ ಪಿಡಿಓ ಚಿದಾನಂದ ಇತರರಿದ್ದರು.


ಮೋಟಾರ್ ಕಳ್ಳತನ: ವಾರದ ಹಿಂದೆ ಅಕ್ಕೂರು ಗ್ರಾಮದ ರೈತರಿಬ್ಬರ ಪಂಪ್‌ಸೆಟ್ ಮೋಟಾರ್ ಹಾಗೂ ಕನೆಕ್ಟಿಂಗ್ ವೈರ್ ಅನ್ನು ಕಟ್ ಮಾಡಿಕೊಂಡು ಹೋಗಿರುವ ಘಟನೆ ನಡೆದಿದೆ. ಈ ಕುರಿತು ತಲಕಾಡು ಠಾಣೆಯಲ್ಲಿ ದೂರು ದಾಖಲಾಗಿದೆ.



ಸಾಲಬಾಧೆ: ರೈತ ಆತ್ಮಹತ್ಯೆ

ಹೆಚ್.ಡಿ.ಕೋಟೆ, ಫೆ.28– ಸಾಲಬಾಧೆ ತಾಳಲಾರದೇ ರೈತರೊಬ್ಬರು ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಹಳ್ಳದಮನುಗನಹಳ್ಳಿ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಹಳ್ಳದಮನುಗನಹಳ್ಳಿ ಗ್ರಾಮದ ರೈತ ಸೋಮಶೆಟ್ಟಿ (55) ಆತ್ಮಹತ್ಯೆ ಮಾಡಿಕೊಂಡವರು. ಈತ ತಮ್ಮ ಜಮೀನಿನಲ್ಲಿ ಬೋರ್‌ವೆಲ್ ಕೊರೆಸಲು ಮತ್ತು ವ್ಯವಸಾಯ ಮಾಡಲು ಬ್ಯಾಂಕ್ ಹಾಗೂ ಕೈ ಸಾಲವಾಗಿ 45 ಲಕ್ಷಕ್ಕೂ ಹೆಚ್ಚು ಸಾಲ ಮಾಡಿದ್ದರು ಎನ್ನಲಾಗಿದೆ. ಆದರೆ ಬೋರ್‌ವೆಲ್‌ನಲ್ಲಿ ನೀರು ಬಾರದ ಕಾರಣ ಫಸಲು ಬೆಳೆಯಲು ಸಾಧ್ಯವಾಗಿರಲಿಲ್ಲ. ಸಾಲ ತೀರಿಸುವಂತೆ ಒತ್ತಡ ಹೆಚ್ಚಾದ ಕಾರಣ ಸೋಮಶೆಟ್ಟಿ ಜಮೀನು, ಮನೆ ಮಾರಾಟ ಮಾಡಿ ಸಾಲ ತೀರಿಸಲು ಮುಂದಾಗಿದ್ದರು. ಆದರೂ ಸಾಲ ತೀರದ ಕಾರಣ ಮನನೊಂದು ಗುರುವಾರ ಸಂಜೆ ವಿಷ ಸೇವಿಸಿದ್ದರು. ಈ ವೇಳೆ ಅವರನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಗ್ರಾಮಕ್ಕೆ ಆಗಮಿಸಿದ ಕಂದಾಯ ಅಧಿಕಾರಿಗಳು ಪರಿಶೀಲಿಸಿದರು. ಈ ವೇಳೆ ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡರುವ ಸೋಮಶೆಟ್ಟಿ ಕುಟುಂಬಕ್ಕೆ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸಬೇಕು ಎಂದು ಅಧಿಕಾರಿಗಳಿಗೆ ಗ್ರಾಮಸ್ಥರು ಮನವಿ ಮಾಡಿದರು. ಈ ಸಂಬಂಧ ಹೆಚ್.ಡಿ.ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಸೋಮಶೆಟ್ಟಿ

ಸಮಾಜದಲ್ಲಿ ದಲಿತರನ್ನು ನೋಡುವ ಮನಸ್ಥಿತಿ ಬದಲಾಗಬೇಕು

ಅಸ್ಪೃಶ್ಯತಾ ನಿರ್ಮೂಲನಾ ಕಾರ್ಯಕ್ರಮದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ

ಹುಣಸೂರು, ಫೆ.28– ಅಸ್ಪೃಶ್ಯತೆ ಮಾನಸಿಕ ರೋಗವಾಗಿದ್ದು, ಸಮಾಜದಲ್ಲಿ ದಲಿತ ಸಮುದಾಯವನ್ನು ನೋಡುವ ಮನಸ್ಥಿತಿ ಬದಲಾಗಬೇಕು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಅಸ್ಪೃಶ್ಯತಾ ನಿರ್ಮೂಲನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶತಶತಮಾನಗಳಿಂದ ದಲಿತರು ಅಸ್ಪೃಶ್ಯತೆ, ಜಾತೀಯತೆ ಸಂಕೋಲೆಗಳಲ್ಲಿ ಸಿಲುಕಿ ಅವಮಾನ, ಅಪಮಾನಗಳಿಂದ ಸಂಕಷ್ಟದ ಬದುಕನ್ನು ದೂಡುವ ಸ್ಥಿತಿ ಇತ್ತು. ಡಾ.ಬಿ.ಆರ್.ಅಂಬೇಡ್ಕರ್ ಅವರ ನಿರಂತರ ಹೋರಾಟದ ಫಲವಾಗಿ ದಲಿತರಿಗೆ ಸಮಾನ ಅವಕಾಶ ಸಿಗುವಂತಾದವು ಎಂದರು.

ಇಂದಿಗೂ ಕೆಲವೆಡೆ ಅಸ್ಪೃಶ್ಯತೆ, ಜಾತೀಯತೆ ಜೀವಂತವಾಗಿರುವುದು ಅತ್ಯಂತ ನೋವಿನ ಸಂಗತಿ. ಪ್ರಸ್ತುತ ಕಾನೂನಿನಿಂದ ಮಾತ್ರ ಈ ಅನಿಷ್ಟ ಪದ್ಧತಿ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. ಬದಲಿಗೆ ಸಮಾಜದಲ್ಲಿ ದಲಿತ ಸಮುದಾಯವನ್ನು ನೋಡುವ ಮನಸ್ಥಿತಿ ಬದಲಾಗಬೇಕು. ಆಗ ಮಾತ್ರ ಇಂತಹ ಪದ್ಧತಿ ನಿರ್ಮೂಲನೆ ಸಾಧ್ಯ ಎಂದರು.

ದಲಿತ ಮುಖಂಡ ಆನಂದಸ್ವಾಮಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ದಲಿತರಿಗೆ ಮಾತ್ರ ಸೀಮಿತವಾಗದೇ ಇತರೆ ಸಮುದಾಯಗಳಿಗೂ ಅನಿವಾರ್ಯವಾಗಿ ನಾಯಕರಾಗುತ್ತಿದ್ದಾರೆ. ಅವರು ಬರೆದು ಸಂವಿಧಾನದಿಂದಾಗಿ ನಾವೆಲ್ಲರೂ ಸಮಾನ ಅವಕಾಶಗಳಿಂದ ಬದುಕಲು ಸಾಧ್ಯವಾಗುತ್ತಿದೆ. ಅಸ್ಪೃಶ್ಯತೆ ಇಂದಿಗೂ ಕೆಲ ಗ್ರಾಮಗಳಲ್ಲಿ ಜೀವಂತವಾಗಿದ್ದು, ಅಂತಹ ಗ್ರಾಮಗಳನ್ನು ಗುರುತಿಸಿ ತಾಲೂಕು ಆಡಳಿತ ಆ ಗ್ರಾಮಗಳಿಗೆ ಭೇಟಿ ನೀಡಿ ಅಸ್ಪೃಶ್ಯತೆ ನಡೆಯದಂತೆ ಕ್ರಮ ವಹಿಸಬೇಕು ಎಂದರು.


ಕಾರ್ಯಕ್ರಮವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ ಮಾತನಾಡಿ, ಈ ಹಿಂದೆ ದಲಿತರನ್ನು ಗಾಳಿ, ಬೆಳಕು ಹೊರತುಪಡಿಸಿ ಎಲ್ಲಾ ವಿಷಯಗಳಲ್ಲೂ ನಿರ್ಬಂಧಿಸಲಾಗಿತ್ತು. ಅಂಬೇಡ್ಕರ್ ಬಂದ ನಂತರ ಸಮಾಜ ನಮ್ಮನ್ನು ಮನುಷ್ಯನ ರೀತಿ ನೋಡಲು ಪ್ರಾರಂಭಿಸಿತು. ಸಂವಿಧಾನಬದ್ಧವಾಗಿ ದಲಿತರಿಗೆ ಕಾನೂನುಗಳಿದ್ದರೂ, ಇಂದಿಗೂ ಅಸ್ಪೃಶ್ಯತೆ ಜೀವಂತವಾಗಿದ್ದು, ದಲಿತರನ್ನು ರಾಜಕಾರಣಿಗಳು ಓಟ್ ಬ್ಯಾಂಕ್‌ಗಾಗಿ ನೋಡದೆ ದಲಿತರ ನೋವು, ಸಾಮಾಜಿಕ ಸಮಸ್ಯೆಗಳನ್ನು ಡಿ.ದೇವರಾಜ ಅರಸು ಅವರಂತೆ ಮನಗಂಡು ಸಾಮಾಜಿಕ ನ್ಯಾಯ ಕಲ್ಪಿಸಿ ಕೊಟ್ಟು ಸಮಾಜದಲ್ಲಿ ಮನುಷ್ಯರ ರೀತಿ ಬದುಕಲು ಅವಕಾಶ ಕಲ್ಪಿಸಿಕೊಡಬೇಕು ಎಂದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಮಂಜುನಾಥ್, ಇಓ ಹೊಂಗಯ್ಯ, ಸಮಾಜ ಕಲ್ಯಾಣಾಧಿಕಾರಿ ಅಶೋಕ, ನಗರಸಭಾಧ್ಯಕ್ಷ ಶರವಣ, ಉಪಾಧ್ಯಕ್ಷೆ ಆಶಾ, ನಾಯಕ ಸಮಾಜದ ಅಣ್ಣಯ್ಯ ನಾಯಕ, ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್, ಕುರುಬ ಸಮಾಜದ ಅಧ್ಯಕ್ಷ ಡಿ.ಕೆ.ಕುನ್ನೇಗೌಡ, ಮುಖಂಡರಾದ ನಾಗರಾಜ್ ಮಲ್ಲಾಡಿ, ಆದಿಜಾಂಬವ ಸಂಘದ ಡಿ.ಕುಮಾರ್, ಲಿಂಗಾಯಿತ ಸಮಾಜದ ವೀರಭದ್ರಪ್ಪ, ಮಹೇಶ್ ಆರಾಧ್ಯ, ದಸಂಸ ಕೆಂಪರಾಜು, ಸ್ವಾಮಿ, ಡೇವಿಡ್, ವಕೀಲ ಪುಟ್ಟರಾಜು, ಜಿಲ್ಲಾ ಎಸ್ಸಿ, ಎಸ್‌ಟಿ ಜಾಗೃತಿ ಸಮಿತಿ ಸದಸ್ಯ ಮಹದೇವ, ಜ್ಞಾನಜ್ಯೋತಿ ಸಂಸ್ಥೆ ಹೇಮಾವತಿ, ವಕೀಲರಾದ ಪವಿತ್ರಾ ಕಲಾವಿದರಾದ ಗಜೇಂದ್ರ ಪ್ರಭಾಕರ, ನಾಗೇಶ್, ತಾಲೂಕು ಮಟ್ಟದ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಆಲಗೂಡು ಪಿಎಸಿಎಸ್ ಚುನಾವಣೆ: ಹಲವರಿಂದ ನಾಮಪತ್ರ ಸಲ್ಲಿಕೆ



ಆಲಗೂಡು ಪಿಎಸಿಎಸ್‌ಗೆ ಮಹದೇವಮ್ಮ, ಧರ್ಮಯ್ಯನಹುಂಡಿ ಮಲ್ಲಣ್ಣ ನಾಮಪತ್ರ ಸಲ್ಲಿಸಿದರು.

ತಿ.ನರಸೀಪುರ, ಫೆ.28– ತಾಲೂಕಿನ ಹೆಳವರಹುಂಡಿ ಗ್ರಾಮದಲ್ಲಿರುವ ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಆಯ್ಕೆಗಾಗಿ ಮಾ.8ರಂದು ಚುನಾವಣೆ ನಡೆಯಲಿದ್ದು, ಶುಕ್ರವಾರ ಹಲವು ಮುಖಂಡರು ನಾಮಪತ್ರ ಸಲ್ಲಿಸಿದರು.

ಒಟ್ಟು 12 ಸದಸ್ಯ ಬಲದ ಸಹಕಾರ ಸಂಘಕ್ಕೆ ಹಲವು ಘಟಾನುಘಟಿಗಳು ನಾಮಪತ್ರ ಸಲ್ಲಿಸಿದ್ದು, ಮೂರ್ನಾಲ್ಕು ಬಣದ ಮುಖಂಡರು ತಮ್ಮ ಅಭ್ಯರ್ಥಿ ಗಳ 12 ಮಂದಿ ಅಭ್ಯರ್ಥಿಗಳ ಗುಂಪು ಒಳಗೊಂಡು ಗೆಲುವಿನ ಲೆಕ್ಕಾಚಾರದೊಂದಿಗೆ ಕಣಕ್ಕಿಳಿಯಲು ಕಾರ್ಯ ತಂತ್ರ ರೂಪಿಸಿ ಉಮೇದುವಾರಿಕೆ ಸಲ್ಲಿಕೆಗೆ ಮುಂದಾಗಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಸಹಕಾರ ಸಂಘದ ಮಾಜಿ ಅಧ್ಯಕ್ಷ ಹೆಳವರಹುಂಡಿ ಪಿ.ನಟರಾಜು ಪ್ರಮುಖ ಬಣದ ನಾಯಕರಾಗಿದ್ದು, ಅವರ ಬಣದಿಂದ 12 ಮಂದಿ ಅಭ್ಯರ್ಥಿಗಳು ಕಣಕ್ಕಿಳಿದಿದ್ದು, ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಶುಕ್ರವಾರ ನಟರಾಜು ಬಣದೊಂದಿಗೆ ಗುರುತಿಸಿಕೊಂಡಿರುವ ಮಹಿಳಾ ಸಾಮಾನ್ಯ ವರ್ಗದಿಂದ ಆಲಗೂಡು ಗ್ರಾಪಂ ಮಾಜಿ ಉಪಾಧ್ಯಕ್ಷ ಚಿಕ್ಕನಂಜಯ್ಯನವರ ಪತ್ನಿ ಮಹದೇವಮ್ಮ, ಎಂ.ಶೇಖರಪ್ಪ ಬಿ ವರ್ಗದಿಂದ ಕಾಂತಮಣಿ, ನಾಗಪ್ಪ, ಕರೋಹಟ್ಟಿ ಶಿವಮೂರ್ತಿ, 2 ಎ ವರ್ಗದಿಂದ ಮುದ್ದುಬೀರನಹುಂಡಿ ಮರಿಸ್ವಾಮಿ, ಸಾಮಾನ್ಯ ವರ್ಗಕ್ಕೆ ಮೀಸಲಾದ ಸ್ಥಾನಕ್ಕೆ ಮಹದೇವ, ಕಟ್ಟೆಹುಂಡಿ ಶಿವಣ್ಣ ಹಾಗೂ ಪರಿಶಿಷ್ಟ ಜಾತಿಗೆ ಮೀಸಲಾದ ಸ್ಥಾನಕ್ಕೆ ಯರಗನಹಳ್ಳಿ ಜಯಣ್ಣ ನಾಮಪತ್ರ ಸಲ್ಲಿಸಿದರೆ, ಸಾಲಗಾರರಲ್ಲದ ಕ್ಷೇತ್ರದಿಂದ ಸಹದೇವ ಉಮೇದುವಾರಿಕೆ ಸಲ್ಲಿಸಿದರು.

ಸಾಮಾನ್ಯ ಮಹಿಳಾ ವರ್ಗದಿಂದ ಸ್ಪರ್ಧಿಸಿರುವ ಹೆಳವರಹುಂಡಿ ಮಹದೇವಮ್ಮ ಚಿಕ್ಕನಂಜಯ ಮಾತನಾಡಿ, ನಾನು ಹಿಂದೆ ಡೈರಿ ಅಧ್ಯಕ್ಷರಾಗಿ ರೈತರಿಗೆ ಬೇಕಾಗುವ ಹತ್ತು ಹಲವು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದ್ದೇನೆ. ಸಹಕಾರ ಸಂಘದ ಜನರು ಕೈ ಹಿಡಿಯುತ್ತಾರೆ ಎಂದರು.

ಮಾಜಿ ಅಧ್ಯಕ್ಷ ಪಿ.ನಟರಾಜು ಬಣದಿಂದ ಸ್ಪರ್ಧಿಸಿದ್ದು, ನಮ್ಮ ಬಣಕ್ಕೆ ಮತದಾರರು ಹೆಚ್ಚಿನ ಒಲವು ತೋರುತ್ತಿದ್ದು ನಾವು 12 ಮಂದಿ ಜಯಭೇರಿ ಬಾರಿಸುತ್ತೇವೆ. ನಿಮ್ಮೆಲ್ಲರ ಸಹಕಾರ ಹೀಗೆ ಮುಂದುವರೆಯಲಿ ಎಂದು ಮನವಿ ಮಾಡಿದರು. ಶನಿವಾರ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ವಾಪಸ್ ಪಡೆಯಲು ಭಾನುವಾರ ಅಂತಿಮ ದಿನ. ಮಾ.8 ರಂದು ನಿರ್ದೇಶಕರ ಆಯ್ಕೆಗಾಗಿ ಚುನಾವಣೆ ನಡೆಯಲಿದೆ ಎಂದು ಚುನಾವಣಾಧಿಕಾರಿ ಹಸೀನಾ ತಿಳಿಸಿದ್ದಾರೆ.

ಶತಾಯುಷಿ ಪಟೇಲ್ ಗಣೇಶೇಗೌಡ ನಿಧನ

ಹೆಚ್.ಡಿ.ಕೋಟೆ, ಫೆ.28– ತಾಲೂಕಿನ ಹಳ್ಳದ ಮನುಗನಹಳ್ಳಿ ಗ್ರಾಮದ ನಿವಾಸಿ ಪಟೇಲ್ ಗಣೇಶೇಗೌಡ(100) ಗುರುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಇಬ್ಬರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಸಂಜೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.





ಮೈಸೂರು ಮಿತ್ರ

ಶನಿವಾರ 1 ಮಾರ್ಚ್ 2025

ಇನ್ನತ್ತು ವರ್ಷದಲ್ಲಿ ಸ್ವಾಯತ್ತ ಕಾಲೇಜುಗಳ ಸಂಖ್ಯೆ ಹೆಚ್ಚಾಗಲಿದೆ

• ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ|| ಎನ್.ಎಸ್. ರಾಮೇಗೌಡ ಭವಿಷ್ಯ

• ಮಹಾರಾಜ ಪಿಯು ಕಾಲೇಜು ನಿವೃತ್ತ ಪ್ರಿನ್ಸಿಪಾಲ್ ಪ್ರೊ. ಎಂ.ಕೆ.ರಾಮಸ್ವಾಮಿ ಅಭಿನಂದನಾ ಸಮಾರಂಭ

ಮೈಸೂರು,ಫೆ.28(ಎಂಟಿವೈ)–ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆಗಳಾಗುತ್ತಿದ್ದು, 2035ರ ವೇಳೆಗೆ ವಿಶ್ವವಿದ್ಯಾನಿಲಯಗಳ ಸಂಯೋಜಿತ (ಅಫಿಲೇಟೆಡ್) ಕಾಲೇಜುಗಳು ಸ್ವಾಯತ್ತ(ಅಟಾನಮಸ್) ಕಾಲೇಜುಗಳಾಗಿ ಮಾರ್ಪಡುತ್ತವೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಎನ್.ಎಸ್.ರಾಮೇಗೌಡ ಭವಿಷ್ಯ ನುಡಿದಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಭಾಗಣದಲ್ಲಿ ಎಂ.ಕೆ.ರಾಮಸ್ವಾಮಿ ಸ್ನೇಹ ಬಳಗದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ವಿಜ್ಞಾನ ಲೇಖಕರೂ ಆದ ಮಹಾರಾಜ ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ.ಎಂ.ಕೆ.ರಾಮಸ್ವಾಮಿ ಅವರ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ಕೆಲವೇ ಕೆಲವು ಸರ್ಕಾರಿ ವಿಶ್ವವಿದ್ಯಾನಿಲಯಗಳಿದ್ದವು. ಇದೀಗ ಸರ್ಕಾರಿ ವಿಶ್ವವಿದ್ಯಾನಿಲಯಗಳೊಂದಿಗೆ, ಸಾಕಷ್ಟು ಡೀಮ್ಡ್ ವಿಶ್ವವಿದ್ಯಾನಿಲಯಗಳನ್ನು ಕಾಣಬಹುದಾಗಿದೆ. ಆ ಮೂಲಕ ಉನ್ನತ ಶಿಕ್ಷಣ ಕ್ಷೇತ್ರ ವಿಸ್ತಾರಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯಾಗುತ್ತಿವೆ. ಅದನ್ನು ಶಿಕ್ಷಕ ವೃಂದ ಸೇರಿದಂತೆ ಎಲ್ಲರೂ ಗಮನಿಸಬೇಕು ಎಂದರು.

ಉನ್ನತ ಶಿಕ್ಷಣ ವಲಯ ವಿಸ್ತಾರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ದೇಶದಲ್ಲಿ 450ಕ್ಕೂ ಹೆಚ್ಚು ಸರ್ಕಾರಿ ವಿಶ್ವವಿದ್ಯಾನಿಲಯಗಳಿವೆ. ಇದರೊಂದಿಗೆ 50 ಸಾವಿರಕ್ಕೂ ಹೆಚ್ಚು ಸಂಯೋಜಿತ(ಅಫಿಲೇಟೆಡ್) ಕಾಲೇಜುಗಳಿವೆ.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಭಾಂಗಣದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಮಹಾರಾಜ ಪದವಿ ಪೂರ್ವ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಪ್ರೊ.ಎಂ.ಕೆ.ರಾಮಸ್ವಾಮಿ ಹಾಗೂ ಪ್ರಮೀಳಾ ದಂಪತಿಯನ್ನು ಸನ್ಮಾನಿಸಲಾಯಿತು.

ಪ್ರಸ್ತುತ ಸಂದರ್ಭದಲ್ಲಿ ಮೂರು ಬಗೆಯ ವಿಶ್ವವಿದ್ಯಾನಿಲಯಗಳಿವೆ. ಸರ್ಕಾರಿ, ಡೀಮ್ಡ್ ಹಾಗೂ ಖಾಸಗಿ (ಸ್ಟೇಟ್ ಪ್ರೈವೇಟ್) ವಿಶ್ವವಿದ್ಯಾನಿಲಯಗಳಿವೆ. ಮುಂದಿನ ಹತ್ತು ವರ್ಷದಲ್ಲಿ ಶಿಕ್ಷಣ ಕ್ಷೇತ್ರದಲ್ಲಾಗುವ ಅಮೂಲಾಗ್ರ ಬದಲಾವಣೆಯಿಂದಾಗಿ ಸಂಯೋಜಿತ ಕಾಲೇಜುಗಳು ಮಾಯವಾಗಲಿದೆ ಎಂದು ಭವಿಷ್ಯ ನುಡಿದರು.

ಅನಿರೀಕ್ಷಿತವಾಗಿ ಸವಾಲು ಎದುರಾಗುತ್ತದೆ: ಪ್ರತಿಯೊಬ್ಬ ಶಿಕ್ಷಕರಿಗೂ ಆಕಸ್ಮಿಕವಾಗಿ ಅನೇಕ ಸವಾಲು ಎದುರಾಗುತ್ತದೆ. ಇಂತಹ ಸವಾಲುಗಳನ್ನು ಮೆಟ್ಟಿ ನಿಂತವರಲ್ಲಿ ಎಂ.ಕೆ.ರಾಮಸ್ವಾಮಿ ಒಬ್ಬರು. ವಿಜ್ಞಾನ ವಿಷಯವನ್ನು ಕನ್ನಡದಲ್ಲಿ ಬೋಧಿಸಬೇಕಾದ ಅನಿವಾರ್ಯತೆ ಎದುರಾದಾಗ ಎಂ.ಕೆ.ರಾಮಸ್ವಾಮಿ ಅದನ್ನು ಯಶಸ್ವಿಯಾಗಿ ನಿಭಾಯಿಸಿದರು. ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಪಡೆದಿದ್ದರೂ ವಿಜ್ಞಾನ ಪಾಠವನ್ನು ಕನ್ನಡದಲ್ಲಿ ಮಾಡುವುದರೊಂದಿಗೆ ಲೇಖನ ಮತ್ತು ಪುಸ್ತಕಗಳನ್ನು ಬರೆಯುವ ಮೂಲಕ ಸವಾಲನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಪ್ರೊ.ಎಂ.ಕೆ.ರಾಮಸ್ವಾಮಿ ಅವರಂತೆ ನನ್ನ ವೃತ್ತಿ ಜೀವನದಲ್ಲೂ ಸವಾಲೊಂದು ಎದುರಾಗಿತ್ತು. ಇಂಗ್ಲೀಷ್‌ನಲ್ಲಿ ಮಾತನಾಡಲು ಬರದೆ ಇದ್ದ ನನಗೆ ಒಮ್ಮೆ ಬೆಂಗಳೂರಿನ ಶಿಕ್ಷಣ ಸಂಸ್ಥೆಯೊಂದರ ಶಿಕ್ಷಣ ತಜ್ಞರೊಂದಿಗೆ ಸಂದರ್ಶಿಸಬೇಕಾದ ಅನಿವಾರ್ಯತೆ ಎದುರಾಯಿತು. ಅದಕ್ಕೆ ಬುನಾದಿ ಹಾಕಿಕೊಟ್ಟಿದ್ದು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ಪಡೆದ ಮೊಟ್ಟ ಮೊದಲ ಗ್ರಾಮೀಣ ವಿದ್ಯಾರ್ಥಿ ಎಂಬ ಖ್ಯಾತಿಗಳಿಸಿದ್ದ ಕರಿಯಪ್ಪ . ಕರಿಯಪ್ಪ ಅವರು ನನ್ನನ್ನೂ ಒಳಗೊಂಡಂತೆ ಕೆಲವರಿಗೆ ಇಂಗ್ಲೀಷ್‌ನಲ್ಲಿ ಡಿಕ್ಟೇಶನ್ ಕೊಡುತ್ತಿದ್ದರು. ಅವರ ಮಾತನ್ನು ಆಲಿಸುತ್ತಿದ್ದ ನಾನು ಇಂಗ್ಲೀಷ್‌ನಲ್ಲಿ ಮಾತನಾಡಲು ಸಹಕಾರಿಯಾಯಿತು ಎಂದು ಸ್ಮರಿಸಿದರು.

ವಿದ್ಯಾರ್ಥಿ ದೆಸೆಯಲ್ಲಿ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ನೂರಾರು ಶಿಕ್ಷಕರು ಪಾಠ ಮಾಡಿದರು. ಕೆಲವೇ ಕೆಲವರು ಅವರ ಮನದಲ್ಲಿ ಉಳಿಯುತ್ತಾರೆ. ಇಂತಹ ಸಾಲಿನಲ್ಲಿ ಎಂ.ಕೆ.ರಾಮಸ್ವಾಮಿ ಮುಂಚೂಣಿಯಲ್ಲಿ ನಿಲ್ಲುತ್ತಾರೆ ಎಂದು ಹೇಳಿದರು.

ಇದೆ ಸಂದರ್ಭದಲ್ಲಿ 75 ವರ್ಷದ ಅಂಗವಾಗಿ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಪ್ರೊ.ಎಂ.ಕೆ.ರಾಮಸ್ವಾಮಿ ಮತ್ತು ಪತ್ನಿ ಪ್ರಮೀಳಾ ದಂಪತಿಗೆ ಮೈಸೂರು ಪೇಟಾ, ಹಾರ– ಶಾಲು ಹಾಕಿ ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ವಹಿಸಿದ್ದರು. ಪದವಿಪೂರ್ವ ಶಿಕ್ಷಣ ಇಲಾಖೆಯ ವಿಶ್ರಾಂತ ನಿರ್ದೇಶಕ ಬಿ.ಎಸ್.ಶ್ರೀಧರ ರಾಜೇ ಅರಸ್ ಅಭಿನಂದನಾ ನುಡಿ ಆಡಿದರು. ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರಾಂಶುಪಾಲರಾದ ಡಾ.ಹೊನ್ನಯ್ಯ, ಎಸ್.ಚಿದಂಬರ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಶಭಾಷ್ ಬಡ್ಡಿಮಗ್ನೆ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಡ್ರ್ಯಾಗನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
1990's (ಕ)	4 ಪ್ರದರ್ಶನಗಳು
ಗಾಯಿತ್ರಿ	
ಛಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ಶಬ್ದಂ(ತ)	4 ಪ್ರದರ್ಶನಗಳು
ಸಂಗಂ	
ಅಪಾಯವಿದೆ ಎಚ್ಚರಿಕೆ + FIR (ಕ)	2+2 ಪ್ರದರ್ಶನಗಳು
ಲಿಡೋ	
1990's (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
FORST (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ಧಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರಾಜ್ಯದಲ್ಲಿ ಬಾಕಿ ಉಳಿದಿರುವ 24 ಸಾವಿರ ಪೌರ ಕಾರ್ಮಿಕರನ್ನು ನೇರ ನೇಮಕಾತಿ ಮಾಡಿ

ಮೈಸೂರು ನಗರ ಪಾಲಿಕೆ ಖಾಯಂ ಪೌರ ಕಾರ್ಮಿಕ, ಗುತ್ತಿಗೆ ಪೌರ ಕಾರ್ಮಿಕರ ಮಹಾಸಂಘ ಆಗ್ರಹ

ಮೈಸೂರು, ಫೆ.28(ಜಿಎ)–ರಾಜ್ಯದಲ್ಲಿ ಬಾಕಿ ಉಳಿದಿರುವ 24 ಸಾವಿರ ಪೌರ ಕಾರ್ಮಿಕರನ್ನು ಈ ಕೂಡಲೇ ನೇರ ನೇಮಕಾತಿ ಅಡಿಯಲ್ಲಿ ನೇಮಕ ಮಾಡಿಕೊಳ್ಳಬೇಕು. ಒಳ ಚರಂಡಿ ಕಾರ್ಮಿಕರನ್ನೂ ಪರಿಗಣಿಸಬೇಕು. ಈ ಬಾರಿಯ ರಾಜ್ಯ ಬಜೆಟ್ ವೇಳೆ ಈ ಕುರಿತ ಕ್ರಮ ಕೈಗೊಳ್ಳಬೇಕು ಎಂದು ಮೈಸೂರು ನಗರ ಪಾಲಿಕೆ ಕಾಯಂ ಪೌರ ಕಾರ್ಮಿಕರ ಹಾಗೂ ಗುತ್ತಿಗೆ ಪೌರ ಕಾರ್ಮಿಕರ ಮಹಾ ಸಂಘ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಉನ್ನತ ಸಮಿತಿ ಅಧ್ಯಕ್ಷ ಎನ್.ಮಾರ ಮಾತನಾಡಿ, ಸರ್ಕಾರ ಪದೇ ಪದೇ ಭರವಸೆ ನೀಡುತ್ತ ಬಂದಿದ್ದರೂ ಈ ಕುರಿತು ಕ್ರಮ ಕೈಗೊಂಡಿಲ್ಲದಿರುವುದು ಬೇಸರದ ಸಂಗತಿಯಾಗಿದ್ದು, ರಾಜ್ಯ ಸರ್ಕಾರಿ ನೌಕರರ ರೀತಿ ಇವರಿಗೂ ಆರೋಗ್ಯ ಸಂಜೀವಿನಿ ವಿಸ್ತರಿಸಬೇಕು. ಮೈಸೂರು ಮಹಾ ನಗರ ಪಾಲಿಕೆಯಲ್ಲಿ ಈಗಾಗಲೇ ನೇರ ನೇಮಕಾತಿ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 68 ಮಂದಿ ಸೇವಾವಧಿಯಲ್ಲಿ ಮರಣ ಹೊಂದಿದ್ದಾರೆ. ಇವರ ಕುಟುಂಬದ ಅವಲಂಬಿತರಿಗೆ ಮಾನವೀಯತೆ ಆಧಾರದ ಮೇಲೆ ಕೆಲಸ ಕೊಡಬೇಕು ಎಂದು ಆಗ್ರಹಿಸಿದರು.

ಪಾಲಿಕೆಯಲ್ಲಿರುವ 231 ಮಂದಿ ಒಳ ಚರಂಡಿ ಸಹಾಯಕ ಕಾರ್ಮಿಕರು ಕಳೆದ 25 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಇವರನ್ನೂ ನೇರ ನೇಮಕಾತಿ ಅಡಿಯಲ್ಲಿ ನೇಮಕ ಮಾಡಿಕೊಳ್ಳಲು ಪ್ರಸಕ್ತ ಬಜೆಟ್‌ನಲ್ಲಿ ಘೋಷಿಸಬೇಕು. ಮೈಸೂರು ಮಹಾ ನಗರ ಪಾಲಿಕೆಯಲ್ಲಿ ಮನೆ ಮನೆ ಕಸ ವಿಲೇವಾರಿ ಹಾಗೂ ಕಸ ಸಂಗ್ರಹಣೆ ಮಾಡುವ ಕಸದ ಆಟೋ, ಟಿಪ್ಪರ್ ಚಾಲಕರನ್ನು ನೇರ ನೇಮಕ ಮಾಡಿಕೊಳ್ಳಬೇಕು. ಪಾಲಿಕೆಯಲ್ಲಿ ಇನ್ನುಳಿದಂತೆ ಖಾಲಿ ಇರುವ 156 ಪೌರ ಕಾರ್ಮಿಕರ ಹುದ್ದೆಗಳನ್ನು ಈ ಕೂಡಲೇ ನೇಮಕ ಮಾಡಿಕೊಳ್ಳಬೇಕು ಎಂಬಿತ್ಯಾದಿ ಬೇಡಿಕೆ ಈಡೇರಿಗೆ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಕುಮಾರಸ್ವಾಮಿ, ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ರಂಗೋಲಿಯಲ್ಲಿ ಅರಳಿದ ಶಿವನ ಚಿತ್ರಗಳು



ಮೈಸೂರಿನ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಮಹಾಶಿವರಾತ್ರಿ ಅಂಗವಾಗಿ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿತ್ತು.

ಮೈಸೂರು, ಫೆ.28–ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಸಮೃದ್ಧಿ ಟ್ರಸ್ಟ್, ಕೆಎಂಪಿಕೆ ಟ್ರಸ್ಟ್ ಮತ್ತು ಜೆಸಿಐ ಮೈಸೂರು ಕಿಂಗ್ ಲೇಡೀಸ್ ವತಿಯಿಂದ ಮಹಾಶಿವರಾತ್ರಿ ಅಂಗವಾಗಿ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿತ್ತು.

ಕಿರಿಯರಿಂದ ಹಿರಿಯರವರೆಗೂ 50ಕ್ಕೂ ಹೆಚ್ಚು ಮಹಿಳೆಯರು ರಂಗೋಲಿಯಲ್ಲಿ ಶಿವನ ಚಿತ್ರವನ್ನು ಬಿಡಿಸಿದರು. ಅತ್ಯುತ್ತಮ 5 ರಂಗೋಲಿ ಸ್ಪರ್ಧಿಗಳಾದ ರಾಮಾನುಜ ರಸ್ತೆಯ ನಿವಾಸಿ ಸುಶೀಲಾ, ಕಲ್ಯಾಣಗಿರಿಯ ಕೋಮಲಾ, ವಿದ್ಯಾರಣ್ಯಪುರಂನ ವನಿತಾ ಸುಭಾಷ್, ಜನಿಷಾ ಎಂ.ಎಚ್. ಹಾಗೂ ಶ್ರೀರಾಂಪುರದ ಮಂಗಳಾ ಅವರಿಗೆ ಬಹುಮಾನ ನೀಡಲಾಯಿತು.

ಹಿರಿಯ ಸಮಾಜ ಸೇವಕ ಡಾ.ಕೆ. ರಘುರಾಮ್ ವಾಜಪೇಯಿ ಮಾತನಾಡಿ, ಸಂಸ್ಕೃತಿ, ಪರಂಪರೆ ಆಚಾರ ವಿಚಾರ ಉಳಿಸಿ ಬೆಳೆಸುವಲ್ಲಿ ಹಬ್ಬಗಳ ಪಾತ್ರ ಮಹತ್ವವಾಗಿದೆ. ಹಬ್ಬಗಳು ನಮ್ಮ ಸಂಸ್ಕೃತಿಯ ಪ್ರತೀಕ, ಮನುಷ್ಯ ಮನುಷ್ಯರ ನಡುವೆ ಬಾಂಧವ್ಯ ಬೆಳೆಸಲು ಹಬ್ಬಗಳು ಸಹಕಾರಿ, ಸದೃಢ, ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಇಂತಹ ಹಬ್ಬಗಳ ಮೂಲಕ ಇಂತಹ ಸ್ಪರ್ಧೆಗಳು ಸಹಕಾರಿಯಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮಹರ್ಷಿ ಪಬ್ಲಿಕ್ ಶಾಲೆಯ ಸಿಇಓ ತೇಜಸ್ ಶಂಕರ್, ಸಮೃದ್ಧಿ ಟ್ರಸ್ಟ್ ಅಧ್ಯಕ್ಷರಾದ ಸಹನಗೌಡ, ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷರಾದ ರೇಖಾ ಶ್ರೀನಿವಾಸ್, ಸಾಯಿರಾಂ ಫೌಂಡೇಷನ್ ಅಧ್ಯಕ್ಷ ಖುಷಿ, ಅಂಬಾ ಭವಾನಿ ಸಮಾಜ ಮಹಿಳಾ ಅಧ್ಯಕ್ಷರಾದ ಸವಿತಾ ಘಾಟ್ಕೆ, ವಕೀಲರಾದ ಜಯಶ್ರೀ ಶಿವರಾಮ್, ಸಂಧ್ಯಾ, ಸುಶೀಲ, ಮಹಾನ್ ಶ್ರೇಯಸ್, ಜೆಸಿಐ ಸದಸ್ಯರಾದ ಮೋಹನ್ ರಾಚಯ್ಯ, ಗೌತಮ್ ಹಾಗೂ ಇನ್ನಿತರರು ಹಾಜರಿದ್ದರು.

ಮಾ.3ರಿಂದ ಮೈಸೂರಲ್ಲಿ ರಂಗ ಸಂಭ್ರಮ ನಾಟಕೋತ್ಸವ

ಮೈಸೂರು, ಫೆ.28(ಜಿಎ)–ನಾದರಂಗ ಸಂಸ್ಥೆ ವತಿಯಿಂದ ಮಾ.3ರಿಂದ 5ರವರೆಗೆ ಕಲಾ ಮಂದಿರದ ಕಿರು ರಂಗಮಂದಿರದಲ್ಲಿ ರಂಗ ಸಂಭ್ರಮ ನಾಟಕೋತ್ಸವ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಈ ವಿಷಯ ತಿಳಿಸಿ, ಮಾ.3ರಂದು ರಾತ್ರಿ 6.45ಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ನಾಟಕೋತ್ಸವ ಉದ್ಘಾಟಿಸುವರು, ತಾವು ಅಧ್ಯಕ್ಷತೆ ವಹಿಸಲಿದ್ದು, ಬಿ.ಎಂ.ರಾಮಚಂದ್ರ, ಕೃಷ್ಣ ಜನಮನ ಆಗಮಿಸಲಿದ್ದಾರೆ ಎಂದರು.

ನಂತರ ರಾತ್ರಿ 7 ಗಂಟೆಗೆ ಗುರುಕುಲಾ ಶಾಲೆ ತಂಡದಿಂದ ಕೋ. ಚನ್ನಬಸಪ್ಪ ಅವರ 'ಅಯ್ಯನಕೆರೆ' ಜಾನಪದ ನಾಟಕ, ಮಾ.4 ರಂದು ರಾತ್ರಿ 7 ಗಂಟೆಗೆ ನಾದರಂಗ ತಂಡದಿಂದ ರಾಜಾನಂದ್ ವಿರಚಿತ 'ಅಮೋಘ ಅಶ್ವತ್ಥಾಮ' ನಾಟಕ, ಮಾ.5ರಂದು ರಾತ್ರಿ 7ಗಂಟೆಗೆ ರಂಗ ಬಂಡಿ ತಂಡದಿಂದ ಹೆಚ್.ಎಸ್. ವೆಂಕಟೇಶ ಮೂರ್ತಿ ವಿರಚಿತ 'ಅಳಿಲು ರಾಮಾಯಣ' ಮಕ್ಕಳ ನಾಟಕ ಪ್ರದರ್ಶನವಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಿ.ನಾಗೇಂದ್ರ ಕುಮಾರ್, ರಂಗಸ್ವಾಮಿ, ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಶಿವರಾತ್ರಿ ಅಂಗವಾಗಿ ಮಾಜಿ ಸಂಸದ ಪ್ರತಾಪ್ ಸಿಂಹ ವಿವಿಧ ದೇವಾಲಯಗಳಿಗೆ ಭೇಟಿ

ಧಾರ್ಮಿಕ ನಂಬಿಕೆಯಲ್ಲಿ ಅಡಗಿದೆ ಬದುಕಿನ ಶ್ರೇಷ್ಠತೆ



ಶಿವರಾತ್ರಿ ಅಂಗವಾಗಿ ಮಾಜಿ ಸಂಸದ ಪ್ರತಾಪ್ ಸಿಂಹ ಶ್ರೀ ಕನಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಮೈಸೂರು, ಫೆ. 28– ಮಹಾಶಿವರಾತ್ರಿ ಅಂಗವಾಗಿ ಮಾಜಿ ಸಂಸದ ಪ್ರತಾಪ್ ಸಿಂಹ ಅಶೋಕ ರಸ್ತೆಯಲ್ಲಿರುವ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನ, ಹಳೆ ಸಂತೆಪೇಟೆಯ ಪ್ರಸನ್ನ ನಂಜುಂಡೇಶ್ವರ ದೇವಸ್ಥಾನ, ದೇವರಾಜ ಮೊಹಲ್ಲಾ ದಿವಾನ್ಸ್ ರಸ್ತೆ ಶ್ರೀ ಅಮೃತೇಶ್ವರ ದೇವಸ್ಥಾನ ಹಾಗೂ ಮೇಟಗಳ್ಳಿಯ ಶ್ರೀ ಮಹಾಲಿಂಗೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆಯಲ್ಲಿ ಪಾಲ್ಗೊಂಡರು. ನಂತರ ಮಾತನಾಡಿದ ಅವರು, ಮನುಷ್ಯನಲ್ಲಿಯ ಅಂಧಕಾರ, ಅಹಂಕಾರ ಮತ್ತು ವಿಕಾರಾದಿಗಳನ್ನು ದೂರ ಮಾಡುವ ಮೂಲಕ ಶಿವರಾತ್ರಿಯ ಧ್ಯಾನವು ಶಾಂತಿ, ನೆಮ್ಮದಿಯನ್ನು ಪ್ರಾಪ್ತಿಗೊಳಿಸುತ್ತದೆ ಎಂದು ಹೇಳಿದರು.

ಬಿಜೆಪಿ ಮುಖಂಡರಾದ ಎಸ್.ಕೆ. ದಿನೇಶ್, ರಾ.ಪರಮೇಶ್ ಗೌಡ, ಸಂದೇಶ್, ಸತೀಶ್, ಬ್ರಹ್ಮಚಾರ್, ವಿ.ಎಸ್. ಕಿರಣ್, ರಾಮು, ಅರುಣ್, ವಿನೋದ್ ಅರಸ್, ಪ್ರಮೋದ್‌ಗೌಡ, ಮಲ್ಲಿಕ್, ಕಾಂತ, ದೇವರಾಜ್, ಸಂಜೀವಿನಿ ಕುಮಾರ್, ದಿವಾಕರ್, ಟೆನ್ನಿಸ್ ಗೋಪಿ, ರವಿಕುಮಾರ್, ಚಿಕ್ಕ ರಾಮಣ್ಣ ಮತ್ತಿತರರು ಹಾಜರಿದ್ದರು.

ಎಂಪಿಎಂಸಿಯಲ್ಲಿ ಹೊರ ರಾಜ್ಯದ ವ್ಯಾಪಾರಿಗಳಿಂದ ಕೃಷಿಯೇತರ ಉತ್ಪನ್ನಗಳ ಮಾರಾಟ

ಅಧಿಕಾರಿಗಳು, ರಾಜಕಾರಣಿಗಳು ಶಾಮೀಲು ಆರೋಪ

ಮೈಸೂರು, ಫೆ.28(ಜಿಎ)–ಮೈಸೂರಿನ ಎಪಿಎಂಸಿ ಆವರಣದಲ್ಲಿ ಹೊರ ರಾಜ್ಯದ ವ್ಯಾಪಾರಿಗಳಿಗೆ ಅವಕಾಶ ಕಲ್ಪಿಸಿದ್ದು, ಅವರು ಕೃಷಿ ಉತ್ಪನ್ನದ ಬದಲು ಕೃಷಿಯೇತರ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದಾರೆ. ಅದರಲ್ಲಿ ಅಧಿಕಾರಿಗಳು, ರಾಜಕಾರಣಿಗಳು ಶಾಮೀಲಾಗಿದ್ದಾರೆ ಎಂದು ಕರ್ನಾಟಕ ಸೇನಾ ಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾ ಹಗರಣಕ್ಕಿಂತಲೂ ದೊಡ್ಡದಾದ ಹಗರಣ ನಗರದ ಬಂಡೀಪಾಳ್ಯ ಎಪಿಎಂಸಿಯಲ್ಲಿ ನಡೆದಿದ್ದು, ಹಳೇ ಸಂತೇಪೇಟೆಯಲ್ಲಿ ಆರ್‌ಎಂಸಿ ಪರವಾನಗಿ ಹಾಗೂ ಆರ್‌ಎಂಸಿ ತೆರಿಗೆ ಶುಲ್ಕ ಪಾವತಿಸಿಕೊಂಡು ಬಂದಿರುವ ವ್ಯಾಪಾರಿಗಳಿಗೆ ಬಂಡಿಪಾಳ್ಯ ಎಪಿಎಂಸಿ ಆವರಣದಲ್ಲಿ ವ್ಯಾಪಾರ ವಹಿವಾಟು ನಡೆಸಲು ಖಾಲಿ ನಿವೇಶನ ನೀಡಲಾಗಿತ್ತು. ಆದರೆ ಇದನ್ನು ಪಡೆದವರು ನಿಯಮ ಬಾಹಿರವಾಗಿ, ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಿಸಿಕೊಂಡು ಬಾಡಿಗೆಗೆ ನೀಡಿದ್ದಾರೆ ಎಂದರು.

ಅಧಿಕಾರಿಗಳು ಹಾಗೂ ರಾಜಕಾರಣಿಗಳು ಈ ಬಗ್ಗೆ ಅರಿವಿದ್ದರೂ ಹಫ್ತಾ ಪಡೆದು ಸುಮ್ಮನಿದ್ದಾರೆ. ಇಲ್ಲಿ ದಿನಸಿ ಬದಲು ಗುಟ್ಕಾ ಮೊದಲಾದವನ್ನು ಷರತ್ತಿಗೆ ವಿರುದ್ಧವಾಗಿ ಮಾರಾಟ ಮಾಡುವವರೇ ಹೆಚ್ಚಾಗಿದ್ದಾರೆ. ಜೊತೆಗೆ ಸ್ಥಳೀಯರನ್ನು ಕಡೆಗಣಿಸಿ ಹೊರ ರಾಜ್ಯದವರಿಗೇ ನೀಡಲಾಗಿದೆ. ಇದರಿಂದಾಗಿ ಎಪಿಎಂಸಿಗೆ ಜಮೀನು ನೀಡಿದ ರೈತರು ಹಾಗೂ ಸ್ಥಳೀಯ ವ್ಯಾಪಾರಿಗಳಿಗೆ ಅನ್ಯಾಯವಾಗಿದೆ. ಆದ್ದರಿಂದ ಎಪಿಎಂಸಿ ಅಧಿಕಾರಿಗಳು ಹಾಗೂ ಸರ್ಕಾರ ಕಾನೂನು ಬಾಹಿರ ವ್ಯಾಪಾರಿ ಮಳಿಗೆ ತೆರವುಗೊಳಿಸಬೇಕು. ಇಲ್ಲದಿದ್ದಲ್ಲಿ ತೀವ್ರ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ದಯಾನಂದ್, ವರಕೋಡು ಕೃಷ್ಣೇಗೌಡ, ಸಿಂಧುವಳ್ಳಿ ಶಿವಕುಮಾರ್, ಹನುಮಂತಯ್ಯ ಉಪಸ್ಥಿತರಿದ್ದರು.

ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘಕ್ಕೆ ಉಪಾಧ್ಯಕ್ಷರಾಗಿ ರಮ್ಯ ಆಯ್ಕೆ




ಮೈಸೂರು, ಫೆ.28–ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಉಪಾಧ್ಯಕ್ಷರಾಗಿ ಡಾ.ಎಸ್.ಆರ್.ರಮ್ಯ ಆಯ್ಕೆಯಾಗಿದ್ದಾರೆ. ವಿಜಯಪುರದಲ್ಲಿ ಫೆ.23ರಂದು ನಡೆದ ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಪದಾಧಿಕಾರಿಗಳ ಆಯ್ಕೆ ಚುನಾವಣೆಯಲ್ಲಿ ಅವರು ಉಪಾಧ್ಯಕ್ಷೆಯಾಗಿ ಆಯ್ಕೆಗೊಂಡಿದ್ದಾರೆ.

ಈಗಿನ ಮಕ್ಕಳಲ್ಲಿ ಪುಸ್ತಕ ಓದುವ ಆಸಕ್ತಿಯೇ ಇಲ್ಲವಾಗಿದೆ

• ಚಿಂತಕ ಪ್ರೊ.ರಹಮತ್ ತರೀಕೆರೆ ವಿಷಾದ • ಜನರ ತೆರಿಗೆ ಹಣ, ಶಿಕ್ಷಣ, ಆರೋಗ್ಯಕ್ಕೆ ವಿನಿಯೋಗವಾಗಬೇಕು

ಮೈಸೂರು, ಫೆ.28(ಎಂಕೆ)– ನೋಡುವ ಮತ್ತು ಕೇಳುವ ಯುಗದಲ್ಲಿ ಪುಸ್ತಕಗಳನ್ನು ಓದುವ ಸಂಸ್ಕೃತಿ ಅಳಿಯುತ್ತಿದೆ. ನಮ್ಮ ಹೊಸ ತಲೆಮಾರು ಪುಸ್ತಕಗಳಿಂದ ವಿಮುಖವಾಗುತ್ತಿದ್ದು, ಪ್ರಿಂಟ್ ಸಂಸ್ಕೃತಿಯು ಡಿಜಿಟಲ್ ಸಂಸ್ಕೃತಿಯಾಗಿ ಬದಲಾಗುತ್ತಿದೆ ಎಂದು ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ, ಚಿಂತಕ ಪ್ರೊ.ರಹಮತ್ ತರೀಕೆರೆ ಅಭಿಪ್ರಾಯಿಸಿದರು.

ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಮೈಸೂರು ವಿವಿ ಪ್ರಸಾರಾಂಗದ ಕುವೆಂಪು ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ 'ಸಂಸ್ಕೃತಿ ನಿರ್ಮಾಣದಲ್ಲಿ ಪ್ರಸಾರಾಂಗದ ಪಾತ್ರ' ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪುಸ್ತಕಗಳ ಬಗೆಗಿನ ಕಲ್ಪನೆ ಬದಲಾಗುತ್ತಿದೆ. ಹೊಸ ತಲೆಮಾರಿನ ಮಕ್ಕಳಿಗೆ ಕುಳಿತು ಓದುವ ತಾಳ್ಮೆ ಇಲ್ಲದಂತಾಗುತ್ತಿದೆ. ಗಂಟೆಗಟ್ಟಲೆ ಮೊಬೈಲ್ ನೋಡುತ್ತಾರೆ. ಆದರೆ ಪುಸ್ತಕ ಓದುವ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ ಎಂದು ವಿಷಾದಿಸಿದರು.



'ಸಂಸ್ಕೃತಿ ನಿರ್ಮಾಣದಲ್ಲಿ ಪ್ರಸಾರಾಂಗದ ಪಾತ್ರ' ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಚಿಂತಕ ಪ್ರೊ.ರಹಮತ್ ತರೀಕೆರೆ ಮಾತನಾಡಿದರು.

ಸಾಮಾಜಿಕ ಜಾಲತಾಣ(ಫೇಸ್ ಬುಕ್) ದಲ್ಲಿ 50 ಪದಗಳ ಕಂಟೆಂಟ್ ಇದ್ದರೆ ಮಾತ್ರ ಕೆಲವರು ನೋಡುವ ಸಾಧ್ಯತೆ ಇದೆ. ಅದಕ್ಕಿಂತ ಜಾಸ್ತಿ ಇದ್ದರೆ, ಸ್ವೈಪ್ ಮಾಡುತ್ತಾರೆ. ಪುಸ್ತಕಗಳು ಒಂದು ರೀತಿಯಲ್ಲಿ ಅಳಿವಿನಂಚಿನಲ್ಲಿರುವ ಪ್ರಾಣಿಯಂತಾಗುತ್ತಿವೆ. ಇಂದು ಗ್ರಂಥಾಲಯಗಳು ಸೊಗಸಾಗಿವೆ. ಉತ್ತಮ ಪುಸ್ತಕಗಳಿವೆ. ಆದರೆ ಓದುವವರ ಸಂಖ್ಯೆ ಕಡಿಮೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ತಮ್ಮ ಜೀವನದಲ್ಲಿ ಸುಮಾರು 50 ಸಾವಿರ ಪುಸ್ತಕಗಳನ್ನು ಓದಿದ್ದಾರೆ. 40 ಸಾವಿರ ಪುಸ್ತಕಗಳನ್ನು ಓದಿರುವ ನೋಟ್ಸ್ ಇದ್ದು, ಅವರು ಬರೆದಿರುವ ಭಾರತ ಸಂವಿಧಾನದ ಅಡಿಯಲ್ಲಿ ನಾವುಗಳು ಇದ್ದೇವೆ ಎಂಬುದು ಹೆಮ್ಮೆಯ ವಿಷಯವಾಗಿದೆ ಎಂದರು.

'ನಹಿ ಜ್ಞಾನೇನ ಸದೃಶಂ' ಜ್ಞಾನಕ್ಕಿಂತ ಮಿಗಿಲಾದದ್ದು, ಯಾವುದೂ ಇಲ್ಲ ಎಂದು ಕೊಂಡಿದ್ದವು. ಆದರೆ ಇಂದು ಅಕ್ಷರ ಕಲಿತವರೇ ಭ್ರಷ್ಟರಾಗುತ್ತಿದ್ದಾರೆ. ಕುವೆಂಪು ಅವರು, ಶಿಕ್ಷಣ ಪಶುವನ್ನು ಮನುಷ್ಯನನ್ನಾಗಿ ಮಾಡುತ್ತದೆ ಎಂದಿದ್ದರು. ಆದರೆ, ಇಂದು ಅತೀ ಹೆಚ್ಚು ಶಿಕ್ಷಣ ಪಡೆದವರೇ ಪಶುಗಳಂತೆ ವರ್ತಿಸುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಕುವೆಂಪು ಅವರ ಬಗ್ಗೆಯೇ ಏಕವಚನದಲ್ಲಿ ಮಾತನಾಡುವವರಿದ್ದಾರೆ. ಹಾಗಾಗಿ ಜ್ಞಾನದ ಜೊತೆಗೆ ಮಾನವೀಯತೆ ಮತ್ತು ವಿವೇಕವನ್ನು ತಿಳಿಸುವ ಅನಿವಾರ್ಯತೆ ಇದೆ ಎಂದು ತಿಳಿಸಿದರು.

> ಹಳಗನ್ನಡ ಕಾವ್ಯ ಸಾಹಿತ್ಯಕ್ಕೆ ಮೈಸೂರು ವಿವಿ ಮಹತ್ವದ ಕೊಡುಗೆ ನೀಡಿದೆ. ಮೈಸೂರು ವಿವಿ ಪ್ರಸಾರಾಂಗ ಜ್ಞಾನ, ವಿಚಾರ ಪ್ರಸರಣದಲ್ಲಿ ದೊಡ್ಡ ಕೆಲಸ ಮಾಡಿದ್ದು, ಸಂಸ್ಕೃತಿ ನಿರ್ಮಾಣದಲ್ಲಿ ಮಹತ್ವದ ಪಾತ್ರ ನಿರ್ವಹಿಸಿದೆ. ಅನೇಕ ವಿಚಾರಗಳಿಂದ ಜನರಿಗೆ ತಿಳುವಳಿಕೆ ಕೊಟ್ಟ ಭವ್ಯ ಪರಂಪರೆ ಹೊಂದಿದೆ. 1916ರ ಮೈಸೂರು ವಿವಿ ಸಿಂಡಿಕೇಟ್ ಸಭೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು, ವಿಶ್ವವಿದ್ಯಾನಿಲಯಕ್ಕೆ ಬಾರದವರಿಗೂ ಜ್ಞಾನ ಮುಟ್ಟಿಸಲು ಕರೆ ನೀಡುತ್ತಾರೆ. ಅನಂತರ ಹಳ್ಳಿಗಳಿಗೆ ಪ್ರಾಧ್ಯಾಪಕರು ತೆರಳಿ ಖಗೋಳ, ನಕ್ಷತ್ರ, ಭೂಗೋಳ, ತ್ರಿಪದಿ, ಪಂಪನ ಮೇಲೆ ಉಪನ್ಯಾಸ ಕೊಡುತ್ತಾರೆ. ಈ ಮಾದರಿ ಪ್ರಯೋಗ ನಡೆದದ್ದು, ಮೈಸೂರು ವಿವಿಯಲ್ಲಿ ಮಾತ್ರ
> – ಪ್ರೊ.ರಹಮತ್ ತರೀಕೆರೆ, ಚಿಂತಕ

ಜ್ಞಾನ ವಿರೋಧಿ ಕೃತ್ಯ: ಕುವೆಂಪು ಮತ್ತು ದೇಜಗೌ ಅವರು, ಜಗತ್ತಿನ ಎಲ್ಲ ಜ್ಞಾನ ಮತ್ತು ವಿದ್ವಾಂಸರ ಪುಸ್ತಕಗಳನ್ನು ಕನ್ನಡದಲ್ಲಿಯೇ ದೊರೆಯಬೇಕೆಂದು ಹೇಳಿದರು. ಜನರ ತೆರಿಗೆ ಹಣವೂ ಜನತೆಯ ಶಿಕ್ಷಣ, ಆರೋಗ್ಯ, ಆಹಾರಕ್ಕೆ ವಿನಿಯೋಗವಾಗಬೇಕು. ಅಕ್ಷರ ಜ್ಞಾನ ನೀಡುವ ಪುಸ್ತಕಗಳ ರವಾನೆಯ ಮೇಲೂ ತೆರಿಗೆ ವಿಧಿಸುವುದು ಜ್ಞಾನ ವಿರೋಧಿ ಕೃತ್ಯ ಎಂದು ಅಸಮಾದಾನ ವ್ಯಕ್ತಪಡಿಸಿದರು.

ಇದೇ ವೇಳೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದ ಈಚೆಗೆ ನಿಧನರಾದ ಡಾ.ಕೆ.ಕೆಂಪೇಗೌಡ ಮತ್ತು ಕೆ.ಜಿ.ಪ್ರಕಾಶ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪ್ರಸಾರಾಂಗದ ನಿರ್ದೇಶಕ ಡಾ.ನಂಜಯ್ಯ ಹೊಂಗನೂರು, ಅಧೀಕ್ಷಕ ಚನ್ನಪ್ಪ ಮುದ್ರಣಾಲಯದ ನಿರ್ದೇಶಕ ಸತೀಶ್, ಗಾಯಕ ಅಮ್ಮ ರಾಮಚಂದ್ರ ಪ್ರಾರ್ಥಿಸಿದರು. ಡಾ.ಹೆಚ್.ಪಿ.ಮಂಜು ನಿರೂಪಿಸಿದರು. ವಿಜಯಮ್ಮ ಲಲಿತಾ, ರೇಣುಕಾ ಮತ್ತಿತರರಿದ್ದರು.

ನಾಳೆ ರೋಟರಿ ಪಶ್ಚಿಮ ಶಾಲೆಯಲ್ಲಿ ರಕ್ತದಾನ ಶಿಬಿರ

ಮೈಸೂರು, ಫೆ.28(ಜಿಎ)–ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಮತ್ತು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ವತಿಯಿಂದ ಮಾ.2ರಂದು ಸರಸ್ವತಿಪುರಂ ರೋಟರಿ ಪಶ್ಚಿಮ ಶಾಲೆಯಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷರಾದ ಕೆ.ಪಿ.ದಿವಾಕರ್ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 8 ಗಂಟೆಯಿಂದ ಆರಂಭವಾಗಿ ಮಧ್ಯಾಹ್ನ 3 ಗಂಟೆವರೆಗೂ ಶಿಬಿರ ನಡೆಯಲಿದೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಟಿ.ಎಸ್. ಶ್ರೀವತ್ಸ, ಹರೀಶ್‌ಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸಂಘದ ಗೌರವಾಧ್ಯಕ್ಷರಾದ ಎಂಎಲ್‌ಸಿ ಮಂಜೇಗೌಡ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ರಾಜೇಶ್, ನೀಲಕಂಠ ಕುಮಾರ್ ಶೆಟ್ಟಿ, ಎಸ್.ನಟರಾಜು ಮತ್ತಿತರರು ಉಪಸ್ಥಿತರಿದ್ದರು.

ಅಭಿನಂದನೆಗಳು



ನಮ್ಮ ಕನ್ನಿಕಾ ಕಾವೇರಿ ಶಾಲೆಯ ಸಂಸ್ಥಾಪಕರಾದ **ಶ್ರೀಮತಿ ಚೋಂದಮ್ಮ ಮೇಡಂ** ರವರಿಗೆ ಬ್ಯಾಂಕಾಕ್‌ನ ಅಸೋಸಿಯೇಷನ್ ಆಫ್ ಎಕನಾಮಿಕ್ ಗ್ರೋತ್ ಇವರ ವತಿಯಿಂದ ಅಂತರರಾಷ್ಟ್ರೀಯ ಉತ್ತಮ ಶಿಕ್ಷಣ ಸಂಸ್ಥೆಯ ರೂವಾರಿ ಎಂಬ ಪ್ರಶಸ್ತಿಯನ್ನು ಪಡೆದಿರುತ್ತಾರೆ ಇವರಿಗೆ ನಮ್ಮ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರ ವತಿಯಿಂದ ಶುಭಾಶಯಗಳನ್ನು ಕೋರುತ್ತೇವೆ.



ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯರಾದ

ಪೈಲ್ವಾನ್ ಶ್ರೀನಿವಾಸ್

ಅವರಿಗೆ

ಹುಟ್ಟುಹಬ್ಬದ ಶುಭಾಶಯಗಳು

ಶುಭಕೋರುವವರು



ದರ್ಶನ್ ಯುವಮುಖಂಡರು ಹಾಗೂ ಯಂಗ್ ಸ್ಟಾರ್ ಗೆಳೆಯರ ಬಳಗ, ಭೈರವೇಶ್ವರನಗರ, ಹೆಬ್ಬಾಳ, ಮೈಸೂರು



JOCKEY

FACTORY SECONDS UPTO 50% OFF*

*T & C apply

• 10 am to 8 pm • Open All Days • Master / Visa Card Accepted

INNERWEAR • LEISUREWEAR • ACTIVEWEAR • KIDSWEAR • SOCKS

Venue In Mysore

JLB Road — The Institution Of Engineers (Auditorium Hall), Jhansi Lakshmibai Road - 5

Org. by: Surya Agency Pvt. Ltd.

ಶ್ರೀ ಶರೀಫ್ ಅವರಿಗೆ ಕೃತಜ್ಞತೆಗಳು

ಜೈಪುರದಲ್ಲಿ ನಡೆದ ಮೋಟೋಫೈ ಫೆಸ್ಟ್ ಮೋಟೋಕ್ರಾಸ್ ಸ್ಪರ್ಧೆ

ಮೊಹಮ್ಮದ್ ಅರ್ಮಾನ್ ಜಯಶಾಲಿ

ಮೈಸೂರಿನ 11 ವರ್ಷದ ಸಾಹಸಿ ಬಾಲಕ **ಮೊಹಮ್ಮದ್ ಅರ್ಮಾನ್**, ಫೆಬ್ರವರಿ 26ರಂದು ರಾಜಾಸ್ಥಾನದ ಜೈಪುರದಲ್ಲಿ ನಡೆದ **ಮೋಟೋಫೈ ಫೆಸ್ಟ್ ಮೋಟೋಕ್ರಾಸ್** ಸ್ಪರ್ಧೆಯಲ್ಲಿ ಮೊದಲ ಸ್ಥಾನ ಗಳಿಸಿದರು. ಇವರು, ಕೋಚ್ **ಶ್ರೀಮಾನ್ ಶರೀಫ್** ಅವರ ಮಾರ್ಗದರ್ಶನದಲ್ಲಿ ಅದ್ವಿತೀಯ ಕೌಶಲ್ಯ ಮತ್ತು ಸಾಹಸ ಪ್ರದರ್ಶಿಸಿ, ವಿಜಯ ಸಾಧಿಸಿದ್ದಾರೆ.

ಅರ್ಮಾನ್ ಅವರ ಸಾಹಸ ಪ್ರಯಾಣವು, **ಶ್ರೀಮಾನ್ ಶರೀಫ್** ಅವರ ಸಮರ್ಥ ತರಬೇತಿ ಮತ್ತು ಶಿಸ್ತಿನ ಮಾರ್ಗದರ್ಶನವಿಲ್ಲದೆ ಹೋಗಿದ್ದರೆ ಸಾಧ್ಯವೇ ಆಗುತ್ತಿರಲಿಲ್ಲ. ಅವರು ಅರ್ಮಾನ್ ಪ್ರತಿಭೆಯನ್ನು ಉತ್ತೇಜಿಸುವಲ್ಲಿ ಮತ್ತು ಯುವ ರೈಡರ್ ಶಕ್ತಿಯನ್ನು ತುಂಬುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಕೋಚ್ ಮಾರ್ಗ ದರ್ಶನದಲ್ಲಿ, ಅರ್ಮಾನ್, ಬರೀ 7ನೇ ವಯಸ್ಸಿನಿಂದಲೇ ಹಲವು ಮೋಟೋಕ್ರಾಸ್ ರೇಸ್ ಗೆಲ್ಲುತ್ತಾ ಬಂದಿದ್ದು, ಇದುವರೆಗೆ 50ಕ್ಕೂ ಹೆಚ್ಚು ಪೊಡಿಯಂ ಫಿನಿಶ್‌ಗಳನ್ನು ಗಳಿಸಿದ್ದಾನೆ.

ಇತ್ತೀಚೆಗೆ ಜೈಪುರದ **ಪೂರ್ಣಿಮಾ ವಿಶ್ವವಿದ್ಯಾಲಯ ಮೈದಾನದಲ್ಲಿ** ನಡೆದ ಅತ್ಯಂತ ಸಾಹಸಮಯ ರೇಸ್‌ನಲ್ಲಿ ವಿಶ್ವವಿದ್ಯಾಲಯದ ಬೋರ್ಡ್ ಸದಸ್ಯರು ಮತ್ತು ಆಯೋಜಕರು ಉಪಸ್ಥಿತರಿದ್ದರು.

ಮೈಸೂರಿನ ಸೆಂಟ್ ಜೋಸೆಫ್ ಸೆಂಟ್ರಲ್ ಶಾಲೆಯ 6ನೇ ತರಗತಿ ವಿದ್ಯಾರ್ಥಿಯೂ ಆದ **ಅರ್ಮಾನ್**, ಆರೋಗ್ಯ ಸಮಸ್ಯೆಯನ್ನು ಲೆಕ್ಕಿಸದೆ, ಜೈಪುರದಲ್ಲಿ ಸ್ಪರ್ಧೆಗಿಳಿದು ಭಾರೀ ಅಂತರದ ದೂರವನ್ನು ತಲುಪಿ, ನಂತರವು ಗ್ಯಾಸ್ ಗ್ಯಾಸ್ MC 65 ಬೈಸಿಕಲ್‌ನಲ್ಲಿ ಚೆಸ್ಟ್ ನಂಬರ್ 09 ಅನ್ನು ಧರಿಸಿ ಬಹುಪಾಲು ವಿಭಾಗಗಳಲ್ಲಿ ಅದ್ಭುತ ಪ್ರದರ್ಶನ ನೀಡಿದರು. ಜೊತೆಗೆ ಅವರು ಕಿಡ್ಸ್ ಅಂಡರ್ 15 ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಅರ್ಮಾನ್‌ನ ಈ ಸಾಹಸಗಾಥೆಗೆ ಕಾರಣರು, ತರಬೇತುದಾರರಾದ

ಶ್ರೀಮಾನ್ ಶರೀಫ್ ಅವರಿಗೆ ಮತ್ತೊಮ್ಮೆ ನಮ್ಮೆಲ್ಲರ ಹೃದಯಪೂರ್ವಕ **ಕೃತಜ್ಞತೆಗಳು**



WANTED

Lecturer M.com 5 post

Telecallers - 10 post (Puc) Female

9886654463

M SAND UNIT FOR SALE

INCLUDING TRANSFORMER WEIGHMENT, PANEL BOARD, WHOLE UNIT

8050025266, 9731256717

IMKTA PRE SCHOOL TEACHER TRAINING

IMKTA Since 2003 — www.imkta.in

PRESCHOOL EDUCATION CONCLAVE 2025

& IMKTA 42ND BATCH CONVOCATION

Building a Strong Preschool Education in India

Invites • Preschool Teachers • Owners, Principal • Center Head • Coordinators

Registration Open for

•Speakers •Moderators •Listeners

09th March 2025 | 9:00 AM

Venue: Kings Kourt Hotel, Mysore

DIPLOMA IN MONTESSORI / PRIMARY TEACHER TRAINING COURSE

For Registration **7829937469**

ದೂ: 0821-2430422

ಆಶ್ರಿತ ಗೃಹ ನಿರ್ಮಾಣ ಸಹಕಾರ ಸಂಘ ನಿ.

12 & 13, ಮೊದಲನೇ ಮಹಡಿ, ಸುಮನ ಕಾಂಪ್ಲೆಕ್ಸ್, ಶಾಲಿವಾಹನ ರಸ್ತೆ, ನಜರ್‌ಬಾದ್, ಮೈಸೂರು-570 010

ದಿನಾಂಕ: 28.02.2025

ಚುನಾವಣೆ ವೇಳಾಪಟ್ಟಿ ಪ್ರಕಟಣೆ

ಆಶ್ರಿತ ಗೃಹ ನಿರ್ಮಾಣ ಸಹಕಾರ ಸಂಘ ನಿ.. ಮೊದಲನೇ ಮಹಡಿ ಸುಮನ ಕಾಂಪ್ಲೆಕ್ಸ್, ಶಾಲಿವಾಹನ ರಸ್ತೆ, ನಜರ್‌ಬಾದ್, ಮೈಸೂರು-570010 ಇದರ ಆಡಳಿತ ಮಂಡಳಿ ನಿರ್ದೇಶಕರುಗಳ ಚುನಾವಣೆಯನ್ನು ದಿನಾಂಕ:16-03-2025ರ ಭಾನುವಾರ ಬೆಳಗ್ಗೆ 9-00 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ ಸ್ಥಳ:-ವಿವೇಕು ವಿದ್ಯಾಲಯ #ಪಿಬಿ-2, ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಮೆಗಾ ಡೇರಿ ಹಿಂಭಾಗ, ಆಲನಹಳ್ಳಿ ಬಡಾವಣೆ (ಲಲಿತ ಮಹಲ್ ನಗರ), ಮೈಸೂರು (ರುಕ್ಮಿಣಿ ರಾಮಚಂದ್ರ ಕಲ್ಯಾಣ ಮಂಟಪ ಎದುರು) ಇಲ್ಲಿ ನಡೆಸಲು ನಿಗಧಿಪಡಿಸಲಾಗಿದ್ದು, ನಾಮಪತ್ರಗಳನ್ನು ಬೆಳಗ್ಗೆ 11-00 ಗಂಟೆಯಿಂದ ಅಪರಾಹ್ನ 3-00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ:08-03-2025 ನಾಮಪತ್ರಗಳ ಪರಿಶೀಲನೆಯನ್ನು ದಿನಾಂಕ:09-03-2025 ರಂದು ಬೆಳಗ್ಗೆ 11-00 ಗಂಟೆಗೆ ಸಂಘದ ಕಛೇರಿಯಲ್ಲಿ ನಡೆಸಲಾಗುವುದು.

ಹೆಚ್ಚಿನ ವಿವರಗಳಿಗೆ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ರಿಟರ್ನಿಂಗ್ ಅಧಿಕಾರಿರವರನ್ನು ಸಂಪರ್ಕಿಸುವುದು.

ದಿನಾಂಕ : 28-02-2025 — ಸಹಿ/- ರಿಟರ್ನಿಂಗ್ ಆಫೀಸರ್

ಸ್ಥಳ:- ಮೈಸೂರು

ಸೂಚನೆ:- ಮತದಾನದ ಸಮಯದಲ್ಲಿ ಸಂಘದ ಗುರುತಿನ ಕಾರ್ಡ್‌ನ್ನು ಕಡ್ಡಾಯವಾಗಿ ಹಾಜರುಪಡಿಸಬೇಕಾಗಿದ್ದು ಇಲ್ಲಿಯವರೆಗೂ ಗುರುತಿನ ಕಾರ್ಡ್‌ನ್ನು ಪಡೆಯದೇ ಇರುವಂತಹ ಅರ್ಹ ಮತದಾರರು ತಮ್ಮ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಎರಡು ಭಾವಚಿತ್ರಗಳನ್ನು ಸಂಘದ ಕಛೇರಿ ವೇಳೆಯಲ್ಲಿ ಸಲ್ಲಿಸಿ ಗುರುತಿನ ಕಾರ್ಡ್ ಪಡೆದುಕೊಳ್ಳಲು ಸೂಚಿಸಿದೆ.

ಸಹಿ/- ಮುಖ್ಯಕಾರ್ಯನಿರ್ವಹಣಾಧಿಕಾರಿ

ಆಶ್ರಿತ ಗೃಹ ನಿರ್ಮಾಣ ಸಹಕಾರ ಸಂಘ (ರಿ) -570010

Exchange your old sofa set to brand new sofa set. Also repair done.

Mob: 9591012944

WANTED SITES

We want 30x40, 40x60 Sites in Panchacharya Layout, Sadhana Layout, Kalyani Layout or any Layout attached to Vijayanagar 4th stage for immediate registration.

Directly from owner. Call:

8073300783 / 8884616461

WANTED

- Front office / Male Receptionist - Any Degree
- General Manager - 3 years experience in hospitality
- Accounts - 2 years experience, B.Com / Tally a must
- CRM - Customer Relationships Management 2 years experience

Call : **96060 98085**

Email : theclovers.mysore@gmail.com

1 KAR ARTY BTY NCC MYSURU

#26, 9th Cross, 2nd Main, 2nd Stage Bridavan Extension Mysuru-570020

EX SERVICEMEN HIRING

DGNCC, MoD invites applications from Retired Army, JCOs & NCOs for appointment as

CONTRACTUAL INSTRUCTORS STAFF.

For Details and apply, visit

https://nis.bisag.n.gov.in/nis/ downloads-public

Last date for submission of applications

13 Mar 2025

for more Information contact: **9844155026**

Statement of Ownership and other particulars about newspaper

MYSORE MITRA

MYSORE

As required to be published under the Press & Registration of Books Act and Rules.

FORM - IV

(See Rule-8)

1. Place of publication: **Mysore**
2. Periodicity of Publication: **Daily**
3. Printer's name, address and citizenship: **T.S. Gopinath,** No. 15-C, Industrial 'A' Layout, Bannimantap, Mysore-570 015. Citizen of India.
4. Publisher's name, address & citizenship: **M. Govinde Gowda,** No. 15-C, Industrial 'A' Layout, Bannimantap, Mysore-570 015. Citizen of India.
5. Editor's name, address & citizenship: **M. Govinde Gowda,** No. 15-C, Industrial 'A' Layout, Bannimantap, Mysore- 570 015. Citizen of India.
6. Name and addresses of individuals who own the Newspaper and partners or Shareholders, holding more than one percent of the total capital: Owner: Academy Newspapers Pvt. Ltd., No. 15-C, Industrial 'A' Layout, Bannimantap, Mysore-570 015.

SHAREHOLDERS

1. **Mr. K.B. Ganapathy,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.
2. **Mrs. K.K. Devamma,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.
3. **Mr. K.G. Vikram Muthanna,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.
4. **Mr. K.G. Mickey Bopanna,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.

I, **M. Govinde Gowda,** Publisher, hereby declare that the particulars given above are true to the best of my knowledge and belief.

—**M. Govinde Gowda**

Date: 1-3-2025 Publisher

Central Sericultural Research & Training Institute

Central Silk Board (Min. of Textiles - Govt. of India)

Manandavadi Road, Srirampura, Mysore-570 008

RIGHT TO INFORMATION — 150 YEARS OF CELEBRATING THE MAHATMA

No. CS&RTI / MPL / PA / March / 2024-25 — Date : 20.02.2025

WALK-IN-INTERVIEW FOR THE POST OF PROJECT ASSISTANT

A Walk-in-Interview will be held on 18/03/2025 at Central Sericultural Research and Training Institute, Srirampura, Mysuru-570 008 as shown below:

`A' 01 (One) PROJECT ASSISTANT (PA) purely on contract basis under CSB approved Project **"Identification of promising mulberry genotypes for physiological efficiency and their relationship with yield and quality under limited irrigation and fertilizer conditions"** ***(PIP 01037 SI)*** purely on contract basis for a period Upto **June 2028** or completion of project whichever is earlier under CSB Terms and Conditions.

Qualifications for Project Assistant (PA): B.Sc., in Sericulture / Agriculture /Botany / Bio-chemistry / Biotechnology / Life Sciences with minimum 55% marks (50% for SC/ST candidates). Walk-in-Interview will be held on **18/03/2025,** time 10:30 AM (candidates should reach the venue by 9:30 AM for verification of documents, other recruitment procedures)

Interested can also visit our website www.csrtimys.res.in | https://csb.gov.in/ for details.

Sd/- Director, CSR&TI, Mysore

ವಿನಿಮಯ ಕೊಡುಗೆಗಳು

ನಿಮ್ಮ ಹಳೆಯ ಕುಕ್ಕರ್ ಹಾಗೂ ಗ್ಯಾಸ್ ಸ್ಟೌವ್‌ಗಳನ್ನು ಬದಲಾಯಿಸಿಕೊಳ್ಳಿ ಹಾಗೂ ಹೊಸ ಸ್ಟೌವ್‌ಗಳ ಮೇಲೆ

₹6000/- ವರೆಗೆ ರಿಯಾಯಿತಿ ಪಡೆಯಿರಿ

ಮತ್ತು ಹೊಸ ಕುಕ್ಕರ್‌ಗಳ ಮೇಲೆ

40%* ರಿಯಾಯಿತಿ ಪಡೆಯಿರಿ.

Hawkins stahl. Prestige VINOD Vidiem

ಹಾಗೂ ಇತ್ಯಾದಿ....



ಮೋಹನ್ ಭಂಡಾರ್®

ಸಯ್ಯಾಜಿ ರಾವ್ ರಸ್ತೆ

ಮೈಸೂರು

ಫೋನ್ : 9606233433, 0821-2445566

ವಿದ್ಯುತ್ ಉಪಕರಣಗಳು, ಗ್ಯಾಸ್ ಸ್ಟೌವ್, ಕುಕ್ಕರ್ ಮತ್ತು ವೆಟ್ ಗ್ರೈಂಡರ್‌ಗಳ ಅಧಿಕೃತ ಸರ್ವೀಸ್ ಸೆಂಟರ್

ನಮ್ಮದು ಯಾವುದೇ ಶಾಖೆಗಳಿಲ್ಲ



ಮೈಸೂರು ಮಹಾನಗರ ಪಾಲಿಕೆಯ ಮಾಜಿ ಸದಸ್ಯರಾದ

(ವಾರ್ಡ್ ನಂ. 4, ಲೋಕನಾಯಕನಗರ, ಹೆಬ್ಬಾಳು)

ಶ್ರೀ ಪೈಲ್ವಾನ್ ಶ್ರೀನಿವಾಸ್‌ರವರಿಗೆ

ಹುಟ್ಟುಹಬ್ಬದ ಶುಭಾಶಯಗಳು





ರವೀಶ್ ಶ್ರೀನಿವಾಸ್

ಹುಟ್ಟುಹಬ್ಬದ ಪ್ರಯುಕ್ತ (ದಿನಾಂಕ : 01-03-2025)

ಪೈಲ್ವಾನ್ ಶ್ರೀನಿವಾಸ್‌ರವರ ಸ್ನೇಹ ಬಳಗದ ವತಿಯಿಂದ

ಉಚಿತ ಆರೋಗ್ಯ ತಪಾಸಣಾ ಶಿಬಿರ

* ಬಿ.ಪಿ. * ಶುಗರ್ * ಇ.ಸಿ.ಜಿ. * ಕಣ್ಣಿನ ತಪಾಸಣೆ * Cancer ಸಂಬಂಧಿತ ತಪಾಸಣೆ * ಕಿಡ್ನಿ, ಗ್ಯಾಸ್ಟ್ರಿಕ್, ಮೂಳೆ, ಕಿವಿ, ಮೂಗು, ಗಂಟಲು, ನರ ಸಂಬಂಧಿತ ಖಾಯಿಲೆಗಳ ಆರೋಗ್ಯ ತಪಾಸಣೆ * ಸಾಮಾನ್ಯ ತಪಾಸಣೆ ಹಾಗೂ * ಮಹಿಳಾ ಆರೋಗ್ಯ ತಪಾಸಣೆ

ದಿನಾಂಕ : 01-03-2025, ಶನಿವಾರ ಸಮಯ : ಬೆಳಗ್ಗೆ 7.30 ರಿಂದ ಮಧ್ಯಾಹ್ನ 12.30 ರವರೆಗೆ

ಸ್ಥಳ : ಬಸವನಗುಡಿ ಉದ್ಯಾನವನ, ಬಸವನಗುಡಿ ಸರ್ಕಲ್, ಡಾ. ಸುಧಾಮೂರ್ತಿ ರಸ್ತೆ, ಹೆಬ್ಬಾಳು, ಮೈಸೂರು



ಶುಭ ಕೋರುವವರು

ಪುಟ್ಟರಾಜು ಮತ್ತು ಸ್ನೇಹಿತರು, ಹೆಬ್ಬಾಳು

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು